# ೮ ನೆಯ ತರಗತಿ

# ಪ್ರಥಮ ಭಾಷೆ ಸಿರಿ ಕನ್ನಡ


# ಗದ್ಯ ಮತ್ತು ಪದ್ಯಗಳ ಪ್ರಶ್ನೋತ್ತರಗಳು

ರಚನೆ : ಮಮತಾ ಭಾಗ್ವತ . ಸ.ಶಿ.

ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು -೬೮

# ಗದ್ಯ –೧ ಮಗ್ಗದ ಸಾಹೇಬ – ಬಾಗಲೋಡಿ ದೇವರಾಯ

## ಕೃತಿಕಾರರ ಪರಿಚಯ



೧೯೨೭ ರಲ್ಲಿ ಜನಿಸಿದ ಬಾಗಲೋಡಿ ದೇವರಾಯರು ದಕ್ಷಿಣ ಕನ್ನಡ ಜಿಲ್ಲೆಯ ಬಾಗಲೋಡಿಯವರು.ಮಾಸ್ತಿಯವರ ಸಮಕಾಲೀನರಾದ ಇವರು ಸಣ್ಣ ಕತೆಗಳನ್ನು ಬರೆದವರು.ಇವರ ಕಥಾ ಸಂಗ್ರಹಗಳೆಂದರೆ ಹುಚ್ಚು ಮನಸ್ಸಿನ ಮುನಸೀಫ ಮತ್ತು ಇತರ ಕತೆಗಳು.ಆರಾಧನಾ ,ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು.ಇವರು ಒಟ್ಟು ೨೬ ಕತೆಗಳನ್ನು ಬರೆದಿದ್ದಾರೆ.ಇವರು ೧೯೮೫ ರಲ್ಲಿ ನಿಧನರಾದರು.

ಪ್ರಸ್ತುತ 'ಮಗ್ಗದ ಸಾಹೇಬ 'ಗದ್ಯಬಾಗವನ್ನು ಇವರ ಸಮಗ್ರ ಕತೆಗಳು ಎಂಬ ಕಥಾ ಸಂಕಲನದಿಂದ ಆರಿಸಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ರಹೀಮ ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು ?

ಉ: ರಹೀಮ ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಗಳಾಗಿತ್ತು.

೨.ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು ?

ಉ: ದೇವಾಲಯದ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕು ಇತ್ತು.

೩. ಅಬ್ದುಲ್ ರಹೀಮನ ಹಠವೇನು ?

ಉ: ಅವನ ಮೂವರು ಗಂಡು ಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕೆಂಬುದು ಅಬ್ದುಲ್ ರಹೀಮನಿಗಿದ್ದ ಹಠವಾಗಿತ್ತು.

೪.ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ನೆರವೇರಿಸಿದ ಬಗೆ ಹೇಗೆ?

ಉ: ರಹೀಮನ ಆಸೆಯಂತೆ ಅವನ ಒಬ್ಬ ಮಗನು ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದರೆ ,ಇನ್ನೊಬ್ಬನು ಪೋಸ್ಟ್ ಮಾಸ್ತರನಾದನು.ಹೀಗೆ ವಿಧೇಯರಾಗಿ ರಹೀಮನ ಅಭೀಷ್ಟವನ್ನು ನೆರವೇರಿಸಿದರು.

೫. ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ ?

ಉ: ರಹೀಮನು ತನ್ನ ಮಗನಿಗೆ ಮಗ್ಗದ ಹುಚ್ಚು ಬಿಡಿಸಬೇಕೆಂದು ಅವನನ್ನು ಶಾಲೆಯಿಂದ ಬಿಡಿಸಿದನು.

**ಎರಡು /ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಹುಸೇನ್ ಸಾಹೇಬರ ವ್ಯಕ್ತಿತ್ವವನ್ನು ವಿವರಿಸಿ.

ಉ: ಸಾಹೇಬ್ ಬಹಾದ್ದೂರ್ ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ ದೇವಸ್ಥಾನವನ್ನೂ ಕಟ್ಟಿಸಿದ್ದರು.

೨. ಲೇಖಕರ ಹುಟ್ಟೂರಿನಲ್ಲಿ ಮುಸ್ಲಿಂ ಧಾರ್ಮಿಕ ಉತ್ಸವದ ಸಂಪ್ರದಾಯವೇನು ?

ಉ: ಲೇಖಕರ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಅದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ ಉರ್ಸ್ ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ಲೇಖಕರ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.

೩. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳ ಆಕ್ಷೇಪವೇನು ?

ಉ: ಲೇಖಕರ ಹುಟ್ಟೂರಿನಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಅವರ ಧಾರ್ಮಿಕ ಹಬ್ಬದ ಸಂದರ್ಭಗಳಲ್ಲಿ ಪರಸ್ಪರರನ್ನು ಆಹ್ವಾನಿಸುವುದು , ಪ್ರಸಾದ ಹಂಚುವ ಸಂಪ್ರದಾಯವಿತ್ತು. ಒಮ್ಮೆ ಗಣೇಶ ಚತುರ್ಥಿಯ ಸಂದರ್ಭದಲ್ಲಿ ಲೇಖಕರ ತಾಯಿ ಕಾಯಿಲೆ ಬಿದ್ದ ಕಾರಣ ಲೇಖಕರ ತಂದೆಯವರು ಮನೆಯಲ್ಲಿ ಮೋದಕ ,ಉಂಡೆ ,ಚಕ್ಕುಲಿ ಇತ್ಯಾದಿಗಳನ್ನು ಮಾಡಲಾಗದೇ ಅಂಗಡಿಯಿಂದ ಲಡ್ಡುಗಳನ್ನು ತಂದು ಕೊಟ್ಟಿದ್ದಕ್ಕೆ ಅವರ ಮುಸಲ್ಮಾನ ಸ್ನೇಹಿತರಿಗೆ ಬೇಸರವಾಗಿ 'ಅಂಗಡಿಯಿಂದ ತಂದು ಕೊಳ್ಳಲು ನಮ್ಮ ಬಳಿ ಹಣವಿಲ್ಲವೇ ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲ ಅಥವಾ ಕಲ್ಲು ಸಕ್ಕರೆ ಹರಳನ್ನೋ ಕೊಡಿ .ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ಹಿಂದಿನಿಂದಲೂ ಬಂದ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ ಎಂದರು.

೪. ಕರೀಮನಿಗೆ ಶಾಲೆಯಲ್ಲಿ ಮಗ್ಗ ಕಲಿತುದರಿಂದ ಆದ ಪ್ರಯೋಜನವೇನು ?

ಉ: ಕರೀಮನು ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾದನು. ಅಲ್ಲದೇ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಅವನ ಗುರುಗಳಾದ ಶಂಕರಪ್ಪ ಅವರು ಪ್ರಶಂಸಿಸಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರಿಂದ ಅದರ ಫಲ ಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮನಿಗೆ ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದಿತು.

೫.ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು ?

ಉ: ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ನಾಟಕದಲ್ಲಿ ಕರೀಮನದು ಸ್ತ್ರೀ ಪಾತ್ರ ವಿತ್ತು.ಅದಕ್ಕೆಂದು ಅವನು ತಾಯಿಯಿಂದ ಗೌಪ್ಯವಾಗಿ ಹಳೆಯ ಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡನು. ನಾಟಕ ಮುಗಿದ ನಂತರ ಅವನು ಮನೆಗೆ ಬರದೇ ಎಲ್ಲೋ ಮಾಯವಾಗಿ ಹೋದ .

ನಾಲ್ಕು ಐದು ವಾಕ್ಯಗಳಲ್ಲಿ ಉತ್ತರಿಸಿ.

೧. ನವೀನ ಶಿಕ್ಷಣದ ವೈಶಿಷ್ಟ್ಯಗಳೇನು ?

ಉ: ಮಹಾತ್ಮ ಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ ನವೀನ ಶಿಕ್ಷಣ ಪ್ರಾರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು ,ಅವರಲ್ಲಿ ಹಸ್ತ ಕೌಶಲವನ್ನು , ದೇಹಶ್ರಮದಲ್ಲಿ ಗೌರವ ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ ,ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ , ಕೆಲವರಿಗೆ ಕೃಷಿ , ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

೨.ಶಂಕರಪ್ಪ ಅವರು ರಹೀಮನ ಬಳಿಗೆ ಸಂಧಾನಕ್ಕಾಗಿ ಬಂದ ಪ್ರಸಂಗವನ್ನು ತಿಳಿಸಿ.

ಉ: ಮಗ್ಗವು ತಮ್ಮ ಬದುಕಿನ ಬಡತನಕ್ಕೆ ಕಾರಣವಾಯಿತೆಂದು ತಿಳಿದ ಅಬ್ದುಲ್ ರಹೀಮನು ತನ್ನ ಮಕ್ಕಳೆಲ್ಲರೂ ಸರ್ಕಾರಿ ನೌಕರಿ ಸೇರಲೆಂದು ಹಂಬಲಿಸಿದನು.ಅವನ ಇಚ್ಛೆಯಂತೆ ಅವನ ಮೊದಲ ಇಬ್ಬರು ಮಕ್ಕಳು ಸರ್ಕಾರಿ ನೌಕರರಾದರು .ಆದರೆ ಕಿರಿಯ ಮಗ ಕರೀಮನು ಮಗ್ಗದ ಸಹವಾಸಕ್ಕೆ ಬಿದ್ದು , ನಾಟಕದ ಸಂದರ್ಭದಲ್ಲಿ ಹಾಕಿದ ಸ್ತ್ರೀ ವೇಷದ ನೆಪದಲ್ಲಿ ತಾಯಿಯ ಒಡವೆಯನ್ನು ತೆಗೆದುಕೊಂಡು ಮನೆಯಿಂದ ದೂರಾದನು. ಮತ್ತೆ ದೊಡ್ಡವನಾಗಿ ಬಂದಾಗ ಅವನ ತಂದೆ ಅವನನ್ನು ಮನೆಗೆ ಸೇರಿಸಲಿಲ್ಲ.ಆ ಸಂದರ್ಭದಲ್ಲಿ ಅವನು ತನಗೆ ಕಲಿಸಿದ ಗುರು ಶಂಕರಪ್ಪರನ್ನು ಭೇಟಿಯಾಗಿ ತಾಯಿಯನ್ನು ನೋಡಲು,ಅವಳ

ಒಡವೆ ಹಿಂದಿರುಗಿಸಲು ಅವಕಾಶ ಕೊಡಿ ಸಿ ಎಂದು ಗೋಗರೆದಾಗ ಶಂಕರಪ್ಪ ಅವರು ಅಬ್ದುಲ್ ರಹೀಮನ ಬಳಿ ಬಂದು ಕೇಳಿಕೊಂಡರೂ ಏನು ಪ್ರಯೋಜನವಾಗಲಿಲ್ಲ.ಅವರು ಕಲಿಸಿದ ಪಾಠದಿಂದಲೇ ಕರೀಮನು ನಮ್ಮ ವಂಶದ ಕೀರ್ತಿ ಹಾಳು ಮಾಡಿದನೆಂದು ಕರೀಮನ ತಂದೆ ರಹೀಮನು ಬೈದು ಕಳಿಸಿಬಿಡುವನು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ಕರೀಮ ಧನವಂತನಾದ ಬಗೆ ಹೇಗೆ ? –ವಿವರಿಸಿ.

ಕರೀಮನ ತಂದೆ ರಹೀಮನು ಮಗನಿಗೆ ಮಗ್ಗದ ಹುಚ್ಚು ಬಿಡಿಸಲು ಮಾಡಿದ ಪ್ರಯತ್ನ ಯಶಸ್ವಿಯಾಗಲಿಲ್ಲ.ಅವನು ನಾಟಕದ ಸಂದರ್ಭದಲ್ಲಿ ಸ್ತ್ರೀ ಪಾತ್ರದ ಸಂದರ್ಭದಲ್ಲಿ ತಾಯಿಯ ಒಡವೆ ಪಡೆದು ಮಾಯವಾದನು. ಕೆಲವು ವರ್ಷ ಕಳೆದ ಮೇಲೆ ತಾನು ತೆಗೆದುಕೊಂಡು ಹೋದ ತಾಯಿಯ ಒಡವೆ ಮತ್ತು ಹತ್ತುಸಾವಿರ ರೂಪಾಯಿಗಳೊಂದಿಗೆ ಮರಳಿ ಬರುವನು. ಅದಕ್ಕೆ ಕಾರಣವಾಗುವುದು ಅವನ ಪರಿಶ್ರಮ .ಅವನು ಸಣ್ಣ ಪ್ರಾಯದಲ್ಲಿಯೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅದರ ಅಧ್ಯಕ್ಷನಾಗಿದ್ದನು. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದನು. ಅಲ್ಲದೇ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನು ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದನು.

೨. ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು ?

ಮಗ್ಗದ ಸಾಹೇಬ ಎಂದರೆ ಅಬ್ದುಲ್ ರಹೀಮ ಸಾಹೇಬ .ಅವನು ಮಗ್ಗವನ್ನು ಮುಟ್ಟದೆ ಹಲವು ವರ್ಷಗಳೇ ಕಳೆದು ಹೋಗಿದ್ದವು.ಅವನಿಗೆ ಮಗ್ಗದ ಸಾಹೇಬ ಎಂದರೆ ಸಿಟ್ಟು ಬರುತ್ತಿತ್ತು.ಅನಿಷ್ಟ ಮಗ್ಗದ ಹೆಸರೆತ್ತಬೇಡಿ ಅದು ಮಗ್ಗವಲ್ಲ ಕೊರಳಿಗೆ ಹಗ್ಗ ಎನ್ನುತ್ತಿದ್ದನು. ಅದಕ್ಕೆ ಕಾರಣ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತೀ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿದರು. ಅವು ನಿಕೃಷ್ಟ ವಸ್ತುಗಳಾಗಿದ್ದು ಒಂದು ವರ್ಷದೊಳಗೆ ಹರಕು ಚಿಂದಿಯಾಗುವಂತವು . ಆದರೂ ಅಗ್ಗದ ಬೆಲೆಯಲ್ಲಿ ದೊರಕುವುದರಿಂದ ಜನ ಅದನ್ನೇ ಖರೀದಿಸಲು ಪ್ರಾರಂಭಿಸಿ ಅಲ್ಲಿ ಅಗ್ಗದ ಮಾಲಿನದೇ ಅಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು. ಇದೇ ಪರಿಸ್ಥಿತಿ ರಹೀಮನಿಗೂ ಬಂದೊದಗಿತು. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬ ಸ್ಥಿತಿ ಒದಗಿತು. ಇದರಿಂದಾಗಿ ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಯಿತು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. ''ಮಗ್ಗವಲ್ಲ ಕೊರಳಿಗೆ ಹಗ್ಗ !''

ಉ: ಈ ಮೇಲಿನ ವಾಕ್ಯವನ್ನು ಬಾಗಲೋಡಿ ದೇವರಾಯರು ಬರೆದ ಸಮಗ್ರ ಕತೆಗಳು ಸಂಕಲನದಿಂದ ಆರಿಸಲಾದ ಮಗ್ಗದ ಸಾಹೇಬ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಅಬ್ದುಲ್ ರಹೀಮ ಹೇಳಿದನು.

ಸಂದರ್ಭ : ಬ್ರಿಟಿಷರು ಭಾರತದಲ್ಲಿ ಅಗ್ಗದ ವಿಲಾಯತೀ ಮಿಲ್ಲಿನ ಬಟ್ಟೆಗಳನ್ನು ಹೇರಿದ್ದರಿಂದ ,ಅವು ಅಗ್ಗದ ದರದಲ್ಲಿ ದೊರೆಯುತ್ತಿದ್ದುದರಿಂದ ಭಾರತದಲ್ಲಿ ಅಗ್ಗದ ಮಾಲಿನದೇ ಅಧಿಪತ್ಯವಾಯಿತು.ಮಗ್ಗದವರು ಭಿಕಾರಿಗಳಾದರು.ಅವರ ಅನ್ನಕ್ಕೆ ಸಂಚಕಾರವಾಯಿತು. ಬದುಕಿಗಾಗಿ ಮಗ್ಗವನ್ನೇ ಅವಲಂಬಿಸಿದ್ದ ರಹೀಮನು ಇದರಿಂದಾಗಿ ಬಡತನದ ಸ್ಥಿತಿ ಅನುಭವಿಸುವಂತಾಯಿತು. ಅದಕ್ಕಾಗಿ ಯಾರಾದರೂ ಅವನಿಗೆ ಮಗ್ಗದ ಸಾಹೇಬ ಎಂದು ಹೇಳಿದರೆ ಅವನಿಗೆ ಬಹುಸಿಟ್ಟು ಬರುತ್ತಿತ್ತು.ಅನಿಷ್ಟ ಮಗ್ಗದ ಹೆಸರೆತ್ತಬೇಡಿ ಎನ್ನುತ್ತಿದ್ದ ಅವನು ಮೇಲಿನಂತೆ ಹೇಳುತ್ತಿದ್ದನು.

ಸ್ವಾರಸ್ಯ : ಒಂದು ಕಾಲದಲ್ಲಿ ಜೀವನಕ್ಕೆ ಆಧಾರವಾಗಿದ್ದ ಮಗ್ಗದ ಉದ್ಯೋಗವು ಬ್ರಿಟಿಷರ ಕಾರಣದಿಂದಾಗಿ ತನ್ನ ಮೌಲ್ಯವನ್ನು ಕಳೆದುಕೊಂಡು ಅದನ್ನೇ ಆಧಾರವಾಗಿಟ್ಟುಕೊಂಡು ಬದುಕುತ್ತಿದ್ದ ರಹೀಮನ ಬದುಕಿನ ಸಂಕಷ್ಟಕ್ಕೆ ಕಾರಣವಾಯಿತು ಎಂಬ ನಿರಾಶೆ ರಹೀಮನ ಮಾತಿನಲ್ಲಿ ವ್ಯಕ್ತವಾಗಿದೆ.

೨.''ಕಳ್ಳನಾದವನು ,ಮನೆ ಬಿಟ್ಟು ಓಡಿ ಹೋದವನು ಮಗನೇ ಅಲ್ಲ''

ಉ: ಈ ಮೇಲಿನ ವಾಕ್ಯವನ್ನು ಬಾಗಲೋಡಿ ದೇವರಾಯರು ಬರೆದ ಸಮಗ್ರ ಕತೆಗಳು ಸಂಕಲನದಿಂದ ಆರಿಸಲಾದ ಮಗ್ಗದ ಸಾಹೇಬ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಅಬ್ದುಲ್ ರಹೀಮ ಹೇಳಿದನು.

ಸಂದರ್ಭ : ತಮ್ಮ ಕಷ್ಟದ ಪರಿಸ್ಥಿತಿಗೆ ಕಾರಣವಾದ ಮಗ್ಗವನ್ನು ತ್ಯಜಿಸಿದ ರಹೀಮನಿಗೆ ತನ್ನ ಮಕ್ಕಳೆಲ್ಲರೂ ಓದಿ ಸರ್ಕಾರಿ ಕೆಲಸ ಸೇರಲಿ ಎಂಬ ಬಯಕೆಯಿತ್ತು. ಆದರೆ ಅವನ ಕಿರಿಯ ಮಗ ಕರೀಮನು ಮಗ್ಗದ ಕೆಲಸವನ್ನು ಕಲಿತು ಸರಕಾರದಿಂದ ಬಹುಮಾನವನ್ನೂ ಪಡೆದನು. ತಂದೆ ಮಗನಿಗೆ ಮಗ್ಗದ ಹುಚ್ಚು ಬಿಡಿಸಬೇಕೆಂದು ಶಾಲೆ ಬಿಡಿಸಿದರೂ ಶಾಲಾ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ನಾಟಕದಲ್ಲಿ ಸ್ತ್ರೀ ಪಾತ್ರ ನಿರ್ವಹಿಸಿದ ಕರೀಮನು ನಾಟಕದ ಪಾತ್ರಕ್ಕಾಗಿ ತನ್ನ ತಾಯಿಯ ಒಡವೆಯನ್ನು ಎರವಲು ಪಡೆದವನು ನಾಟಕ ಮುಗಿದ ನಂತರ ಮನೆಗೆ ಮರಳಲೇ ಇಲ್ಲ. ಆಗ ಕೋಪಗೊಂಡ ತಂದೆ ಅಬ್ದುಲ್ ರಹೀಮನು ಮಗನನ್ನು ಶಪಿಸುತ್ತ ಮೇಲಿನಂತೆ ಹೇಳಿದನು.

ಸ್ವಾರಸ್ಯ : ತಮ್ಮ ದುರವಸ್ಥೆಗೆ ಕಾರಣವಾದ ಮಗ್ಗದ ಮೇಲಿನ ವ್ಯಾಮೋಹವನ್ನು ಬಿಡಿಸಿ ಎಲ್ಲ ಮಕ್ಕಳನ್ನೂ ಸರ್ಕಾರಿ ನೌಕರರನ್ನಾಗಿ ಮಾಡಬೇಕೆಂಬ ಅಪೇಕ್ಷೆ ಹೊಂದಿದ್ದ ಅಬ್ದುಲ್ ರಹೀಮನಿಗೆ ಮಗ ಕರೀಮನು ಮಗ್ಗದ ಮೇಲೆ ಆಸಕ್ತಿ ತೋರಿಸಿದ್ದು ಅಸಮಾದಾನಕ್ಕೆ ಕಾರಣವಾಯಿತೆಂಬುದನ್ನು ಮೇಲಿನ ವಾಕ್ಯ ತಿಳಿಸುತ್ತದೆ.

೩. '' ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ ''

ಉ: ಈ ಮೇಲಿನ ವಾಕ್ಯವನ್ನು ಬಾಗಲೋಡಿ ದೇವರಾಯರು ಬರೆದ ಸಮಗ್ರ ಕತೆಗಳು ಸಂಕಲನದಿಂದ ಆರಿಸಲಾದ ಮಗ್ಗದ ಸಾಹೇಬ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಈ ಮಾತನ್ನು ಕರೀಮನು ತನ್ನ ಗುರುಗಳಾದ ಶಂಕರಪ್ಪ ಅವರಿಗೆ ಹೇಳಿದನು. ಮಗ್ಗದ ಮೇಲಿನ ವ್ಯಾಮೋಹದಿಂದ ಮನೆ ತೊರೆದ ಕರೀಮನು ದೊಡ್ಡವನಾಗಿ ಒಂದು ಹಂತ ತಲುಪಿದ ಮೇಲೆ ಮನೆ ಬಿಡುವಾಗ ತಾನು ತೆಗೆದುಕೊಂಡು ಹೋಗಿದ್ದ ಒಡವೆಯ ಸಮೇತ ಮನೆಗೆ ಬಂದು ಬಾಗಿಲು ತಟ್ಟಿದಾಗ ಅವನ ತಂದೆಯು ಮಗನ ಮುಖ ನೋಡಿ ಬಾಗಿಲು ತೆಗೆಯಲೇ ಇಲ್ಲ.ಅವನ ತಾಯಿ ಗೋಗರೆದರೂ ಬಾಗಿಲು ತೆಗೆಸಲು ಸಾಧ್ಯವಾಗಲಿಲ್ಲ. ಆಗ ತನ್ನ ಗುರುಗಳಾದ ಶಂಕರಪ್ಪ ಅವರ ಮನೆಗೆ ಬಂದು ಕರೀಮನು ತಾಯಿಯನ್ನು ನೋಡಲು ಅವಳ ಒಡವೆಯನ್ನು ಹಿಂದಿರುಗಿಸಲು ಅನುಮತಿ ಕೊಡಿಸುವಂತೆ ಶಂಕರಪ್ಪ ಅವರ ಬಳಿ ಗೋಗರೆಯುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ತಂದೆ ತಾಯಿಯರ ಮೇಲಿನ ಕರೀಮನ ಭಕ್ತಿ ,ಪ್ರೀತಿ ಇಲ್ಲಿ ವ್ಯಕ್ತವಾಗಿದೆ.

೪. ''ದೇವರು ದೊಡ್ಡವನು ದೇವರು ದಯಾಳು ''

ಉ: ಈ ಮೇಲಿನ ವಾಕ್ಯವನ್ನು ಬಾಗಲೋಡಿ ದೇವರಾಯರು ಬರೆದ ಸಮಗ್ರ ಕತೆಗಳು ಸಂಕಲನದಿಂದ ಆರಿಸಲಾದ ಮಗ್ಗದ ಸಾಹೇಬ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಅಬ್ದುಲ್ ರಹೀಮನು ಹೇಳಿದನು.

ಸಂದರ್ಭ : ಮಗ್ಗದ ಮೇಲಿನ ವ್ಯಾಮೋಹದಿಂದ ಮನೆ ತೊರೆದ ಕರೀಮನು ಹಲವು ವರ್ಷಗಳ ಬಳಿಕ ಮರಳಿದರೂ ಅವನ ತಂದೆ ಅಬ್ದುಲ್ಲ ರಹೀಮನು ಅವನನ್ನು ಮನೆಗೆ ಸೇರಿಸಲೇ ಇಲ್ಲ. .ಕರೀಮನು ತಂದೆ, ತಾಯಿಯನ್ನು ನೋಡಲು ಮಾಡಿದ ಪ್ರಯತ್ನ ವಿಫಲವಾಯಿತು.ಆದರೆ ಅವನ ಕಾರ್ಯವನ್ನು ಮೆಚ್ಚಿದ ರಾಷ್ಟ್ರ ಪತಿಯವರಿಂದ ಪದ್ಮಭೂಷಣ ಪ್ರಶಸಸ್ತಿಯುದದದದದದದದದದ ದೊರೆಯಿತು. ಹಾಸಿಗೆಯಯಲ್ಲಿ ಮಲಗಿದ್ದ ಅವನ ವೃದ್ಧ ತಂದೆಗೆ ಕರೀಮನ ಗುರು ಶಂಕರಪ್ಪ ನವರು ತಿಳಿಸಿದಾಗ ಅವನ ತಂದೆಯು ಮೇಲಿನಂತೆ ಹೇಳಿದನು.

ಸ್ವಾರಸ್ಯ : ಮಗ್ಗದ ಕಾರಣದಿಂದಲೇ ತಮಗೆ ದುರವಸ್ಥೆ ಒದಗಿತೆಂದು ಮಗ್ಗದ ಹುಚ್ಚಿನಿಂದ ಮಗನನ್ನು ಬಿಡಿಸಬೇಕೆಂದು ಎಷ್ಟೋ ಪ್ರಯತ್ನ ಮಾಡಿದ್ದರೂ ಕೊನೆಗೆ ಅದೇ ಮಗ್ಗವೇ ಮಗನಿಗೆ ಒಳ್ಳೆಯ ಹೆಸರು ತಂದುಕೊಟ್ಟಿತೆಂಬ ಧನ್ಯತಾ ಭಾವ ಅಬ್ದುಲ್ ಕರೀಮನಲ್ಲಿ ಮೂಡಿರುವುದು ಕಂಡು ಬರುತ್ತದೆ.

ಬಿಟ್ಟಸ್ಥಳ ತುಂಬಿರಿ.

೧. ಅಬ್ದುಲ್ ರಹೀಮನಿಗೆ -----------------ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. (ಮಗ್ಗದ ಸಾಹೇಬ)

೨.ಮನೆಯಲ್ಲಿ -----------------ಇದೆಯೋ ಇಲ್ಲವೋ ಎಂಬಂತಾಗಿದೆ.(ಊಟಕ್ಕೆ)

೩. ಹುಡುಗನ ----------ಆಕಾಶಕ್ಕೇರಿತು.(ಉತ್ಸಾಹ)
೪. ಶಂಕರಪ್ಪ ಅವರು ---------ಹಿಂತೆರಳಿದರು.(ಮುಖ ಬಾಡಿಸಿಕೊಂಡು )
೫. ನನಗೆ ಎರಡೇ ಮಕ್ಕಳು ----------ಪರಿಚಯ ನನಗಿಲ್ಲ. (ಕಳ್ಳರ )

**ಅಭ್ಯಾಸ ಚಟುವಟಿಕೆ**

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಕನ್ನಡ ವರ್ಣಮಾಲೆಯಲ್ಲಿ ಒಟ್ಟು ಎಷ್ಟು ಅಕ್ಷರಗಳಿವೆ ?ಅವುಗಳನ್ನು ಹೇಗೆ ವರ್ಗೀಕರಿಸುವಿರಿ ?ವಿವರಿಸಿ.

ಉ: ಕನ್ನಡ ವರ್ಣಮಾಲೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ. ಅವುಗಳನ್ನು ಸ್ವರಗಳು ,ವ್ಯಂಜನಗಳು ಮತ್ತು ಯೋಗವಾಹಗಳು ಎಂದು ವರ್ಗೀಕರಿಸಲಾಗಿದೆ. ಸ್ವತಂತ್ರವಾಗಿ ಉಚ್ಚರಿಸುವ ಅಕ್ಷರಗಳು ಸ್ವರಗಳು . ಅವುಗಳೆಂದರೆ ಅ,ಆ,ಇ,ಈ ,ಉ,ಊ ,ಋ ,ಎ ,ಏ ,ಐ ,ಒ,ಓ ,ಔ . ಇವುಗಳಲ್ಲಿ ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು ಹ್ರಸ್ವಸ್ವರಗಳು .ಅ,ಇ ,ಉ ,ಋ ,ಎ,ಒ ಗಳು ಹ್ರಸ್ವಸ್ವರಗಳು .ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಸ್ವರಗಳು ದೀರ್ಘ ಸ್ವರಗಳು . ಆ,ಈ,ಊ ,ಏ,ಐ,ಓ,ಔ ಗಳು ದೀರ್ಘಸ್ವರಗಳು. ಕೆಲವೊಮ್ಮೆ ಇವೇ ದೀರ್ಘಸ್ವರಗಳೇ ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುತ್ತವೆ. ಉದಾ ಅಣ್ಣಾ **sss** , ಮಕ್ಕಳೇ **sss** ಇತ್ಯಾದಿ . ಇಲ್ಲಿ ಆ ಮತ್ತು ಏ ಸ್ವರಗಳು ಮೂರು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಟ್ಟಿವೆ. ಇವೇ ಪ್ಲುತ ಸ್ವರಗಳು.

ಕ್ ದಿಂದ ಮ್ ವರೆಗಿನ ೨೫ ಅಕ್ಷರಗಳನ್ನು ಉಚ್ಚರಿಸುವಾಗ ಅವು ಹುಟ್ಟುವ ಸ್ಥಳವನ್ನು ಆಧರಿಸಿ ಅವುಗಳನ್ನು ಐದರ ವರ್ಗಗಳಾಗಿ ಮಾಡಲಾಗಿದೆ.ಇವು ವರ್ಗೀಯ ವ್ಯಂಜನಗಳು. ಯ್ ದಿಂದ ಳ್ ವರೆಗಿನ ಅಕ್ಷರಗಳು ಅವರ್ಗೀಯ ವ್ಯಂಜನಗಳು.

ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರಗಳು ಯೋಗವಾಹಗಳು ಅಂ (ಅನುಸ್ವಾರ )ಮತ್ತು ಅಃ (ವಿಸರ್ಗ ) ಗಳು

೨. ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವ ಹಾಗೂ ದೀರ್ಘ ಸ್ವರಗಳನ್ನು ಬರೆಯಿರಿ.

ಉ: ಕನ್ನಡ ವರ್ಣಮಾಲೆಯಲ್ಲಿರುವ ಹ್ರಸ್ವಸ್ವರಗಳು –ಅ,ಇ ,ಉ,ಋ,ಎ,ಒ ದೀರ್ಘಸ್ವರಗಳು – ಆ,ಈ ,ಊ,ಏ,ಐ,ಓ,ಔ

೩. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳನ್ನು ಬರೆಯಿರಿ.

ಉ: ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣ ಅಕ್ಷರಗಳು ಖ್,ಘ್ ,ಛ್ ,ಝ್ , ಠ್ ,ಢ್ ಥ್ ,ಧ್ ,ಫ್ ,ಭ್

೪. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳನ್ನು ಬರೆಯಿರಿ.

ಉ : ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ಅಕ್ಷರಗಳು

ಕ್,ಖ್,ಗ್,ಘ್,ಙ್

ಚ್,ಛ್ ,ಜ್ ,ಝ್,ಞ್

ಟ್, ಠ್,ಡ್,ಢ್,ಣ್

ತ್, ಥ್, ದ್, ಧ್, ನ್

ಪ್,ಫ್,ಬ್,ಭ್ ,ಮ್

೫.ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳನ್ನು ಪಟ್ಟಿಮಾಡಿ .

ಙ್ ,ಞ್ ,ಣ್,ನ್ ,ಮ್ ಗಳು ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳು .

ಆ . ಕೊಟ್ಟಿರುವ ಪದಗಳಲ್ಲಿರುವ ಸ್ವರಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಅಬ್ದುಲ್ –ಅ ಅವನು –ಅ ಇಪ್ಪತ್ತು –ಇ ಆದರೂ –ಆ ಅವನನ್ನು –ಅ ಇತ್ಯಾದಿ–ಇ ಇರಲಿ–ಇ ಏಕೆಂದರೆ–ಏ ಓಡಿಹೋದ –ಓ ಈಗ –ಈ ಏನೂ –ಏ

ಇ. ಕೊಟ್ಟಿರುವ ಪದಗಳಲ್ಲಿರುವ ಮಹಾಪ್ರಾಣಾಕ್ಷರಗಳನ್ನು ಬರೆಯಿರಿ.

ಧನವಂತ –ಧ ರಥ–ಥ ಘನತೆ–ಘ ಧರ್ಮ –ಧ ಮುಖ್ಯ –ಖ ಭಕ್ಷ್ಯ–ಭ ಹಠ–ಠ ಪಾಠ–ಠ ಹಸನ್ಮುಖ –ಖ ಫಲ –ಫ

ಈ . ಕೊಟ್ಟಿರುವ ಪದಗಳಲ್ಲಿರುವ ಅವರ್ಗೀಯ ವ್ಯಂಜನಗಳನ್ನು ಬರೆಯಿರಿ .

ಅವನ –ವ ಇಂತಹ –ಹ ಅದರ –ರ ಒಳಗೆ –ಳ ಕುಶಲ–ಶ ಹಬ್ಬ –ಹ ಬಹಳ–ಹ ,ಳ ಸಮಯ–ಸ,ಯ ಕಾಲ–ಲ

# ಗದ್ಯ -೨ . ನೀರು ಕೊಡದ ನಾಡಿನಲ್ಲಿ - ನೇಮಿಚಂದ್ರ

**ಕೃತಿಕಾರರ ಪರಿಚಯ**



**ನೇಮಿಚಂದ್ರರವರು ಚಿತ್ರದುರ್ಗದಲ್ಲಿ ಜುಲೈ೧೬, ೧೯೫೯ ರಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳು ಯಾದ್ ವಶೇಮ್ -ಕಾದಂಬರಿ ,ನಮ್ಮ ಕನಸುಗಳಲ್ಲಿ ನೀವಿದ್ದೀರಿ ,ಮತ್ತೆ ಬರೆದ ಕಥೆಗಳು , ನೇಮಿಚಂದ್ರರ ಕಥೆಗಳು ಮುಂತಾದ ಕಥಾ ಸಂಕಲನಗಳು . ಒಂದು ಕನಸಿನ ಪಯಣ ,ಪೆರುವಿನ ಪವಿತ್ರ ಕಣಿವೆಯಲ್ಲಿ --ಪ್ರವಾಸ ಕಥನಗಳು .ಇವರಿಗೆ ಪೆರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ ,ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಸಂದಿವೆ .**

**ಪ್ರಸ್ತುತ ಗದ್ಯ ಭಾಗವನ್ನು ಇವರ 'ಬದುಕು ಬದಲಿಸಬಹುದು ' ಕೃತಿಯಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.**

## ಒಂದು ವಾಕ್ಯದಲ್ಲಿ ಉತ್ತರಿಸಿ .

**೧. ಎಲ್ಲೆಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ ?**

**ಉ: ಯುರೋಪಿನಲ್ಲಿ, ಅಮೆರಿಕದಲ್ಲಿ ಎರಡೂ ಕಡೆಯೂ ನೀರು ಕೊಡುವ ಸಂಪ್ರದಾಯವಿಲ್ಲ.**

**೨. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ ?**

**ಉ: ಮನೆಗೆ ಬಂದವರಿಗೆ ಮೊದಲು ನೀರು ಕೊಟ್ಟು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ.**

**೩. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಅಗ್ಗವಾಗಿ ಸಿಗುವುದೇನು ?**

**ಉ: ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಕೋಲಾ ಸಿಗುತ್ತದೆ.**

**೪. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ ?**

**ಉ: ಶುದ್ಧ ನೀರನ್ನು ಕೇವಲ ಬಾಟಲಿಯಲ್ಲಿ ಕೊಂಡು ತರಬಹುದು ಎಂಬ ಆಲೋಚನೆಯಿಂದಾಗಿ ನೀರನ್ನು ಬಾಟಲಿಯಲ್ಲಿಟ್ಟು ಮಾರುವ ಹುನ್ನಾರ ಭಾರತದಲ್ಲೂ ಇತ್ತೀಚೆಗೆ ನಡೆಯುತ್ತಿದೆ.**

**೫. ಸರ್ವರಿಗೂ ವೇದ್ಯವಾಗಿರುವ ಅಂಶಗಳು ಯಾವುವು ?**

**ಉ: ಫಾದರ್ಸ್ ಡೇ,ಮದರ್ಸ್ ಡೇ ,ವ್ಯಾಲೆಂಟೈನ್ ಡೇ ಮೊದಲಾದ ಹೊಸ ಹೊಸ ಆಚರಣೆಗಳು ಉಕ್ಕಿದ ಪ್ರೀತಿಯ ದ್ಯೋತಕವಲ್ಲ.ಗಿಫ್ಟ್,ಗ್ರೀಟಿಂಗ್ ಕಾರ್ಡ್ ಮಾರುವ ಹೊಸ ಹುನ್ನಾರಗಳೆಂದು ಸರ್ವರಿಗೂ ವೇದ್ಯವಾಗಿದೆ.**

**೬. ಲೇಖಕಿಗೆ ಹೋಟೆಲ್ ನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಆದ ಅನುಭವವೇನು ?**

**ಉ: ಲೇಖಕಿಗೆ ಹೋಟೆಲ್ ನಲ್ಲಿ ನಾಲ್ಕು ಲೋಟ ನೀರು ತಂದಿತ್ತಾಗ ಅವರಿಗೆ ಬರೀ ಬಾಯಲ್ಲ , ಮನಸ್ಸೂ ತಂಪಾಯಿತು.**

## ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

**೧. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವವು ?**

**ಉ: ವಿದೇಶಗಳಲ್ಲಿ ಬಾಯಾರಿಕೆ ತಣಿಸಲು ನೀರು ದೊರೆಯುವುದಿಲ್ಲ . ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವೂ ನೀರು ಕೊಡದ ನಾಡುಗಳೇ . ಕೋಲಾಗಳು, ಫ್ರೆಂಚ್ ವೈನ್ , ಬಿಯರ್ ,ಬಾಟಲಿಯಲ್ಲಿ ಹಣ್ಣಿನ ರಸ ಇವೆಲ್ಲವೂ ವಿದೇಶಗಳಲ್ಲಿ ಧಾರಾಳವಾಗಿ ದೊರೆಯುತ್ತವೆ. ಕುಡಿಯಲು ಮಾತ್ರ ನೀರು ಸಿಗುವುದಿಲ್ಲ**

**೨. ಗುರುದ್ವಾರಗಳ ಬಳಿ ಸ್ವಯಂ ಸೇವಕರು ಏನು ಮಾಡುತ್ತಿದ್ದರು?**

ಉ: ದಿಲ್ಲಿಯಲ್ಲಿ ದೊಡ್ಡ ಮಡಕೆಗಳಲ್ಲಿ ನೀರು ತುಂಬಿಡುವ ಪರಿಪಾಠವಿದೆ. ಅನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು ,ನಿಲ್ಲಿಸಿದ ಆಟೋ , ಬಸ್ಸು ಹಾಗೂ ದಾರಿಹೋಕರಿಗೆಲ್ಲ ನೀರು ತುಂಬಿ ,ತುಂಬಿ ಕುಡಿಸುತ್ತಿದ್ದರು.

೩. ಕೋಲಾಗಳ ಆಸೆಯಿಂದ ನಾವು ಏನೆಲ್ಲವನ್ನು ತೊರೆಯುತ್ತಿದ್ದೇವೆ ?

ಉ: ವಿದೇಶದಲ್ಲಿಯಂತೆ ಭಾರತದಲ್ಲಿಯೂ ನೀರನ್ನು ಬಾಟಲಿಯಲ್ಲಿಟ್ಟು ಮಾರುವ ,ಶುದ್ಧ ನೀರನ್ನು ಬಾಟಲಿಯಲ್ಲಿ ಕೊಂಡು ತರಬಹುದು ಎಂಬ ಹುನ್ನಾರ ನಡೆಯುತ್ತಿದೆ. ಭಾರತೀಯರೂ ಇಂತಹ ಮರುಳುತನಕ್ಕೆ ಬಲಿಯಾಗಿದ್ದಾರೆ. ನಮ್ಮ ಎಳನೀರು , ಮಜ್ಜಿಗೆ, ಪಾನಕ, ಕಬ್ಬಿನ ಹಾಲು, ತಾಜಾ ಹಣ್ಣಿನ ರಸ ಎಲ್ಲವನ್ನೂ ತೊರೆದು ಕೋಲಾಗಳಿಗೆ ಮುಗಿಬೀಳುತ್ತಿರುವ ಜನರ ಸಂಖ್ಯೆ ಏರುತ್ತಿದೆ.

೪. ನಾಗರೀಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾವುವು ?

ಉ: ಕೊಳ್ಳುಬಾಕತನ, ಲಾಭಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ನೆಲದಲ್ಲೂ ಹರಡಿ ,ಭಾರತಕ್ಕೂ ಲಗ್ಗೆ ಇಟ್ಟಿವೆ. ಮದರ್ಸ್ ಡೇ ,ಫಾದರ್ಸ್ ಡೇ, ವ್ಯಾಲೆಂಟೈನ್ ಡೇ ಮೊದಲಾದವು ನಾಗರೀಕತೆಯ ದೊಡ್ಡ ಅನಾಹುತವಾಗಿ ಕಾಣಿಸಿಕೊಳ್ಳುತ್ತಿರುವ ಆಚರಣೆಗಳಾಗಿವೆ. ಈ ಹೊಸ ದಿನಗಳೆಲ್ಲ ಉಕ್ಕಿದ ಪ್ರೀತಿಯ ದ್ಯೋತಕವಲ್ಲ. ಗಿಫ್ಟ್ ಗ್ರೀಟಿಂಗ್ ಕಾರ್ಡ್ ಮಾರುವ ಹೊಸ ಹುನ್ನಾರಗಳಾಗಿವೆ.

೫. ಜನಪ್ರಿಯ ಹೋಟಲಿನ ಮಾಲೀಕನಿಗೆ ತಂಪು ಪಾನೀಯ ಕಂಪನಿ ಹೇಳಿದ್ದೇನು ?

ಉ: ಜನಪ್ರಿಯ ಹೊಟೇಲಿನ ಮಾಲಿಕರೊಬ್ಬರು ಪತ್ರಿಕೆಯಲ್ಲಿ ಬರೆದಿದ್ದು ಹೀಗಿತ್ತು. ತಂಪು ಪಾನೀಯದ ಕಂಪನಿಯೊಂದು ಅವರನ್ನು ಸಂಪರ್ಕಿಸಿ ನೀವು ಗ್ರಾಹಕರಿಗೆ ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ ,ಇಷ್ಟು ಹಣ ಕೊಡುವುದಾಗಿ ಹೇಳಿತ್ತು ಎಂದು.

ಐದು- ಆರು ವಾಕ್ಯಗಳಲ್ಲಿ ಉತ್ತರಿಸಿ .

೧. ದುಡ್ಡಿಲ್ಲದೇ ಕುಡಿಯಲು ನೀರು ಸಿಗುತ್ತಿದ್ದ ಕಾಲದ ಬಗ್ಗೆ ಲೇಖಕರ ಅಭಿಪ್ರಾಯವೇನು ?

ಉ: ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ ದನ ಕರುಗಳು ನೀರು ಕುಡಿದು ಹೋಗಲಿ ಎಂದು ನೀರು ತುಂಬಿಡುತ್ತಿದ್ದ ಬಾಲ್ಯದ ದಿನಗಳು ಲೇಖಕಿಯವರಿಗೆ ಈಗಲೂ ನೆನಪಿದೆ. ಅವರು ದಿಲ್ಲಿಯಲ್ಲಿ ನೋಡಿರುವಂತೆ ಅಲ್ಲಿ ಧಗೆಧಗೆ ಬಿಸಿಲು. ಪುಣ್ಯಾತ್ಮರೊಬ್ಬರು ಅಲ್ಲಿ ದೊಡ್ಡ ಮಣ್ಣಿನ  ಮಡಿಕೆಗಳಲ್ಲಿ ನೀರು ತುಂಬಿಟ್ಟಿರುತ್ತಿದ್ದರು. ಅನೇಕ ಗುರುದ್ವಾರಗಳ ಬಳಿ, ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು ,ನಿಲ್ಲಿಸಿದ ಆಟೋ ,ಬಸ್ಸು ಹಾಗೂ ದಾರಿ ಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುವುದನ್ನೂ ಲೇಖಕಿಯವರು ನೋಡಿದ್ದಾರೆ. ಅವರ ಸಂಬಂಧಿಗಳ ಮನೆಯಲ್ಲೂ ಕಾಲಿಟ್ಟಾಗ ತಣ್ಣನೆಯ ನೀರು ತಂದಿಟ್ಟಿದ್ದನ್ನು ಅವರು ನೋಡಿದ್ದಾರೆ. ಮನೆಗೆ ಬಂದವರಿಗೆ ಮೊದಲು ನೀರು ಕೊಡುವ ಸಂಪ್ರದಾಯ. ಡಾಬಾ ಆಗಲೀ ,ದರ್ಶನ್ ಆಗಲಿ ,ಪಂಚತಾರಾಚ ಹೋಟಲೇ ಆಗಲಿ ಮೊದಲು ನೀರು ಮೇಜಿನ ಮೇಲೆ ಇಡುವುದನ್ನು ನೋಡಿದ್ದಾರೆ. ಒಟ್ಟಾರೆಯಾಗಿ ಅಂದು ದುಡ್ಡಿಲ್ಲದೇ ಕುಡಿಯಲು ನೀರು ಸಿಗುತ್ತಿದ್ದ ಕಾಲವಾಗಿತ್ತು.

೨. ಕಂಪನಿಗಳು ಅಪ್ಪಟ ಅಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ ' ಎಂಬಂತೆ ಹೇಗೆ ಬಿಂಬಿಸುತ್ತಿವೆ ?

ಉ: ಸಂಸ್ಕೃತಿಯ ಬುನಾದಿಯನ್ನು ಜೀವನ ಶೈಲಿಯನ್ನು ,ನಂಬಿಕೆಗಳನ್ನು ,ಮೌಲ್ಯಗಳನ್ನು ,ಸಂಸ್ಕೃತಿಯ ಬುನಾದಿಯನ್ನು ಅಲುಗಿಸುವ ಕೊಳ್ಳುಬಾಕತನ ಇಂದು ಎಲ್ಲೆಡೆ ಅತಿಯಾಗುತ್ತಿದೆ. ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು ,ಇಂದು ಬೇಕುಗಳ ಬಲೆಗೆ ಬಿದ್ದಿದೆ. ಬೇಕುಗಳನ್ನು ಅಗತ್ಯಗಳಾಗಿ ,ಹಾಗೂ ಅತ್ಯಗತ್ಯಗಳಾಗಿ ಬಲು ಜಾಣತನದಿಂದ ಬದಲಿಸುವ ಜಾಹೀರಾತುಗಳು ಮತ್ತೆ ಮತ್ತೆ ಬಿತ್ತರಿಸಲ್ಪಡುತ್ತವೆ. ಆರಾಮ,ಐಷಾರಾಮದ ,ಅಪ್ಪಟ ಅನಗತ್ಯದ ವಸ್ತುಗಳನ್ನು 'ಇವಿಲ್ಲದೆ

ಬದುಕಿಲ್ಲ ' ಎಂಬಂತೆ ಬಿಂಬಿಸುತ್ತಾರೆ. ಡಿಓಡರೆಂಟ್ ಹಾಕಿಕೊಳ್ಳದೇ ಇದ್ದರೆ ತಾನು ನಾತ ಬಡಿಯುತ್ತೇನೆ ಎಂಬಷ್ಟು ಕೀಳರಿಮೆಯನ್ನು ಹುಟ್ಟಿಸಬಲ್ಲರು. ಕೊನೆಗೆ ಎಲ್ಲವೂ ನಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತಾರೆ.

೩. ಲೇಖಕಿಗೆ ಬೆಂಗಳೂರಿನಲ್ಲಿ 'ನೀರು ಕೊಡದ ಸಂಸ್ಕೃತಿಯ ಬಗ್ಗೆ' ಆದ ಅನುಭವವನ್ನು ಬರೆಯಿರಿ.

ಉ: ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯ ಬಾಂಬೆ ಬಜಾರ್ ಎದುರಿನ ಪುಟ್ಟ ಜಾಯಿಂಟ್ ನಲ್ಲಿ ಲೇಖಕಿಯವರು ಮಗಳ ಜೊತೆ ಐಸ್ಕ್ರೀಂ ತಿಂದು ನೀರು ಕೇಳಿದಾಗ ವೇಟರ್ ಮಿನರಲ್ ವಾಟರ್ ? ಎಂದು ಪ್ರಶ್ನಿಸಿದ. ಇಲ್ಲಪ್ಪ ,ಸಾಮಾನ್ಯ ನೀರು ಎಂದಾಗ ಮಾಯವಾದ ವೇಟರ್ ಎಷ್ಟು ಹೊತ್ತಾದರೂ ಬರಲೇ ಇಲ್ಲ. ಕಾದು ಸುಸ್ತಾಗಿ ಬಿಲ್ಲು ಕೊಟ್ಟು ಹೊರ ಬರುವಾಗ ಅವನು ಮಿನರಲ್ ವಾಟರ್ ನ್ನು ಬೇರೆ ಬೇರೆ ಮೇಜಿಗೆ ಸರಬರಾಜು ಮಾಡುತ್ತಿದ್ದನು.ಅದೇ ರೀತಿ ಇಂದಿರಾನಗರದ ಮುಖ್ಯ ರಸ್ತೆಯ ಪುಟ್ಟ ಜಾಯಿಂಟ್ ನಲ್ಲಿ ಮಾಲತಿ ಎನ್ನುವವರೊಡನೆ ಮಿಸಿಸಿಪಿ ಮಡ್ ಪೀ ತಿನ್ನುವಾಗ ಅಲ್ಲಿಯೂ ನೀರು ಕೊಟ್ಟಿರಲಿಲ್ಲ. ನೀರು ಕೊಡಿ ಎಂದಾಗ ಮಿನರಲ್ ವಾಟರ್ ? ಎಂದು ಅಲ್ಲಿಯ ಹುಡುಗಿ ಕೇಳಿದಳು. ಇಲ್ಲ ಸಾಧಾರಣ ನೀರು ಎಂದರೆ ನಮ್ಮಲ್ಲಿ ಸಾಧಾರಣ ನೀರು ಇಲ್ಲ ಎಂದು ಹುಡುಗಿ ಉತ್ತರಿಸಿದಳು . ಹೀಗೆ ಬೆಂಗಳೂರಿನಲ್ಲಿ ನೀರು ಕೊಡದ ಸಂಸ್ಕೃತಿಯ ಬಗ್ಗೆ ಲೇಖಕಿಯವರಿಗೆ ಅನುಭವವಾಗಿದೆ.

ಬಿಟ್ಟ ಸ್ಥಳವನ್ನು ಸೂಕ್ತ ಉತ್ತರದಿಂದ ಭರ್ತಿ ಮಾಡಿರಿ.

೧. ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವು ---- (ನೀರು ಕೊಡದ ನಾಡುಗಳು )

೨. ಈ ದೇಶಗಳಲ್ಲಿ ಮನೆಯ ---- ಯಲ್ಲಿ ಬರುವ ನೀರನ್ನು ಕುಡಿಯುವುದಿಲ್ಲ. (ನಲ್ಲಿ )

೩. ಗ್ರೀಟಿಂಗ್ಸ್ ಕಾರ್ಡ್ ಮಾರುವ ಹೊಸ ----- ಗಳೆಂದು ಸರ್ವರಿಗೂ ವೇದ್ಯವಾಗಿದೆ. (ಹುನ್ನಾರ)

೪. ಸ್ಯಾಂಡ್ವಿಚ್ ಬರ್ಗರ್ ಜೊತೆಗೆ ದೊಡ್ಡ ಗಾತ್ರದ --- ನೀಡುತ್ತಾರೆ. (ಕೋಲಾದೊಡನೆಯೇ )

ಅಭ್ಯಾಸ ಚಟುವಟಿಕೆ

೧. ಗುಣಿತಾಕ್ಷರ ಎಂದರೇನು ?

ಉ: ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರ ಗುಣಿತಾಕ್ಷರ .

೨. ಸಂಯುಕ್ತಾಕ್ಷರ ಎಂದರೇನು ?ಉದಾಹರಣೆ ನೀಡಿ

ಉ: ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ .ಉದಾ : ಅಮ್ಮ, ಅಜ್ಜ , ಅಸ್ತ್ರ , ರಾಷ್ಟ್ರ ಇತ್ಯಾದಿ

೩. ದೇಶ್ಯ ಮತ್ತು ಅನ್ಯ ದೇಶ್ಯ ಪದಗಳನ್ನು ಪಟ್ಟಿ ಮಾಡಿ .

ಉ: ದೇಶ್ಯ ಪದಗಳು

ಸಂಖ್ಯಾಪದಗಳು : ಒಂದರಿಂದ ಒಂಬೈನೂರ ತೊಂಬತ್ತೂರರವರೆಗೆ)

ಅಂಗಗಳ ಹೆಸರು : ಕೈ,ಕಾಲು,ಬಾಯಿ ಇತ್ಯಾದಿ

ವಿಭಕ್ತಿ ಪ್ರತ್ಯಯಗಳು ,ಬಂಧುವಾಚಕ ಪದಗಳು (ಅಜ್ಜ,ಅಜ್ಜಿ,ಅಪ್ಪ ,ಚಿಕ್ಕಮ್ಮ ,ಅಣ್ಣ ಇತ್ಯಾದಿ )

ಅನ್ಯದೇಶ್ಯ ಪದ : ಬೇರೆ ಭಾಷೆಯಿಂದ ಬಂದಿರುವ ಪದಗಳೇ ಅನ್ಯದೇಶ್ಯ ಪದಗಳು

ಅರ್ಜಿ,ಕಚೇರಿ,ಕಾರ್ಖಾನೆ, ಜಮೀನು ,ಕೋರ್ಟು,ಬ್ಯಾಂಕು,ಹಾರ್ಮೋನಿಯಂ ಇತ್ಯಾದಿ .

೫. ಕನ್ನಡದಲ್ಲಿರುವ ಯಾವುದಾದರೂ ಐದು ತದ್ಭವ ಪದಗಳನ್ನು ಪಟ್ಟಿ ಮಾಡಿ .

ಬೇಸಗೆ,ಕೊಡಲಿ,ಬಸವ,ಬಿನ್ನಣ,ಸಿರಿ ಇತ್ಯಾದಿ

ಪ್ರಾಯೋಗಿಕ ಭಾಷಾಭ್ಯಾಸ

೧. ಕೊಟ್ಟಿರುವ ಪದಗಳಲ್ಲಿರುವ ಗುಣಿತಾಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಉ : ಹೋಟೆಲ್ =ಹ್+ ಓ .ಟ್+ಎ+ಲ್

ಮಾಲೀಕ =ಮ್+ಆ, ಲ್+ಈ ,ಕ್+ಅ

ರಸ್ತೆ = ರ್+ಅ, ಸ್+ತ್+ಎ

ಗ್ರಾಹಕ =ಗ್+ರ್=ಆ,ಹ್+ಅ,ಕ್+ಅ

ಗಾಂಧೀಜಿ =ಗ್+ಆಂ,ಧ್+ಈ ,ಜ್+ಈ

ಇವರು =ಇ+ವ್+ಅ,ರ್+ಉ

ಪುಣ್ಯಾತ್ಮ = ಪ್+ಉ,ಣ್+ಯ್+ಆ ,ತ್+ಮ್+ಅ

೨. ಕೊಟ್ಟಿರುವ ಪದಗಳಲ್ಲಿರುವ ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.

ಸಜಾತೀಯ ಸಂಯುಕ್ತಾಕ್ಷರಗಳು

ಅಮ್ಮ, ಪುಕ್ಕಟೆ ,ಹಣ್ಣಿನ ರಸ ,ಮಣ್ಣು , ಶುದ್ಧ , ಅಗ್ಗ , ಹುನ್ನಾರ

ವಿಜಾತೀಯ ಸಂಯುಕ್ತಾಕ್ಷರಗಳು

ದಿನಪತ್ರಿಕೆ , ಅಗತ್ಯ, ವಸ್ತು ,ನಿಲ್ದಾಣ , ಸಂಪ್ರದಾಯ , ಸಂಸ್ಕೃತಿ ,ಪ್ರವಾಸ ,ಶಕ್ತಿ

೩. ಕೊಟ್ಟಿರುವ ಪದಗಳ ತದ್ಭವ ರೂಪ ಬರೆಯಿರಿ.

ವರ್ಷ -ವರುಷ ,ಪ್ರಾಣ -ಹರಣ ,ಶಕ್ತಿ-ಸಕುತಿ ,ಪುಣ್ಯ-ಹೂನ್ಯ

೪. ಕೊಟ್ಟಿರುವ ಪದಗಳಲ್ಲಿ ದೇಶೀಯ ಮತ್ತು ಅನ್ಯದೇಶೀಯ ಪದಗಳನ್ನು ಆರಿಸಿ ಬರೆಯಿರಿ

ಉ: ದೇಶೀಯ ಪದಗಳು


ದೊಡ್ಡದು ,ಪಾನಕ, ಸಣ್ಣ ,ಹುನ್ನಾರ

ಅನ್ಯ ದೇಶೀಯ ಪದಗಳು

ಬಸ್ಸು ,ಬರ್ಗರ್ ,ವಾಟರ್

# ಗದ್ಯ-೩ ತಲಕಾಡಿನ ವೈಭವ --- ಹಿರೇಮಲ್ಲೂರು ಈಶ್ವರನ್

**ಕೃತಿಕಾರರ ಪರಿಚಯ**



ಹಿರೇಮಲ್ಲೂರು ಈಶ್ವರನ್ ಅವರ ಕಾಲ ೧೧-೦೧-೧೯೨೨ರಿಂದ ೨೨-೦೬-೧೯೯೮
ಇವರು ಹಾವೇರಿಜಿಲ್ಲೆಯ ಶಿಗ್ಗಾವಿತಾಲೂಕಿನ ಹಿರೇಮಲ್ಲೂರಿನವರು . ಇವರು ಕವಿ ಕಂಡ ನಾಡು (ಪ್ರವಾಸ ಕಥನ ), ವಿಷ ನಿಮಿಷಗಳು ,ಭಾರತದ ಹಳ್ಳಿಗಳು ,ವಲಸೆ ಹೋದ ಕನ್ನಡಿಗನ ಕತೆ ,ಹಾಲಾಹಲ ,ರಾಜಾರಾಣಿ ದೇಖೋ,ಶಿವನ ಬುಟ್ಟಿ ,ತಾಯಿ ನೋಟ ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ.
ಇವರಿಗೆ ಹರಿಹರನ ಕೃತಿಗಳು ಒಂದು ಸಂಖ್ಯಾ ನಿರ್ಣಯ ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರೆತಿದೆ.
ಪ್ರಸ್ತುತ ಗದ್ಯಭಾಗವನ್ನು ಇವರ ಕವಿ ಕಂಡ ನಾಡು (ಪ್ರವಾಸ ಕಥನ ) ಕೃತಿಯಿಂದ ಆರಿಸಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ ?
ಉ: ಶಿವನಸಮುದ್ರದ ಪ್ರವಾಸಿಗರ ನಿಲ್ ಮನೆಯಲ್ಲಿ ಕುಳಿತುಕೊಂಡು ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದರು.

೨.ಗಂಗರ ಮೊದಲ ರಾಜಧಾನಿ ಯಾವುದು?
ಉ: ಗಂಗರ ಮೊದಲ ರಾಜಧಾನಿ ಕೋಲಾರ.

೩.'ರಾಯ',' ಅಣ್ಣ ' ಎಂದು ಯಾರನ್ನು ಕರೆಯುತ್ತಿದ್ದರು ?
ಉ: ಗಂಗರ ಮಂತ್ರಿಯಾಗಿದ್ದ ಚಾವುಂಡರಾಯನನ್ನು 'ರಾಯ',' ಅಣ್ಣ ' ಎಂದುಕರೆಯುತ್ತಿದ್ದರು

೪.ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ ಏನು?
ಉ: ಚಾವುಂಡರಾಯ ಕನ್ನಡಕ್ಕೆ ಕೊಟ್ಟ ಕಾಣ್ಕೆ 'ಚಾವುಂಡರಾಯಪುರಾಣ'ವೆಂಬಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ.

೫.ವಿಷ್ಣುವರ್ಧನ ವೀರನಾರಾಯಣ ದೇಗುಲವನ್ನು ಕಟ್ಟಿಸಲು ಕಾರಣವೇನು?
ಉ: ಹೊಯ್ಸಳರ ರಾಜ ವಿಷ್ಣುವರ್ಧನನ ವಿಕ್ರಮಚೋಳನ ಸೇನಾನಿ ಆದಿಯಮನನ್ನು ಮನೆಗೆ ಕಳುಹಿಸಿ ಹೊಯ್ಸಳರ ಕನ್ನಡ ಬಾವುಟವನ್ನು ಹಾರಿಸಿ ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಜಯನಾರಾಯಣನ ಗುಡಿ ಕಟ್ಟಿದನು. (ತಲಕಾಡಿನ ವಿಜಯದ ನಿಮಿತ್ತ)

೬. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?
ಉ: ನಮ್ಮ ದೇಗುಲಗಳೇ ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು.

**ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಶಿವನಸಮುದ್ರದಲ್ಲಿ ಸುಬ್ರಹ್ಮಣ್ಯಮ್ ಮಾಡಿದ ವ್ಯವಸ್ಥೆಗಳಾವುವು?

ಉ: ಶಿವನಸಮುದ್ರವನ್ನು ಒಳಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಮ್ ಲೇಖಕರನ್ನು ವಿಶ್ವಾಸದಿಂದ ಸ್ವಾಗತಿಸಿದರು.ನಿಲ್ಮನೆಯನ್ನು ಕೂಡಲೆ ಖಾಲಿ ಮಾಡಿಸಿದರು. ಹಾಸಿಗೆ ಹಾಸಿಕೊಟ್ಟರು.ಊಟ ಉಪಚಾರದ ಬಗೆಗೆ ಕೇಳಿದರು.ಕೊನೆಗೆ ಹೋಗುವಾಗ ಗುಡ್ ನೈಟ್ ಅಂದರು.

೨. ಚಾವುಂಡರಾಯ ಯಾರು? ಆತನ ವಿಶೇಷತೆಯೇನು?

ಉ: ಚಾವುಂಡರಾಯ ಗಂಗರ ದೊರೆಗಳಾದ ಮಾರಸಿಂಹ,ರಾಚಮಲ್ಲ ರಕ್ಕಸಗಂಗರ ಮಂತ್ರಿ.ಅವನನ್ನುಜನ ಹೆಸರು ಹಿಡಿದು ಕರೆಯುತ್ತಿದ್ದರು.ರಾಯ ಅಣ್ಣ ಎಂದು ಸಂಬೋಧಿಸುತ್ತಿದ್ದರು.ಅವನಿಗೆ ಕನ್ನಡದ ಏಳ್ಗೆಯ ಹಂಬಲವೇ ಹಂಬಲ. ಸ್ವತಃ ಕವಿ. 'ಚಾವುಂಡರಾಯ ಪುರಾಣ'ಎಂಬ ಹೆಸರಿನ ಅರವತ್ಮೂರು ಪುಣ್ಯಪುರುಷರ ಚರಿತ್ರೆ,ಅವನು ಕನ್ನಡಕ್ಕೆ ಕೊಟ್ಟ ಕಾಣ್ಕೆ

೩. ಚೋಳರ ಸಾಧನೆಯೇನು?

ಉ: ಚೋಳರು ಗುಡಿಗೋಪುರಗಳನ್ನು ಕಟ್ಟಿಸಿದರು.ರಾಜೇಶ್ವರ ,ವೈಕುಂಠನಾರಾಯಣ ,ಮರಳೇಶ್ವರ,ಪಾತಾಳೇಶ್ವರ,ವೈದ್ಯೇಶ್ವರ ಗುಡಿಗಳನ್ನುಕಟ್ಟಿಸಿದರು .

**ನಾಲ್ಕು– ಐದು ವಾಕ್ಯಗಳಲ್ಲಿ ಉತ್ತರಿಸಿ.**

೧.ಗಂಗರ ಇತಿಹಾಸದ ವಿಶೇಷತೆಯೇನು?

ಉ: ಗಂಗರ ರಾಜ್ಯ ಗಂಗವಾಡಿ ಎಂದು ಹೆಸರಾಗಿದೆ.ಅವರ ಮೊದಲ ರಾಜಧಾನಿ ಕೋಲಾರ. ಸುಮಾರು ಕ್ರಿ.ಶ. ೫೦೦ರ ಹೊತ್ತಿಗೆ ಕೋಲಾರದಿಂದ ಹರಿವರ್ಮ ರಾಜಧಾನಿಯನ್ನು ತಲಕಾಡಿಗೆ ತಂದನು.ಅಲ್ಲಿಂದ ಮುಂದಕ್ಕೆ ಐದು ಶತಮಾನಗಳವರೆಗೆ ಅಂದರೆ ೧೦ ನೆಯ ಶತಮಾನದವರೆಗೂ ಗಂಗರು ಆಳ್ವಿಕೆ ನಡೆಸಿದರು.

೨.ವೈದ್ಯೇಶ್ವರ ದೇವಾಲಯದ ನಿರ್ಮಾಣದ ಕಾಲನಿರ್ಣಯಕ್ಕೆ ಸಹಕಾರಿಯಾಗುವ ಅಂಶಗಳು ಯಾವುವು?ವಿವರಿಸಿ.

ಉ: ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಆಚೆಗೆ ೧೫೦ ಗಜದ ಅಂತರದಲ್ಲಿ ವೈದ್ಯೇಶ್ವರ ದೇವಾಲಯವಿದೆ.ಈ ದೇವಾಲಯ ರಚನೆಯಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳ ಅನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು.ದೇವಾಲಯದ ಹೊರವಲಯದಲ್ಲಿ ಇರುವ ಕಲಶಗಳೂ ಗರ್ಭಗುಡಿಯ ಗೋಪುರವೂ ಶಿಲ್ಪದ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿಯೂ ಈ ಕಾಲವನ್ನು ನಿರ್ದೇಶಿಸುವವು.ಇವು ಶೃಂಗೇರಿಯ ವಿದ್ಯಾಶಂಕರ ದೇಗುಲ ,ಹಂಪೆಯ ಹಜಾರರಾಮರ ಗುಡಿ ,ತಾಡಪತ್ರಿಯ ಲೇಪಾಕ್ಷಿಮಂದಿರ ,ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ.

೩.ಲೇಖಕರು ಯುರೇಕಾ ಎಂದು ಕೂಗಿದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ಹೇಳಿ.

ಉ: ತಲಕಾಡಿನ ಪಂಚಲಿಂಗೇಶ್ವರ ದೇವಾಲಯಗಳಲ್ಲಿ ಒಂದಾದ ಅರ್ಕೇಶ್ವರ ದೇವಾಲಯದ ದರ್ಶನ ಮುಗಿಸಿ ಪಂಚಲಿಂಗೇಶ್ವರ ದರ್ಶನ ಪೂರೈಸ ಹೊರಟ ಲೇಖಕರಿಗೆ ಸಾಕಷ್ಟು ಅಡೆತಡೆಗಳು ಉಂಟಾದವು.ಚಂದ್ರನು ಆಕಾಶದಲ್ಲಿ ಮೇಲೇರುತ್ತ ಹೊರಟಿದ್ದ.(ರಾತ್ರಿ)ದಾರಿ ಕೊರಕಲಾಗಿತ್ತು.ಮೋಟಾರು ಓಡುವುದಕ್ಕೆ ತೊಂದರೆಯಾಗಿತ್ತು.ಸಾರಥಿ ನಿಲ್ಲಿಸದೇ ಓಡಿಸಬೇಕೆಂದರೂ ಹಳ್ಳವೊಂದು ಇದಿರಾಗಿ ಮೋಟಾರು ಓಡದೇ ನಿಂತೇ ಹೋಯಿತು.ಆದರೆ ಅರ್ಕೇಶ್ವರ ದೇವಾಲಯ ದರ್ಶನ ಮಾಡದೇ ಹೋಗಲು ಮನಸ್ಸಿರದ ಲೇಖಕರ ಮನಸ್ಥಿತಿಯನ್ನು ಅರಿತ ಚಾಲಕ ತಾವಿಬ್ಬರೇ ಮೊದಲು ಹೋಗಿ ಹುಡುಕಿ ದೇವಾಲಯ ಸಿಕ್ಕಿದರೆ ಉಳಿದವರನ್ನು ಕರೆದೊಯ್ಯುವ ಸಲಹೆಯನ್ನು ಲೇಖಕರಿಗೆ ನೀಡಿದನು ಅದರಂತೆಯೇ ದೇವಾಲಯ ಹುಡುಕುತ್ತ ಇಬ್ಬರೂ ಹೊರಟಾಗ ರಾತ್ರಿ ಒಂದು ಗಂಟೆಯಾಗಿತ್ತು. ಅನತಿ ದೂರ ಹೋಗುವಷ್ಟರಲ್ಲಿ ಗಿಡ

ಮರಗಳ ಪೊದೆಯಲ್ಲಿ ಬೆಳ್ಳಗೆ ಏನೋ ಮಸುಕಾಗಿ ಕಾಣಿಸಿತು. ಲೇಖಕರು ಉದ್ವೇಗದಿಂದ ಅದನ್ನು ಸಮೀಪಿಸಿ ನೋಡಿದಾಗ ಅವರು ನೋಡಬೇಕೆಂದಿದ್ದ ಸ್ಥಾನ ಅದೇ ಆಗಿದ್ದು ಯುರೇಕಾ ಯುರೇಕಾ ಎಂದು ಕೂಗಲು ಕಾರಣವಾಗಿತ್ತು.

೪.ಸಳನ ವಂಶಕ್ಕೆ 'ಹೊಯ್ಸಳ' ಎಂದು ಹೆಸರು ಬರಲು ಕಾರಣವೇನು?

ಉ: ಹೊಯ್ಸಳ ವಂಶದ ಮೂಲ ಪುರುಷನ ಹೆಸರು ಸಳ. ಮೂಡಿಗೆರೆ ತಾಲೂಕಿನಲ್ಲಿರುವ ಸೊಸೆವೂರು ಇವನ ಜನ್ಮ ಸ್ಥಳ. (ಆಗಿನ ಸೊಸೆವೂರಿಗೆ ಈಗ ಅಂಗಡಿ ಎಂದು ಮರುನಾಮಕರಣವಾಗಿದೆ.)ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ ಸುದತ್ತ ಗುರುವಿನ ಬಳ ಉಪದೇಶ ಕೇಳುತ್ತಾ ಕುಳಿತಿರುವಾಗ ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು.ಆಗ ಸುದತ್ತ ಮುನಿಗಳು ತಮ್ಮ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್ ಸಳ ಎಂಬ ಆದೇಶವಿತ್ತನೆಂದೂ ಸಳ ಕೂಡಲೇ ಹುಲಿಯನ್ನು ಎದುರಿಸಿ ಅದರ ಗಂಟಲಿನಲ್ಲಿ ಖಡ್ಗವನ್ನುತುರುಕಿ ಹುಲಿಯನ್ನು ಹೊಡೆದನೆಂದೂ ತಿಳಿಯುವುದು.ಅಂದಿನಿಂದ ಸಳನ ಮನೆತನಕ್ಕೆ ಹೊಯ್ಸಳ ಎಂಬ ಹೆಸರು ಬಂದಿತು.

ಸಂದರ್ಭಸಹಿತ ಸ್ವಾರಸ್ಯ ವಿವರಿಸಿ.

೧. ''ಸುತ್ತಣ ಲೋಕವೆಲ್ಲಮಲಗಿಕೊಂಡಿದೆ.''

ಉ: ಈ ಮೇಲಿನ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರ ಕವಿಕಂಡ ನಾಡು ಪ್ರವಾಸ ಕಥನದಿಂದ ಆರಿಸಲಾದ ತಲಕಾಡಿನ ವೈಭವ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಲೇಖಕರು ಈ ಮಾತನ್ನುಹೇಳಿದ್ದಾರೆ.

ಸಂದರ್ಭ :ಲೇಖಕರು ತಲಕಾಡಿನ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಶಿವನ ಸಮುದ್ರದ ಪ್ರವಾಸಿಗರ ನಿಲ್ ಮನೆಯಲ್ಲಿ ಕುಳಿತುಕೊಂಡು ಆ ದಿನದ ಪ್ರಯಾಣದ ಅನುಭವವನ್ನು ಬರೆಯುತ್ತಿದ್ದಾಗ ರಾತ್ರಿ ಹನ್ನೆರಡು ಗಂಟೆ ಹದಿನೈದು ನಿಮಿಷವಾಗಿತ್ತು.ಆ ಸಂದರ್ಭದಲ್ಲಿ ಸುತ್ತಣ ಲೋಕವೆಲ್ಲ ಮಲಗಿತ್ತು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ತುಂಬಾ ರಾತ್ರಿಯಾದ್ದರಿಂದ ಸುತ್ತಲಿನ ಜನರು ನಿದ್ರಾ ಲೋಕದಲ್ಲಿ ವಿಹರಿಸುತ್ತಿದ್ದರು ಎಂದು ಲೇಖಕರು ಹೇಳಿದ್ದಾರೆ.

೨. ''ಅದು ಕಲಾಶ್ರೀ ವಿಹರಿಸುವ ನಂದನವನ ''.

ಉ: ಈ ಮೇಲಿನ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರ ಕವಿಕಂಡ ನಾಡು ಪ್ರವಾಸ ಕಥನದಿಂದ ಆರಿಸಲಾದ ತಲಕಾಡಿನ ವೈಭವ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಲೇಖಕರು ಈ ಮಾತನ್ನುಹೇಳಿದ್ದಾರೆ.

ಸಂದರ್ಭ:ಹತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲಿನಿಂದ ತಂದೆತಾಯಿಯರಿಗೆ ಹೇಳದೆ ಬಳೆಮಾರುವ ಉದ್ಯಮವನ್ನು ಕೃಷ್ಣಾ ತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿಬಂದನು.ರನ್ನ ತಲಕಾಡಿನ ಮಣ್ಣನ್ನು ನಂಬಿ ಬಂದನೇ?ಇಲ್ಲಿ ರಾಯ, ಅತ್ತಿಮಬ್ಬೆ,ಅಜಿತಸೇನಾಚಾರ್ಯರ ಗುರುಗಳ ಶಿಷ್ಯವೃಂದವಿದೆ.ಕಲಾಶ್ರೀ ವಿಹರಿಸುವ ನಂದನವನ ಇದು ಎಂದು ತಲಕಾಡಿನ ಕುರಿತು ಲೇಖಕರು ಬಣ್ಣಿಸಿದ್ದಾರೆ.

ಸ್ವಾರಸ್ಯ: ತಲಕಾಡಿನ ನೆಲದ ಹಿರಿಮೆಯನ್ನು ಬಣ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

೩. ಮೋಟರು ಓಡಲೊಲ್ಲದು,ಸಾರಥಿ ನಿಲ್ಲಿಸಲಾರನು''

ಉ: ಈ ಮೇಲಿನ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರ ಕವಿಕಂಡ ನಾಡು ಪ್ರವಾಸ ಕಥನದಿಂದ ಆರಿಸಲಾದ ತಲಕಾಡಿನ ವೈಭವ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಲೇಖಕರು ಈ ಮಾತನ್ನುಹೇಳಿದ್ದಾರೆ.

ಸಂದರ್ಭ : ಲೇಖಕರು ವಿಜಯಪುರದ ಅರ್ಕೇಶ್ವರನ ದರ್ಶನವೊಂದು ಮುಗಿದರೆ ತಲಕಾಡಿನ ಪಂಚಲಿಂಗಗಳ ದರ್ಶನ ಉಪೂರ್ತಿಯಾಗುವುದೆಂದು ನಂಬಿ ನಡೆದಾಗ ಮಾರ್ಗದಲ್ಲಿ ಕೆಲವು ತೊಂದರೆಗಳು ಎದುರಾದವು.ಅದಾಗಲೇ ಸಂಜೆಯಾಗಿತ್ತು.ದಾರಿ ಕೊರಕಲಾಗಿತ್ತು.ಮೋಟಾರು ಓಡದೇ ನಿಂತೇ ಬಿಟ್ಟಿತು.ದೇವಾಲಯ ದರ್ಶನಕ್ಕೆ ತಮಗೆ ಎದುರಾದ ತೊಂದರೆಯ ಕುರಿತು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಇಕ್ಕಟ್ಟಾದ ದಾರಿಯಲ್ಲಿ ಚಲಿಸುವಾಗ ಮೋಟರಿನ ಪರಿಸ್ಥಿಯನ್ನು, ದಾರಿಯ ಸ್ಥಿತಿಯನ್ನು ಲೇಖಕರು ಸ್ವಾರಸ್ಯಪೂರ್ಣವಾಗಿವಾಗಿ ವಿವರಿಸುವಾಗ ಮೇಲಿನ ಮಾತು ಬಂದಿದೆ.

೪.''ಬರ್ೋೕ ಗುಡಿಸಿಕ್ಕಿತು ಬರ್ೋೕ ದೇವಾಲಯ ದೊರಕಿತು.

ಉ: ಈ ಮೇಲಿನ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರ ಕವಿಕಂಡ ನಾಡು ಪ್ರವಾಸ ಕಥನದಿಂದ ಆರಿಸಲಾದ ತಲಕಾಡಿನ ವೈಭವ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಲೇಖಕರು ಈ ಮಾತನ್ನುಹೇಳಿದ್ದಾರೆ.

ಸಂದರ್ಭ : ಲೇಖಕರು ತಲಕಾಡಿನ ಪಂಚಲಿಂಗೇಶ್ವರ ದೇಲಾಲಯಗಳ ದರ್ಶನ ಮಾಡಿ ಮುಗಿಸುವುದಕ್ಕೆ ಅರ್ಕೇಶ್ವರ ದೇವಾಲಯವೊಂದು ಉಳಿದಿತ್ತು.ಆದರೆ ಆ ವೇಳೆಗಾಗಲೇ ಸಂಜೆಯಾಗಿತ್ತು .ದಾರಿ ಸರಿಯಿರಲಿಲ್ಲ.ಮೋಟಾರು ಚಲಿಸದೇ ನಿಂತೇ ಹೋಯಿತು.ಲೇಖಕರ ಮನದ ಇಂಗಿತ ಅರಿತ ಮೋಟರಿನ ಸಾರಥಿ ಮೊದಲು ತಾವಿಬ್ಬರೇ ಹೋಗಿ ನೋಡಿ ದೇವಾಲಯ ಸಿಕ್ಕಿದರೆ ಉಳಿದವರನ್ನು ಕರೆದುಕೊಂಡು ಹೋಗೋಣವೆಂದು ಹೇಳಿದ.ರಾತ್ರಿ ಒಂದು ಗಂಟೆಗೆ ದೇವಾಲಯ ಹುಡುಕಿ ಹೊರಟ ಲೇಖಕರಿಗೆ ಸ್ವಲ್ಪ ದೂರ ಹೋದಾಗ ದೇವಸ್ಥಾನ ದೊರೆತಾಗ ಆನಂದದ ಆವೇಶದಲ್ಲಿ ಅವರು ಅವರ ಜೊತೆ ಇದ್ದ ಯಾತ್ರಿಕರಿಗೆ ಕೇಳುವಂತೆ ಮೇಲಿನಂತೆ ಹೇಳಿದರು.

ಸ್ವಾರಸ್ಯ: ಅರ್ಕೇಶ್ವರ ದೇವಾಲಯವನ್ನು ಬಹುಕಷ್ಟಪಟ್ಟು ಹುಡುಕಿ ಕಂಡು ಹಿಡಿದ ಸಂತಸ ಮೇಲಿನ ವಾಕ್ಯದಲ್ಲಿ ವ್ಯಕ್ತವಾಗಿದೆ.

**ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

೧. ಸಾಹಿತ್ಯಾವಲೋಕನ ,ಭಕ್ತಿಭಂಡಾರಿ ಬಸವಣ್ಣ ,ಹಿರೇಮಲ್ಲೂರು ,ವಚನಧರ್ಮಸಾರ

ಉ: ಹಿರೇಮಲ್ಲೂರು

೨.ಮಾರಸಿಂಹ ,ಚಾವುಂಡರಾಯ , ರಾಚಮಲ್ಲ , ರಕ್ಕಸಗಂಗ

ಉ: ಚಾವುಂಡರಾಯ

೩.ರಾಜೇಶ್ವರ ,ಮರಳೇಶ್ವರ ,ಮಹಾಲಿಂಗೇಶ್ವರ ,ಪಾತಾಳೇಶ್ವರ

ಉ: ಮಹಾಲಿಂಗೇಶ್ವರ

೪.ಮುಚ್ಚಿಟ್ಟು,ಹಾಡುತ್ತಿರುವ ,ಉದ್ಯಮವನ್ನು, ಬಾನಿನೆಡೆ

ಉ: ಉದ್ಯಮವನ್ನು

**ಅಭ್ಯಾಸ ಚಟುವಟಿಕೆ**

೧. ಸಂಧಿ ಎಂದರೇನು ?ಅದರ ವಿಧಗಳನ್ನು ತಿಳಿಸಿ .

ಉತ್ತರ : ಪದರಚನೆ ಆಗುವಾಗ ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದಂತೆ ಒಟ್ಟು ಸೇರುವುದು ಸಂಧಿ ಎನಿಸುವುದು. ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಸಂಧಿಯಾದರೆ ಅದು ಸ್ವರ ಸಂಧಿ,ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಅಥವಾ ವ್ಯಂಜನದ ಮುಂದೆ ವ್ಯಂಜನ ಇದ್ದು ಸಂಧಿಯಾದರೆ ಅದು ವ್ಯಂಜನ ಸಂಧಿ .ಸಂಧಿಗಳಲ್ಲಿ ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿ ಎಂದು ಎರಡು ವಿಧಗಳಿವೆ.

೨. ಸಂಧಿಕ್ರಿಯೆ ಎಂದರೇನು ?ಅದರ ವಿಧಗಳನ್ನು ತಿಳಿಸಿ .

ಸಂಧಿಯಾಗುವಾಗ ಕೆಲವು ವ್ಯತ್ಯಾಸಗಳಾಗುತ್ತವೆ. ಈ ವ್ಯತ್ಯಾಸವೇ ಸಂಧಿ ಕ್ರಿಯೆ. ಈ ವ್ಯತ್ಯಾಸ ಪೂರ್ವಪದದ ಅಂತ್ಯದಲ್ಲಿ ಅಥವಾ ಉತ್ತರಪದದ ಆದಿಯಲ್ಲಿ ಇಲ್ಲವೇ ಎರಡೂ ಪದಗಳ ಮಧ್ಯದಲ್ಲಿ ನಡೆಯುತ್ತದೆ.ಈ ವರ್ಣ ವ್ಯತ್ಯಾಸಕ್ಕೆ ಅನುಗುಣವಾಗಿ ಲೋಪ,ಆಗಮ ,ಆದೇಶ ಎಂದು ಮೂರು ವಿಧದ ಸಂಧಿಕ್ರಿಯೆಗಳು ನಡೆಯುತ್ತವೆ.

೩. ಪ್ರಕೃತಿಭಾವ ಎಂದರೇನು ?ಉದಾಹರಣೆ ಕೊಡಿ .

ಸ್ವರದ ಮುಂದೆ ಸ್ವರ ಬಂದರೂ ಸಂಧಿಯಾಗದೆ ಇದ್ದ ಹಾಗೆಯೇ ಇರುವುದು ಪ್ರಕೃತಿಭಾವ .ಉದಾಹರಣೆಗೆ ಅಯ್ಯೋ+ಇದೇನು ?, ಅಕ್ಕಾ+ಇತ್ತ ಬಾ

ಕೊಟ್ಟಿರುವ ಪದಗಳನ್ನು ವಿಂಗಡಿಸಿ ಸಂಧಿ ಹೆಸರಿಸಿ.

ನಿಮಿಷವಾಗಿದೆ =ನಿಮಿಷ+ಆಗಿದೆ=ಆಗಮಸಂಧಿ

ದಿನವೆಲ್ಲ =ದಿನ+ಎಲ್ಲ= ಆಗಮಸಂಧಿ

ನಿಲ್ದಾಣೆಯನ್ನು =ನಿಲ್ದಾಣೆ+ಅನ್ನು =ಆಗಮಸಂಧಿ

ಸಂದೇಹವಿಲ್ಲ =ಸಂದೇಹ+ಇಲ್ಲ=ಆಗಮಸಂಧಿ

ಕಥನವಿದೆ =ಕಥನ+ಇದೆ=ಆಗಮಸಂಧಿ

ಮಿಗಿಲಾಗಿ =ಮಿಗಿಲುಆಗಿಲೋಪಸಂಧಿ

ಚರಿತ್ರೆಯಿದೆ =ಚರಿತ್ರೆ+ಇದೆ=ಆಗಮಸಂಧಿ

ಹೆಸರಾಗಿದೆ =ಹೆಸರು+ಆಗಿದೆ=ಲೋಪಸಂಧಿ

ತಲೆಯೆತ್ತಿ =ತಲೆ+ಎತ್ತಿ =ಆಗಮಸಂಧಿ

ಮುಚ್ಚಿಟ್ಟು =ಮುಚ್ಚಿ+ಇಟ್ಟು =ಲೋಪಸಂಧಿ

ಬಾನಿನೆಡೆ =ಬಾನಿನ +ಎಡೆ=ಲೋಪಸಂಧಿ

ಪೂರ್ತಿಯಾಗು =ಪೂರ್ತಿ+ಆಗು=ಆಗಮಸಂಧಿ


ಹಳ್ಳವೊಂದು =ಹಳ್ಳ+ಒಂದು =ಆಗಮಸಂಧಿ

ತಾಸಾಗಿದೆ =ತಾಸು+ಆಗಿದೆ=ಲೋಪಸಂಧಿ

ಊರಿಂದ =ಊರು+ಇಂದ= ಲೋಪಸಂಧಿ

## ಗದ್ಯ–೪ ಸಾರ್ಥಕ ಬದುಕಿನ ಸಾಧಕ ವ್ಯಕ್ತಿಚಿತ್ರ – ಎನ್ .ಎಸ್ .ಲಕ್ಷ್ಮೀನಾರಾಯಣ ಭಟ್ಟ

ಕೃತಿಕಾರರರ ಪರಿಚಯ :



ಎನ್ .ಎಸ್. ಲಕ್ಷ್ಮೀನಾರಾಯಣ ಭಟ್ಟರು ೨೯/೧೦/೧೯೩೬ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು.ಇವರು ವೃತ್ತ,ಚಿತ್ರಕೂಟ,ಸುಳಿ ಮೊದಲಾದ ಕವನ ಸಂಕಲನಗಳನ್ನು,ದೀಪಿಕಾ ,ಭಾವಸಂಗಮ,ಬಂದೇ ಬರತಾವ ಬಾರೋವಸಂತಬಾರೋ ಮೊದಲಾದ ಧ್ವನಿಸುರುಳಿಗಳನ್ನೂ ,ಸಾಹಿತ್ಯರತ್ನ ಸಂಪುಟ ಎನ್ನುವ ಸಾಹಿತ್ಯಸಾಧಕರ ಕುರಿತಾದ ಕೃತಿಯನ್ನೂ ಬರೆದಿದ್ದಾರೆ. ಇವರಿಗೆ ರಾಜ್ಯಸಾಹಿತ್ಯಅಕಾಡೆಮಿ ಪ್ರಶಸ್ತಿ,ಶಿವರಾಮಕಾರಂತ ಪ್ರಶಸ್ತಿ ,ರಾಜ್ಯೋತ್ಸವ ಪ್ರಶಸ್ತಿ ಆರ್ಯಭಟ ಪ್ರಶಸ್ತಿ ಮೊದಲಾದವುಗಳು ದೊರೆತಿವೆ.ಪ್ರಸ್ತುತ ಗದ್ಯಭಾಗವನ್ನು ಇವರ ಸಾಹಿತ್ಯ ರತ್ನ ಸಂಪುಟದಿಂದ ಆಯ್ದುಕೊಳ್ಳಲಾಗಿದೆ.

### ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಡಿ.ವಿ.ಜಿ.ಅವರ ಹುಟ್ಟೂರು ಯಾವುದು ?

ಉ: ಡಿ.ವಿ.ಜಿ.ಅವರ ಹುಟ್ಟೂರುಕೋಲಾರ ಜಿಲ್ಲೆಯ ಮುಳುಬಾಗಿಲು.

೨.ಡಿ.ವಿ.ಜಿ. ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು ?

ಉ: ಡಿ.ವಿ.ಜಿ. ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಮಹರ್ಷಿಪ್ರಾಯರಾದ ಚೇತನ ಎಂದು ಡಿ.ವಿ.ಜಿ.ಯವರು ಬಣ್ಣಿಸಿರುವ ಅವರ ಅಜ್ಜಿ(ತಾಯಿಯ ತಾಯಿ )ಸಾಕಮ್ಮ ಮತ್ತು ಅವರ ಸೋದರಮಾವ ತಿಮ್ಮಪ್ಪ

೩.ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು ?

ಉ: ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಡಿ.ವಿ.ಜಿ. ಅವರ ತಂದೆಗೆ ಬೇಕಾಗಿದ್ದ, ಬಂಡಿ ಹೊಡೆಯುವ ವ್ಯಕ್ತಿ ರಸೂಲ್ ಖಾನ್

೪ ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು ?

ಉ: ವಿಶ್ವೇಶ್ವರಯ್ಯನವರು ಮೈಸೂರು ಸರ್ಕಾರದಲ್ಲಿ ದಿವಾನ ಹುದ್ದೆಯನ್ನು ಅಲಂಕರಿಸಿದ್ದರು.

೫.ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ ಯಾವುದು ?

ಉ: ಡಿ.ವಿ.ಜಿ.ಅವರು ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯನ್ನು ಸ್ಥಾಪಿಸಿದರು.

### ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧.ರಸೂಲ್ ಖಾನ್ ಅವರು ಡಿವಿಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು ?

ಉ: ತಮ್ಮ ಸ್ವಂತ ಊರಾದ ಮುಳಬಾಗಿಲಿನಲ್ಲಿ ಲೋವರ್ ಸೆಕೆಂಡರಿ ಶಿಕ್ಷಣವನ್ನು ಪೂರ್ಣಗೊಳಿಸಿದ ಡಿವಿ.ಜಿ.ಯವರಿಗೆ ಮುಂದಿನ ಓದಿಗೆ ಬೇರೆ ಊರಿಗೆ ಹೋಗಬೇಕಿತ್ತು. ಹಣದ ಅನುಕೂಲವಿಲ್ಲದುದರಿಂದ ಅವರ ತಂದೆ ಮತ್ತು ಅಜ್ಜಿ ಓದು ಇಲ್ಲಿಗೇ ಸಾಕು ಎಂದು ತೀರ್ಮಾನಿಸಿದರು.ಆಗ ಅವರ ಭಾಗ್ಯ ಎಂಬಂತೆ ಸಹಾಯಕ್ಕೆ ಬಂದ ವ್ಯಕ್ತಿ ರಸೂಲ್ ಖಾನ್.ಬಡವ, ಪ್ರಾಮಾಣಿಕ,ಬಂಡಿ ಹೊಡೆಯುವ ವ್ಯಕ್ತಿಯಾಗಿದ್ದ ಅವನು ಅವರ ತಂದೆಗೆ ಬೇಕಾದವನಾಗಿದ್ದು , ಗುಂಡಣ್ಣ ತುಂಬ ಚುರುಕಾದ ಹುಡುಗ ,ಅವನು ಮುಂದೆ ಓದಲೇಬೇಕೆಂದು ಅವನನ್ನು ತನ್ನ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್

ಪೇಟೆಗೆ ಹೋಗ್ತೀನಿ.ಬೆಂಗಳೂರಿನ ರೈಲಿನಲ್ಲಿ ಕೂರಿಸಿ ಟಿಕೆಟ್ ಕೊಡಿಸಿ ಒಂದು ರೂಪಾಯಿ ಕೈ ಖರ್ಚಿಗೆ ಕೊಡ್ತೀನಿ ಅವನ ಓದು ನಡೆಯಲೇಬೇಕು ಎಂದು ಹೇಳಿ ಹಠಹಿಡಿದು ಅದರಂತೆಯೇ ನಡೆದುಕೊಂಡ.

೨.ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು ?

ಉ: ವಿಶ್ವೇಶ್ವರಯ್ಯ ಮೈಸೂರಿನ ದಿವಾನರಾಗಿದ್ದ ಸಂದರ್ಭದಲ್ಲಿ ಡಿ.ವಿ.ಜಿ ಯವರು ಆಗಿನ್ನೂಯುವ ಪತ್ರಕರ್ತರು.ದಸರಾ ಉತ್ಸವದ ಸಂದರ್ಭದಲ್ಲಿ ವಿಶೇಷ ವರದಿ ನೀಡಿದ ಪತ್ರಿಕೆಗಳ ಪತ್ರಕರ್ತರಿಗೆ ದೊಡ್ಡ ಮೊತ್ತದ ಸಂಭಾವನೆ ಬಂದಿತು.ಉಳಿದ ಪತ್ರಕರ್ತರಿಗೆ ಸಂದ ಹಾಗೆಯೇ ಡಿ.ವಿ.ಜಿ.ಯವರಿಗೂ ದೊರೆತಾಗ ಅವರು ಅದನ್ನುಸರ್ಕಾರಕ್ಕೆ ಮರಳಿಸಿದರು.ವರದಿ ಮಾಡುವುದು ಪತ್ರಕರ್ತರ ಕರ್ತವ್ಯ ಎಂದು ,ತನಗೆ ಆ ಹಣ ಬೇಡವೇಬೇಡ ಎಂದು ಅವರು ಹೇಳಿದಾಗ ವಿಶ್ವೇಶ್ವರಯ್ಯನವರು ತಮ್ಮ ಕಾರ್ಯದರ್ಶಿಗೆ ಈ ಮನುಷ್ಯನ ರೀತಿಯೇ ಬೇರೆ.ಇವರಿಗೆ ನಾವು ಹಣಕೊಡಲುಬರುವುದಿಲ್ಲ ,ಅದನ್ನು ಹಿಂದಕ್ಕೆತೆಗೆದುಕೊಂಡು ಬಿಡಿ ಎಂದರು.

೩.ಡಿ.ವಿ.ಜಿ ಅವರು ಏಕೆ ಸಂಭಾವನೆಯನ್ನು ಪಡೆಯಲಿಲ್ಲ?

ಉ: ಮೈಸೂರಿನ ದಿವಾನರಾಗಿದ್ದ ವಿಶ್ವೇಶ್ವರಯ್ಯನವರು ತಮ್ಮ ಕೆಲಸ ಕಾರ್ಯಗಳಲ್ಲಿ ಎಷ್ಟೋ ಜನ ಮೇಧಾವಿಗಳ ಸಹಾಯ ಪಡೆಯುತ್ತಿದ್ದರು.ಪ್ರತಿಯಾಗಿ ಅದಕ್ಕೆ ಸಂಭಾವನೆಯನ್ನು ಕೊಡುತ್ತಿದ್ದರು.ಡಿ.ವಿ.ಜಿ ಯವರಿಂದಲೂ ಅನೇಕಸಲ ಕೆಲಸಮಾಡಿಸಿಕೊಂಡಿದ್ದ ಅವರು ಮೊದಲ ಸಲ ಅವರಿಗೆ ಸಂಭಾವನೆ ಕೊಡಲುಹೋದಾಗ ಡಿ.ವಿ.ಜಿ.ಒಪ್ಪಲಿಲ್ಲ.ಇದು ರಾಜ್ಯದಕೆಲಸ.ಅಲ್ಲದೆ ವಿಶ್ವೇಶ್ವರಯ್ಯ ಅವರು ಮಹಾನ್ ವ್ಯಕ್ತಿ .ಅವರ ಜೊತೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ .ಅದಕ್ಕೆ ಸಂಭಾವನೆ ಎಂದಿಗೂ ಕೂಡದು ಎಂದರು.

೪.ಡಿ.ವಿ.ಜಿ. ಅವರ ಶ್ರೀಮತಿ ಅವರ ಬಂಧುಗಳ ಮನೆಯಲ್ಲಿ ನಡೆದ ಉತ್ಸವಕ್ಕೆ ಏಕೆ ಹೋಗಿರಲಿಲ್ಲ?

ಉ: ಡಿ.ವಿ.ಜಿ.ಯವರ ಪತ್ನಿಯ ಬಳಿ ಇದ್ದುದು ಒಂದೇ ಸೀರೆ.ಅದೂ ಒಂದೆರಡು ಕಡೆ ಹರಿದಿತ್ತು.ಅವರು ಆ ಬಟ್ಟೆಯಲ್ಲಿ ಕಾಣಿಸಿಕೊಂಡರೆ ಜನರು ಡಿ.ವಿ.ಜಿ.ಯವರನ್ನು ಕುರಿತು ಆಡಿಕೊಳ್ಳುವರೆಂದು ಅವರ ಪತ್ನಿಗೆ ಅನ್ನಿಸಿದ್ದರಿಂದ ಬಂಧುಗಳ ಮನೆಗೆ ಹೋಗಿ ಬರುವುದು ಅವರ ಕರ್ತವ್ಯ ಹೇಗೋ ಹಾಗೆಯೇ ಡಿ.ವಿ.ಜಿ.ಯವರ ಮರ್ಯಾದೆಗೆ ಊನ ಬರದಂತೆ ನೋಡಿಕೊಳ್ಳುವುದು ತಮ್ಮಕರ್ತವ್ಯವೆಂದು ಭಾವಿಸಿ ಅವರು ಬಂಧುಗಳ ಮನೆಗೆ ಹೋಗಲಿಲ್ಲ...

೫.ಎಲ್ಲರೊಂದಿಗೆ ಹೇಗೆ ಬಾಳಬೇಕೆಂದು ಡಿ.ವಿ.ಜಿ.ಹೇಳಿದ್ದಾರೆ ?

ಉ: ಜೀವನವನ್ನುನಾವು ಬಂದಹಾಗೆ ಎದುರಿಸಬೇಕು ,ಕಷ್ಟ ಸುಖ ಬಂದಾಗ ಅದನ್ನು ಸಮಾನವಾಗಿ ಸ್ವೀಕರಿಸಬೇಕು.ಬೆಟ್ಟದ ಕೆಳಗಿನ ಹುಲ್ಲಿನಂತೆ ವಿನಯ ವಿಧೇಯತೆಯನ್ನು ಅಳವಡಿಸಿಕೊಂಡು ಮನೆಗೆ ಸುವಾಸನೆ ಬೀರುವ ಮಲ್ಲಿಗೆಯಂತೆ ಮೃದು ನಡೆ ನುಡಿಯಿಂದ ಬಾಳಬೇಕು.ಜೀವನದಲ್ಲಿ ವಿಧಿ ನೀಡುವ ಕಷ್ಟಗಳೆಂಬ ಮಳೆಗೆ ಹೆದರದೆ ,ವಿಚಲಿತನಾಗದೆ ,ಕಲ್ಲಿನಂತಿರಬೇಕು.ನೊಂದವರಿಗೆ ,ಬಡವರಿಗೆ ಬೆಲ್ಲ ಸಕ್ಕರೆಯಂತೆ ಸಿಹಿಯಾಗಿ ,ಪ್ರೀತಿಯನ್ನು ತೋರಬೇಕು.ಬಡವ ಬಲ್ಲಿದರೆನ್ನದೆ ಎಲ್ಲರಲ್ಲಿ ಒಂದಾಗಿ ಬಾಳಬೇಕು ಎಂದು ಡಿ.ವಿ.ಜಿ.ಹೇಳಿದ್ದಾರೆ.

ಏಳು –ಎಂಟು ವಾಕ್ಯಗಳಲ್ಲಿ ಉತ್ತರಿಸಿ.

೧. ಡಿ.ವಿ.ಜಿ ಅವರ ವ್ಯಕ್ತಿತ್ವವನ್ನು ಸಂಗ್ರಹಿಸಿ ಬರೆಯಿರಿ.

ಉ: ಡಿ.ವಿ.ಜಿ.ಯವರದು ಸತ್ವಶಾಲಿ ವ್ಯಕ್ತಿತ್ವ ,ಕೇವಲ ಶೀಲ ,ವಿವೇಕ, ನಿಸ್ಪೃಹತೆ ,ಸ್ವಯಂ ಆರ್ಜಿತ ಪಾಂಡಿತ್ಯ ,ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ ಡಿ.ವಿ.ಜಿ. ದೊಡ್ಡ ಮೇಧಾವಿಯೆಂದು ವಿದ್ವಾಂಸರ ವಲಯದಲ್ಲಿ ಹೆಸರಾದವರು.ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದ ವೇಳೆಯಲ್ಲಿ ತಾವು ಮಾಡಿದ ಕಾರ್ಯಕ್ಕೆಎರಡು ಬಾರಿ ಸಂಭಾವನೆ ಪಡೆಯಲು ಅವಕಾಶವಿದ್ದರೂ ನಿರಾಕರಿಸಿ ಹೃದಯ ಶ್ರೀಮಂತಿಕೆ ಮೆರೆದ ಸ್ವಾಭಿಮಾನಿ . ಕನ್ನಡ ಸಾರಸ್ವತ

ಲೋಕದ ಭೀಷ್ಮರೆಂದು ಕರೆಸಿಕೊಂಡವರು.ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು.ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ ಅವರದು.ಸಾಹಿತಿ ಮಾತ್ರವಲ್ಲದೇ ಹೆಸರಾಂತ ಪತ್ರಕರ್ತರೂ ಆಗಿದ್ದವರು.ಹಿರಿಯ ವೇದಾಂತಿಯಾಗಿದ್ದರು.ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳುವಳಿಕೆಯುಳ್ಳವರಾಗಿದ್ದರು.ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕೆ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದವರು.ಮಹಾ ಧೀಮಂತ ಎಂದು ಅವರನ್ನು ವರ್ಣಿಸುವುದು ಸೂಕ್ತವೆನ್ನಿಸುವುದು.

೨. ಡಿವಿ.ಜಿ.ಅವರಿಗೂ ಅವರ ಶ್ರೀಮತಿ ಅವರಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.
ಉ: ಬಂದುಗಳೊಬ್ಬರ ಮನೆಯಲ್ಲಿ ನಡಯುತ್ತಿದ್ದ ಉತ್ಸವಕ್ಕೆ ಹೋಗಲು ಸಾಧ್ಯವಾಗದ ಡಿ.ವಿ.ಜಿ.ಯವರು ತಮ್ಮ ಮಕ್ಕಳನ್ನುಅಲ್ಲಿಗೆ ಕಳಿಸಿದ್ದರು.ತಮ್ಮಪತ್ನಿ ಹೋಗುವರೆಂದು ನಿರೀಕ್ಷಿಸಿದ ಅವರಿಗೆ ಹೆಂಡತಿ ಆರತಿ ಅಕ್ಷತೆಯ ಸಮಯವಾದರೂ ಹೋಗದೇ ಇರುವುದು ನೋಡಿ ಅಸಮಾಧಾನವಾಗಿ ನೀನು ಉತ್ಸವಕ್ಕೆ ಹೋಗುವುದಿಲ್ಲವೇ ಎಂದು ಕೇಳಿದರು.ಅವರ ಪತ್ನಿ ಇಲ್ಲ ಎಂದರು .ಯಾಕೆಂದು ಕೇಳಿದಾಗ ಹೇಗೆಂದರೂ ಮಕ್ಕಳನ್ನು ಕಳಿಸಿರುವೆನಲ್ಲ ಎಂದು ಪತ್ನಿ ಹೇಳಿದರು.ಆದರೆ ನೀನೂ ಹೋಗಬೇಕಿತ್ತು,ಅವರು ನಮಗೆ ಬಹಳ ಬೇಕಾದವರು ನೀನು ಹೋಗದಿದ್ದರೆ ಅವರಿಗೆ ಬೇಸರವಾಗುತ್ತದೆ ಎಂದು ಡಿ.ವಿ.ಜಿ.ಯವರು ಹೇಳಿದಾಗ ಮನೆಯಲ್ಲಿ ಯಾರಾದರು ಇರಬೇಕಲ್ಲ ಎಂದು ಅವರ ಪತ್ನಿ ಉತ್ಸವಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳಲು ಬಯಸುತ್ತಾರೆ.ಡಿ.ವಿ.ಜಿ.ಮತ್ತೆ ಮತ್ತೆ ಕೇಳಿದಾಗ ನಿಜವಾದ ಕಾರಣವನ್ನು ಹೇಳುತ್ತ ಅವರ ಹೆಂಡತಿ ತಾನು ಕಾರಣವನ್ನು ಹೇಳಬಾರದು ಎಂದಿದ್ದೆ ತನ್ನ ಬಳಿ ಇರುವುದುಒಂದೇ ಸೀರೆ,ಅದು ಒಂದೆರಡು ಕಡೆ ಹರಿದು ಹೋಗಿದೆ.ಅದೇ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ಡಿ.ವಿ.ಜಿ.ಯವರಬಗ್ಗೆ ಆಡಿಕೊಳ್ಳುವುದಾಗಿಯೂ ಬಂಧುಗಳ ಮನೆಗೆ ಹೋಗಿಬರುವುದು ತಮ್ಮ ಕರ್ತವ್ಯಹೇಗೋ ಹಾಗೆಯೇ ಡಿ.ವಿ.ಜಿ.ಯವರ ಮರ್ಯಾದೆಗೆ ಊನ
ಬರದಂತೆ ನೋಡಿಕೊಳ್ಳುವುದು ತನ್ನಕರ್ತವ್ಯ ಎಂದು ಉತ್ತರಿಸುವರು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.
೧. '' ಏನು ಬಂದಿರಿ ಗುಂಡಪ್ಪ?''
ಉ: ಈ ಮೇಲಿನ ವಾಕ್ಯವನ್ನು ಡಾ|| ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಬರೆದ ಸಾಹಿತ್ಯ ರತ್ನಸಂಪುಟ ಕೃತಿಯಿಂದ ಆರಿಸಲಾದ ಸಾರ್ಥಕ ಬದುಕಿನ ಸಾಧಕ ಎಂಬ ಗದ್ಯ ಬಾಗದಿಂದ ಆರಿಸಿಕೊಳ್ಳಲಾಗಿದೆ.ಈ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದ್ದಾರೆ .
ಸಂದರ್ಭ : ವಿಶ್ವೇಶ್ವರಯ್ಯನವರು ಮೈಸೂರಿನ ದಿವಾನರಾಗಿದ್ದ ಸಂದರ್ಭದಲ್ಲಿ ಡಿ.ವಿ.ಜಿ. ಯುವ ಪತ್ರಕರ್ತರು.ಆ ಸಮಯದಲ್ಲಿ ದಸರಾ ಸಂದರ್ಭದಲ್ಲಿ ವಿಶೇಷ ವರದಿ ನೀಡಿದ ಷತ್ರಿಕೆಗಳ ಪತ್ರಕರ್ತರಿಗೆ ದೊಡ್ಡ ಮೊತ್ತದ ಸಂಭಾವನೆ ಕೊಡಲಾಯಿತು.ಡಿ.ವಿ.ಜಿ.ಯವರಿಗೂ ಸಂಭಾವನೆ ದೊರೆಯಿತು.ಆಗ ಅವರು ತಮಗೆ ಬಂದ ಹಣವನ್ನುಮರಳಿಸಲು ವಿಶ್ವೇಶ್ವರಯ್ಯನವರ ಬಳಿ ಬಂದಾಗ ವಿಶ್ವೇಶ್ವರಯ್ಯ ಮೇಲಿನಂತೆ ಕೇಳಿದರು.
ಸ್ವಾರಸ್ಯ : ಡಿವಿಜಿ ಮತ್ತು ವಿಶ್ವೇಶ್ವರಯ್ಯನವರ ನಡುವಿನ ಆತ್ಮೀಯತೆಯನ್ನು ಪ್ರಸ್ತುತ ವಾಕ್ಯವು ಸುಚಿಸುವುದು.

೨. ''ನೀನು ಉತ್ಸವಕ್ಕೆ ಹೋಗುವುದಿಲ್ಲವೇ?''
ಉ: ಈ ಮೇಲಿನ ವಾಕ್ಯವನ್ನು ಡಾ|| ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಬರೆದ ಸಾಹಿತ್ಯ ರತ್ನಸಂಪುಟ ಕೃತಿಯಿಂದ ಆರಿಸಲಾದ ಸಾರ್ಥಕ ಬದುಕಿನ ಸಾಧಕ ಎಂಬ ಗದ್ಯ ಬಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಈ ಮಾತನ್ನು ಡಿ.ವಿ.ಜಿ.ಹೇಳಿದ್ದಾರೆ.ಡಿ.ವಿ.ಜಿಯವರ ಬಂಧುಗಳೊಬ್ಬರ ಮನೆಯಲ್ಲಿ ಒಂದು ಉತ್ಸವ ನಡೆಯಿತು.ಡಿ.ವಿ.ಜಿ.ಗೆ ಹೋಗಲು ಸಾಧ್ಯವಾಗಲಿಲ್ಲ .ಮಕ್ಕಳನ್ನು ಕಳಿಸಿದರು.ಆರತಿ ಅಕ್ಷತೆಯ ಹೊತ್ತಾದರೂ ಅವರ ಹೆಂಡತಿ ಹೋಗದೇ ಮನೆಯಲ್ಲೇ ಇದ್ದರು.ಆಗ ಡಿ.ವಿ.ಜಿ.ಯವರು ಅಸಮಾಧಾನದಿಂದ ಮೇಲಿನಂತೆ ಕೇಳಿದರು.

ಸ್ವಾರಸ್ಯ: ಪರಿಸ್ಥಿತಿಯ ಅರಿವಿರದ ಡಿವಿಜಿಯವರು ಪತ್ನಿ ಯಾಕೆ ಉತ್ಸವಕ್ಕೆ ಹೋಗುತ್ತಿಲ್ಲ ಎಂದು ಕೂತೂಹಲ ವ್ಯಕ್ತಪಡಿಸಿರುವುದನ್ನು ಮೇಲಿನ ವಾಕ್ಯವು ಸೂಚಿಸುವುದ.

೩.''ನನ್ನ ಹತ್ತಿರ ಇರುವುದು ಇದೊಂದೇ ಸೀರೆ''

ಉ: ಈ ಮೇಲಿನ ವಾಕ್ಯವನ್ನು ಡಾ|| ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಬರೆದ ಸಾಹಿತ್ಯ ರತ್ನಸಂಪುಟ ಕೃತಿಯಿಂದ ಆರಿಸಲಾದ ಸಾರ್ಥಕ ಬದುಕಿನ ಸಾಧಕ ಎಂಬ ಗದ್ಯ ಬಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಡಿ.ವಿ.ಜಿ.ಯವರ ಪತ್ನಿ ಡಿ.ವಿ.ಜಿ.ಯವರಿಗೆ ಈ ಮಾತನ್ನು ಹೇಳಿದರು.

ಡಿ.ವಿ.ಜಿಯವರ ಬಂಧುಗಳೊಬ್ಬರ ಮನೆಯಲ್ಲಿ ಉತ್ಸವ ನಡೆದಾಗ ಡಿ.ವಿ.ಜಿ.ಯವರು ಹೋಗಲಾಗದ ಕಾರಣ ತಮ್ಮ ಮಕ್ಕಳನ್ನು ಕಳಿಸಿದ್ದರು.ಅಷ್ಟಲ್ಲದೇ ಹೇಗೆಂದರೂ ತಮ್ಮಪತ್ನಿ ಹೋಗುವರೆಂದು ಭಾವಿಸಿದ್ದರು.ಆದರೆ ಆರತಿ ಅಕ್ಷತೆಯ ವೇಳೆಯಾದರೂ ಅವರ ಪತ್ನಿ ಮನೆಯಲ್ಲೇ ಇರುವುದನ್ನುನೋಡಿ ಅಸಮಾಧಾನದಿಂದ ವಿಚಾರಿಸಿದಾಗ ಅವರ ಪತ್ನಿ ಮೇಲಿನಂತೆ ಹೇಳಿದರು.

ಸ್ವಾರಸ್ಯ: ಡಿವಿಜಿಯವ ಮನೆಯ ಆರ್ಥಿಕ ಪರಿಸ್ಥಿತಿಯನ್ನು ಮೇಲಿನ ವಾಕ್ಯವು ಸೂಚಿಸುವುದು.

೪.''ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ''

ಉ: ಈ ಮೇಲಿನ ವಾಕ್ಯವನ್ನು ಡಾ|| ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಬರೆದ ಸಾಹಿತ್ಯ ರತ್ನಸಂಪುಟ ಕೃತಿಯಿಂದ ಆರಿಸಲಾದ ಸಾರ್ಥಕ ಬದುಕಿನ ಸಾಧಕ ಎಂಬ ಗದ್ಯ ಬಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ್ದಾರೆ.

ಸಂದರ್ಭ : ಇಳೆಯಿಂದ ಕುಡಿಯೊಡೆದು ಮೊಳಕೆ ಭೂಮಿಯ ಪದರವನ್ನುಸೀಳಿಕೊಂಡು ಬರುವಾಗ ಯಾವುದೇ ಅಬ್ಬರ ,ಆರ್ಭಟಗಳಿಲ್ಲದೇ ಬರುತ್ತದೆ.ಮರದಲ್ಲಿ ಕಾಯಿ ಹಣ್ಣಾಗುವಾಗ ನಾನು ಹಣ್ಣಾಗುತ್ತಿದ್ದೇನೆ ಎಂದು ತುತ್ತೂರಿ ಊದಿ ಮಾಗುವುದಿಲ್ಲ .ಜಗತ್ತಿಗೆ ಬೆಳಕನ್ನು ನೀಡುವ ಸೂರ್ಯಚಂದ್ರರೂ ಸಹ ಶಬ್ದವಿಲ್ಲದೆ ತಮ್ಮತಮ್ಮ ಕೆಲಸವನ್ನು ಮಾಡಿ ಹೋಗುತ್ತಾರೆ.ಹಾಗಿದ್ದಲ್ಲಿ ನಾವು ಯಾವ ಸಾಧನೆಗಳನ್ನು ಮಾಡಿದ್ದೇವೆ ಎಂದು ಅಹಂಕಾರ ಪಡಬೇಕು ತುಟಿಗಳನ್ನು ಹೊಲಿದು ಕಾರ್ಯ ಮಾಡಬೇಕು ಎಂದು ಹೇಳಿದ್ದಾರೆ.

ಸ್ವಾರಸ್ಯ: ಅಹಂಕಾರವಿಲ್ಲದೇ ನಿಸ್ವಾರ್ಥ ಸೇವೆಯನ್ನು ಸಲ್ಲಿಸುವ ಜೀವನ ನಮ್ಮದಾಗಿರಬೇಕು ಎಂಬುದು ಮೇಲಿನ ವಾಕ್ಯದ ಅರ್ಥವಾಗಿದೆ.

೫.''ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ''

ಉ: ಈ ಮೇಲಿನ ವಾಕ್ಯವನ್ನು ಡಾ|| ಎನ್.ಎಸ್.ಲಕ್ಷ್ಮೀನಾರಾಯಣಭಟ್ಟರು ಬರೆದ ಸಾಹಿತ್ಯ ರತ್ನಸಂಪುಟ ಕೃತಿಯಿಂದ ಆರಿಸಲಾದ ಸಾರ್ಥಕ ಬದುಕಿನ ಸಾಧಕ ಎಂಬ ಗದ್ಯ ಬಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಡಿ.ವಿ.ಜಿ.ಯವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಹೇಳಿದ್ದಾರೆ.

ಸಂದರ್ಭ : ದೊಡ್ಡ ಬೆಟ್ಟದ ಕೆಳಗಿನ ಹುಲ್ಲು ದೀನತೆಯ ಪ್ರತೀಕ ,ನಾನು ಬೆಟ್ಟದಷ್ಟು ದೊಡ್ಡವನಲ್ಲ.ನಾನು ಮಾಡುವ ಕೆಲಸ ಬೆಟ್ಟದಷ್ಟು ದೊಡ್ಡದಲ್ಲ ಎಂಬ ಅರಿವು ಜೀವನ ಸಫಲತೆಗೆ ದಾರಿ.ಊರಿಗೆ ಉಪಕಾರಿ ಮನೆಗೆ ಮಾರಿ ಎಂಬ ನುಡಿಗೆ ಹೊರತಾಗಿರಬೇಕು.ಕಷ್ಟಗಳನ್ನೆಲ್ಲ ಕಲ್ಲು ಹೃದಯ ಮಾಡಿಕೊಂಡು ಎದುರಿಸಬೇಕು,ದೀನ ದುರ್ಬಲರಿಗೆ ಒಳ್ಳೆಯನಾಗಿರು.ಲೋಕದ ವಿಚಾರದಲ್ಲಿ ಸಹಾನುಭೂತಿಯುಳ್ಳವನಾಗಿರು ಎಂದು ಡಿ.ವಿ.ಜಿಯವರು ಹೇಳಿದ್ದಾರೆ.

ಸ್ವಾರಸ್ಯ: ದೀನರಿಗೆ ದುರ್ಬಲರಿಗೆ ಉಪಕಾರಿಯಾಗಿ ಬದುಕನ್ನು ನಡೆಸುವುದರಲ್ಲಿ ಹಿರಿತನವಿದೆ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

**ಬಿಟ್ಟ ಸ್ಥಳ ತುಂಬಿರಿ**

೧. ಮೈಸೂರು ರಾಜ್ಯದ ಪರಮೋಚ್ಚ ಅಧಿಕಾರ ಹಿಡಿದಿದ್ದವರು ------ (ಮಿರ್ಜಾ ಸಾಹೇಬರು )

೨. ಮಿರ್ಜಾ ಅವರ ಕಾಲಕ್ಕೆ ಡಿವಿಜಿ ದೊಡ್ಡ ------ ಎಂದು ವಿದ್ಯಾವಂತರ ವಲಯದಲ್ಲಿ ಹೆಸರಾಗಿದ್ದರು.(ಮೇಧಾವಿ)

೩.ಮುಳಬಾಗಿಲು ---- ಜಿಲ್ಲೆಗೆ ಸೇರಿದೆ.(ಕೋಲಾರ)

೪.ಡಿ.ವಿ.ಜಿ. ಅವರು ಮುಳಬಾಗಿಲಿನ ---- ಶಾಲೆಯಲ್ಲಿ ಲೋಯರ್ ಸೆಕೆಂಡರಿ ಪೂರ್ತಿಗೊಳಿಸಿದರು.(ಆಂಗ್ಲೋ ವರ್ನಾಕುಲರ್ ಶಾಲೆ)

೫. ಡಿವಿಜಿ ಅವರು ಕನ್ನಡ ಸಾರಸ್ವತ ಲೋಕದ ---ಎಂದು ಕರೆಸಿಕೊಂಡರು. (ಭೀಷ್ಮ)

**ಅಭ್ಯಾಸ ಚಟುವಟಿಕೆ**

೧. ನಾಮಪದ ಎಂದರೇನು ?

ನಾಮಪ್ರಕೃತಿಗಳಿಗೆ ನಾಮ ವಿಭಕ್ತಿಗಳು ಸೇರಿ ಆಗುವ ಪದವೇ ನಾಮಪದ .

೨. ನಾಮವಿಭಕ್ತಿ ಪ್ರತ್ಯಯಗಳೆಷ್ಟು ? ಅವು ಯಾವುವು ?

ನಾಮವಿಭಕ್ತಿ ಪ್ರತ್ಯಯಗಳು -೭

ಅವುಗಳೆಂದರೆ

| ವಿಭಕ್ತಿಗಳು | ಪ್ರತ್ಯಯಗಳು | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮಾ | ಉ | ಕರ್ತೃರ್ಥ | ರಾಮನು |
| ದ್ವಿತೀಯಾ | ಅನ್ನು | ಕರ್ಮಾರ್ಥ | ರಾಮನನ್ನು |
| ತೃತೀಯಾ | ಇಂದ | ಕರಣ | ರಾಮನಿಂದ |
| ಚತುರ್ಥೀ | ಗೆ,ಇಗೆ,ಕ್ಕೆ ,ಅಕ್ಕೆ | ಸಂಪ್ರದಾನ | ರಾಮನಿಗೆ |
| ಪಂಚಮೀ | ದೆಸೆಯಿಂದ | ಅಪಾದಾನ | ರಾಮನ ದೆಸೆಯಿಂದ |
| ಷಷ್ಠೀ | ಅ | ಸಂಬಂಧ | ರಾಮನ |
| ಸಪ್ತಮೀ | ಅಲ್ಲಿ | ಅಧಿಕರಣ | ರಾಮನಲ್ಲಿ |

ಕೊಟ್ಟಿರುವ ವಾಕ್ಯಗಳಲ್ಲಿರುವ ನಾಮಪದಗಳನ್ನು ಆರಿಸಿ ಬರೆಯಿರಿ.

೧. ಡಿವಿಜಿಯ ಊರು ಮುಳಬಾಗಿಲು

ನಾಮಪದಗಳು :ಡಿವಿಜಿ ,ಊರು,ಮುಳಬಾಗಿಲು .

೨.ಬೆಂಗಳೂರಿನ ರೈಲಿನಲ್ಲಿ ಕೂರಿಸುತ್ತೇನೆ.

ನಾಮಪದಗಳು : ಬೆಂಗಳೂರಿನ, ರೈಲಿನಲ್ಲಿ

೩. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲವದು .


ನಾಮಪದಗಳು : ವಿಶ್ವೇಶ್ವರಯ್ಯನವರು ,ದಿವಾನರು ,ಕಾಲ

೪. ಡಿವಿಜಿಯ ಬಂಧುಗಳ ಮನೆಯಲ್ಲಿ ಒಂದು ಉತ್ಸವವು ನಡೆಯಿತು.
ನಾಮಪದಗಳು : ಡಿವಿಜಿ,ಬಂಧುಗಳು,ಮನೆಯಲ್ಲಿ,ಒಂದು, ಉತ್ಸವ

ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆದು ಅದು ಯಾವ ವಿಭಕ್ತಿ ಎಂಬುದನ್ನು ಬರೆಯಿರಿ .
ದಿವಾನರನ್ನು –ಅನ್ನು =ದ್ವಿತೀಯಾ
ದಿನದಿನದ –ಅ =ಷಷ್ಠೀ
ಡಿವಿಜಿಗೆ –ಗೆ = ಚತುರ್ಥೀ
ಬಲದಿಂದ –ಇಂದ =ತೃತೀಯಾ
ವಲಯದಲ್ಲಿ –ಅಲ್ಲಿ =ಸಪ್ತಮೀ
ಮಂಕುತಿಮ್ಮನ –ಅ=ಷಷ್ಠೀ
ಶಿಕ್ಷಣವನ್ನು–ಅನ್ನು =ದ್ವಿತೀಯಾ
ಓದಿಗೆ –ಗೆ =ಚತುರ್ಥೀ
ಸಹಾಯಕ್ಕೆ –ಕ್ಕೆ =ಚತುರ್ಥೀ
ಬಂಡಿಯಲ್ಲಿ–ಅಲ್ಲಿ=ಸಪ್ತಮೀ
ದಯೆಯಿಂದ–ಇಂದ=ತೃತೀಯಾ
ರಸೂಲ್ ಖಾನನ –ಅ=ಷಷ್ಠೀ

# ಗದ್ಯ -೫ ಹೂವಾದ ಹುಡುಗಿ ಎ.ಕೆ.ರಾಮಾನುಜನ್

**ಕೃತಿಕಾರರ ಪರಿಚಯ**




ಎ.ಕೆ.ರಾಮಾನುಜನ್ ರವರು ಮಾರ್ಚ್ ೧೬ ,೧೯೨೯ ರಲ್ಲಿ ಮೈಸೂರಿನಲ್ಲಿ ಜನಿಸಿದರು. ಕನ್ನಡ ಹಾಗೂ ಇಂಗ್ಲಿಷ್ ಬಾಷೆಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದಲ್ಲಿ ಹೊಕ್ಕುಳದಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು ,ಕುಂಟೋಬಿಲ್ಲೆ ,ಮತ್ತೊಬ್ಬನ ಆತ್ಮಚರಿತ್ರೆ ಮೊದಲಾದ ಪ್ರಸಿದ್ಧ ಕೃತಿಗಳನ್ನು ಬರೆದಿದ್ದಾರೆ. ಕನ್ನಡ ವಚನ ಸಾಹಿತ್ಯವನ್ನು ಸ್ಪೀಕಿಂಗ್ ಆಫ್ ಶಿವ ಎಂದು ಅನುವಾದಿಸಿದ್ದಾರೆ. ಇವರ ಸಾಹಿತ್ಯಕ ಸಾಧನೆಗೆ ೧೯೭೬ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೮೩ ರಲ್ಲಿ ಪ್ರಸಿದ್ಧ ಮ್ಯಾಕ್ ಅರ್ಥರ್ ಫೆಲೋಷಿಪ್ ಗೌರವ ಸಂದಿದೆ.

ಪ್ರಸ್ತುತ ಹೂವಾದ ಹುಡುಗಿ ಜನಪದ ಕಥೆಯನ್ನು ಇವರ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಮುದುಕಿಯ ಕಿರಿಯ ಮಗಳು ಏಕೆ ಹೂವಿನ ಗಿಡವಾದಳು ?

ಉ: ತಾಯಿಯು ಕೂಲಿ ಮಾಡಿ ತಮ್ಮನ್ನು ಸಾಕುವುದು ಕಷ್ಟ ಎಂಬುದನ್ನರಿತ ಮುದುಕಿಯ ಮಗಳು ತಾನು ಹೂವಿನ ಗಿಡವಾದರೆ ಗಿಡದಲ್ಲಿ ಬಿಟ್ಟ ಹೂವನ್ನು ಮಾರಿ ಅವಳ ಕಷ್ಟಕ್ಕೆ ನೆರವಾಗಲು ತಾನು ಹೂವಿನ ಗಿಡವಾದಳು .

೨. ದೊರೆಯ ಹೆಂಡತಿ ಎಷ್ಟು ಹಣ ಕೊಟ್ಟಳು ?

ಉ: ದೊರೆಯ ಹೆಂಡತಿ ಹೂವಿಗೆ ಒಂದು ಮೊಗೆ ಹಣವನ್ನು ಕೊಟ್ಟಳು .

೩. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದ ?

ಉ: ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಮಂತ್ರಿಯ ಮಗನ ಬಳಿ ಹೇಳಿದನು .

೪. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು ?

ಉ: ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಸುರಹೊನ್ನೆ ತೋಟಕ್ಕೆ ಉಯ್ಯಾಲೆಯಾಡಲು ಹೋದಳು .

೫. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು ?

ಉ: ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಐಸಿರಿಯ ಉಡುಗೊರೆಯನ್ನು ನೀಡಿದಳು.

## ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ದೊರೆ ಮಗ ಹೇಗೆ ಕಂಡು ಹಿಡಿದನು ?

ಉ: ಅರಮನೆಗೆ ಗಮಗಮ ಹೂವು ಬರುವುದನ್ನು ನೋಡಿದ ದೊರೆಮಗನು ಅದನ್ನು ತಂದುಕೊಡುತ್ತಿದ್ದ ದೊಡ್ಡ ಹುಡುಗಿಯನ್ನು ಹಿಂಬಾಲಿಸಿ ಹೋದನು. ಆದರೆ ಅವರ ಮನೆಯ ಸುತ್ತ ಯಾವುದೇ ಹೂವಿನ ಗಿಡಗಳಿಲ್ಲದಿರುವುದನ್ನು ಗಮನಿಸಿ ಆ ಹೂವು ಅವರಿಗೆಲ್ಲಿಂದ ಬರುತ್ತದೆಂದು ಯೋಚಿಸಿ ಅರಮನೆಗೆ ಹಿಂದಿರುಗಿದವನು ಸೂರ್ಯ ಹುಟ್ಟುವ ಮೊದಲೇ ಹುಡುಗಿಯರಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ .ಎಂದಿನಂತೆಯೇ ಚಿಕ್ಕ ಹುಡುಗಿಯು ದೊಡ್ಡ ಹುಡುಗಿಯ ಸಹಾಯದಿಂದ ಹೂವಿನ ಗಿಡವಾಗುವುದನ್ನು ನೋಡಿದನು. ಹೀಗೆ ದೊರೆಯ ಮಗನು ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ಕಂಡು ಹಿಡಿದನು .

೨. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು ?

ಉ: ಮೊದಲು ಮನೆಯನ್ನು ಸಾರಿಸಿ ನಂತರ ಸ್ನಾನ ಮಾಡಿದ ಅಕ್ಕ ಬಾವಿಯಿಂದ ಉಗುರೂ ಸೋಕಿಸದಂತೆ ಎರಡು ತಂಬಿಗೆ ನೀರನ್ನು ತೆಗೆದುಕೊಂಡು ಬರುತ್ತಿದ್ದಳು. ನಂತರ ಅವರ ಮನೆಯ ಎದುರಿಗೆ ಇದ್ದ ದೊಡ್ಡ ಮರದ ಬಳಿ ತಂಗಿಯು ಗುಡಿಸಿ ಸಾರಿಸುತ್ತಿದ್ದಳು. ಅಲ್ಲಿ ತಂಗಿಯು ದೇವರ ಧ್ಯಾನ ಮಾಡಿ ಕುಳಿತುಕೊಂಡ ನಂತರ ಅಕ್ಕ ತಾನು ತಂದ ಒಂದು ತಂಬಿಗೆ ನೀರನ್ನು ಅವಳ ಮೇಲೆ ಸುರಿಯುತ್ತಿದ್ದಳು. ಆಗ ತಂಗಿಯು ಹೂವಿನ ಗಿಡವಾಗುತ್ತಿದ್ದಳು. ನಂತರ ಅಕ್ಕ ಸುಳಿ ಮುರಿಯದ ಹಾಗೆ ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂವನ್ನು ಕಿತ್ತುಕೊಂಡು ,ನಂತರ ಇನ್ನೊಂದು ತಂಬಿಗೆ ನೀರನ್ನು ತಂಗಿಯ ಮೇಲೆ ಸುರಿದ ನಂತರ ತಂಗಿ ಮೊದಲಿನಂತೆ ಮನುಷ್ಯಳಾಗುತ್ತಿದ್ದಳು .

೩. ದೊರೆಯ ಮಗ ದೇಶಾಂತರ ಹೋಗಲು ಕಾರಣವೇನು ?

ಉ: ತನ್ನ ಅತ್ತಿಗೆಯು ಹೂವಿನ ಗಿಡವಾಗುವುದನ್ನು ತಿಳಿದು ದೊರೆಯ ಮಗನ ತಂಗಿಯು ತನ್ನ ಸ್ನೇಹಿತೆಯರೊಡನೆ ಅತ್ತಿಗೆಯನ್ನು ಸುರಹೊನ್ನೆ ತೋಟಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಅತ್ತಿಗೆಗೆ ಹೂವಿನ ಗಿಡವಾಗುವಂತೆ ಒತ್ತಾಯಿಸಿದಾಗ ಅತ್ತಿಗೆಯು ಗಿಡವಾಗುವಾಗ ಮತ್ತು ನಂತರದಲ್ಲಿ ಏನೇನು ಮಾಡಬೇಕೆಂದು ತಿಳಿಸಿ ಅದರಂತೆ ಹೂವಿನ ಗಿಡವಾದಳು. ಆದರೆ ದೊರೆ ಮಗನ ತಂಗಿ ಮತ್ತು ಅವಳ ಸ್ನೇಹಿತೆಯರು ಮಗನ ಹೆಂಡತಿ ಹೇಳಿದಂತೆ ಮಾಡದಿದ್ದುದರಿಂದ ಅವಳು ಅರ್ಧಂಬರ್ಧ ಮನುಷ್ಯಳಾದವಳು ಮನೆಗೆ ಹಿಂದಿರುಗಲೇ ಇಲ್ಲ. ತನ್ನ ಹೆಂಡತಿಗೆ ಏನಾಯಿತು ?ಅವಳು ಯಾಕೆ ಬರಲಿಲ್ಲವೆಂದು ತಿಳಿಯದ ಬೇಸರದಲ್ಲಿ ದೊರೆ ಮಗನು ಗೋಸಾಯಿ ಧಿರಿಸು ಧರಿಸಿ ದೇಶಾಂತರ ಹೋದನು.

೪. ಅರ್ಧಂಬರ್ಧ ದೇಹವಾಗಿದ್ದವಳು ಹೇಗೆ ರಾಣಿಯ ಅರಮನೆ ಸೇರಿದಳು ?

ಉ: ದೊರೆ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿದ ಅವನ ಹೆಂಡತಿಯು ಮಳೆಯ ನೀರಿನಲ್ಲಿ ತೇಲಿಕೊಂಡು ಮೋರಿಗೆ ಹೋಗಿ ಬಿದ್ದಳು. ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನ ಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋದಾಗ ಆ ಪಟ್ಟಣದ ಜನರು ನೀರಿಗೆ ಹೋಗುವಾಗ ಇವಳನ್ನು ನೋಡಿ ತಮ್ಮ ಪಟ್ಟಣದ ರಾಣಿಯ ತಮ್ಮನ ಹೆಂಡತಿಯಿರಬಹುದೆಂದು ಊಹಿಸಿ ರಾಣಿಗೆ ತಿಳಿಸಿ ರಾಣಿಯು ನೀವು ಸೇವೆ ಮಾಡುವುದಾದರೆ ಮಾತ್ರ ಅರಮನೆಗೆ ಕರೆತರುವಂತೆ ತಿಳಿಸುವಳು. ಒಪ್ಪಿಕೊಂಡ ಅವರು ಅವಳನ್ನು ಅರಮನೆಗೆ ತಂದು ಅವಳ ಗಾಯಗಳಿಗೆ ಔಷಧಿ ಹಾಕಿ ವಾಸಿ ಮಾಡುವರು. ಹೀಗೆ ಅರ್ಧಂಬರ್ಧ ದೇಹವಾಗಿದ್ದವಳು ಅರಮನೆ ಸೇರಿದಳು.

ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು ?

ಉತ್ತರ : ಅತ್ತಿಗೆಯು ಹೂವಿನ ಗಿಡವಾಗುವ ವಿಷಯ ತಿಳಿದು ದೊರೆಯ ಮಗನ ತಂಗಿಯು ತನ್ನ ಸ್ನೇಹಿತೆಯರೊಡನೆ ಅವಳನ್ನು ಕರೆದುಕೊಂಡು ಸುರಹೊನ್ನೆ ತೋಟಕ್ಕೆ ಹೋಗಿ ಹೂವಿನ ಗಿಡವಾಗುವಂತೆ ಒತ್ತಾಯಿಸಿದಳು.ಅವಳ ನಿಷ್ಠುರ ಮಾತಿಗೆ ಮಣಿದ ಅತ್ತಿಗೆಯು ಎರಡು ತಂಬಿಗೆ ನೀರು ತರಿಸಿ ,ಅದನ್ನು ಮಂತ್ರಿಸಿ ಕೊಟ್ಟು ಅದನ್ನು ಸುರಿಯುವ ,ಹೂವನ್ನು ಕೀಳುವ ವಿಧಾನವನ್ನು

ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ತಂಬಿಗೆ  ನೀರನ್ನು ಅಡ್ಡಾದಿಡ್ಡಿಯಾಗಿ ಸುರಿದರು.ಅವಳು ಅರ್ಧಂಬರ್ಧ ಗಿಡವಾದಳು. ಆಗ ಸಾಯಂಕಾಲವಾಗಿತ್ತು. ಮಳೆ ಪ್ರಾರಂಭವಾಯಿತು. ಅವರು ಹೂವು ಕೀಳುವ ಸಂಭ್ರಮದಲ್ಲಿ ತೊಟ್ಟು ,ಎಲೆ  , ಸುಳಿ ಕಿತ್ತು ರೆಂಬೆಯನ್ನೆಲ್ಲ ತರಿದುಬಿಟ್ಟರು. ಮಳೆಗೆ ಹೆದರಿ ಮನೆಗೆ ಹೋಗುವ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ದೊರೆಮಗನ ಹೆಂಡತಿ ಮನುಷ್ಯಳಾದಾಗ ಕೈಯಿಲ್ಲ ,ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು. ಮೈಯೆಲ್ಲ ಗಾಯವಾಗಿತ್ತು.ಮಳೆಯ ನೀರಿನಲ್ಲಿ

ತೇಲಿ ಹೋದ ಅವಳು ಮೋರಿಯಲ್ಲಿ ಬಿದ್ದಳು. ಈ ರೀತಿಯಾಗಿ ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ದ್ರೋಹ ಮಾಡಿದಳು.

೨. ದೊರೆಯ ಮಗ ತನ್ನ ಹೆಂಡತಿಯನ್ನು ಹೇಗೆ ಪುನಃ ಪಡೆದನು ?

ಉ: ತಂಗಿ ಮತ್ತು ಅವಳ ಸ್ನೇಹಿತೆಯರ ಜೊತೆ ಹೋದ ದೊರೆಯ ಮಗನ ಹೆಂಡತಿಯು ಮರಳಿ ಬರದಿದುದಕ್ಕೆ ನಿಜವಾದ ಕಾರಣ ತಿಳಿಯದ ದೊರೆಯ ಮಗನು ಬೇಸರದಿಂದ ಗೋಸಾಯಿಯ ಧಿರಿಸು ಧರಿಸಿ ದೇಶಾಂತರ ಹೋದನು. ಅರ್ಧಂಬರ್ಧ ದೇಹವಾಗಿದ್ದ ಅವನ ಹೆಂಡತಿಯು ಅವನ ಅಕ್ಕನ ಪಟ್ಟಣದಲ್ಲಿಯೇ ದಾದಿಯರು ಮತ್ತು ಗೌಡತಿಯರ ನೆರವಿನಿಂದ ಅರಮನೆ ಸೇರಿದ್ದಳು. ದೊರೆಯ ಮಗನೂ ದೇಶದೇಶವನ್ನು ತಿರುಗುತ್ತ ತನ್ನ ಅಕ್ಕನ ಪಟ್ಟಣಕ್ಕೆ ಬಂದನು. ತಿಕ್ಕಲು ಮನುಷ್ಯನಂತಿದ್ದ ಅವನಿಗೆ ಗಡ್ಡ ಮೀಸೆ ಬೆಳೆದಿತ್ತು. ನೀರಿಗೆ ಬರುತ್ತಿದ್ದ ದಾದಿಯರು ಅವನನ್ನು ರಾಣಿಯ ತಮ್ಮನೆಂದು ಗುರುತಿಸಿ ರಾಣಿಗೆ ತಿಳಿಸಿದರು. ಅವನಿಗೆ ಸ್ನಾನ ಮಾಡಿಸಿ ಅವನೇ ತನ್ನ ತಮ್ಮನೆಂದು ತಿಳಿದ ರಾಣಿಯು ಅವನಿಗೆ ದಿನಕ್ಕೊಂದು ಅಡುಗೆ ಮಾಡಿ ಬಡಿಸಿದರೂ ಅವನು ಅವಳ ಬಳಿ ಮಾತನಾಡಲೇ ಇಲ್ಲ. ಅವಳು ಆಶ್ಚರ್ಯ ಪಟ್ಟು ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳಿಸಿದರೂ ಅವನು ಮಾತನಾಡಲಿಲ್ಲ. ನಂತರ ಅರ್ಧಂಬರ್ಧ ದೇಹದವಳನ್ನು ಶೃಂಗರಿಸಿ ಅವನ ಮಂಚದ ಮೇಲೆ ಕೂರಿಸಿದಾಗ ಅವಳು ತನ್ನ ಮೋಟುಗೈಯಿಂದ ಇವನ ಸೇವೆ ಮಾಡುತ್ತಿದ್ದಾಗ ಅವಳೇ ತನ್ನ ಪತ್ನಿ ಎಂದು ದೊರೆಯ ಮಗನಿಗೆ ತಿಳಿದು ಅವಳಿಂದ ನಡೆದ ಸಂಗತಿಯನ್ನು ತಿಳಿದುಕೊಂಡನು. ಅವಳ ಮಾತಿನಂತೆ ಅವಳು ಮಂತ್ರಿಸಿಕೊಟ್ಟ ಒಂದು ತಂಬಿಗೆ ನೀರನ್ನು ದೇವರನ್ನು ಧ್ಯಾನಿಸಿ ಕುಳಿತ ಅವಳ ಮೇಲೆ ಸುರಿದನು. ತರಿದು ಹೋಗಿದ್ದ ರೆಂಬೆ ಕೊಂಬೆಗಳನ್ನೆಲ್ಲ ಸೇರಿಸಿ ಮತ್ತೊಂದು ತಂಬಿಗೆ ನೀರನ್ನು ಸುರಿದಾಗ ಅವಳು ಮೊದಲಿನಂತೆ ಪುನಃ ಮನುಷ್ಯಳಾದಳು. ಹೀಗೆ ದೊರೆಯ ಮಗನು ತನ್ನ ಹೆಂಡತಿಯನ್ನು ಪುನಃ ಪಡೆದುಕೊಂಡನು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ .

೧. " ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು "

ಉ: ಈ ಮೇಲಿನ ವಾಕ್ಯವನ್ನು ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದಿರುವ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಅಕ್ಕನಿಗೆ ತಂಗಿ ಹೇಳಿದಳು.

ಸಂದರ್ಭ : ತಾಯಿಯು ಕೂಲಿ ಮಾಡಿ ತಮ್ಮನ್ನು ಸಾಕಲು ಕಷ್ಟ ಪಡುತ್ತಿದ್ದಾಗ ತಂಗಿಯು ತಾನು ಹೂವಿನ ಗಿಡವಾಗಿ ಹೂವನ್ನು ಕೊಯ್ದು ಮಾರಾಟ ಮಾಡಿ ಹಣ ಸಂಪಾದಿಸುವ ಸಲಹೆಯನ್ನು ಅಕ್ಕನಿಗೆ ನೀಡುತ್ತಾಳೆ. ಅದರಂತೆಯೇ ಅಕ್ಕ ಹೂವನ್ನು ಕೊಯ್ದು ನಂತರ ತಂಗಿಯ ಸಲಹೆಯಂತೆ ಅರಮನೆಗೆ ಹೋಗಿ ಮಾರಾಟ ಮಾಡಿ ರಾಣಿಯು ಕೊಟ್ಟ ಮೊಗೆ ಹಣವನ್ನು ತಂಗಿಗೆ ತೋರಿಸುವಳು. ಆಗ ಅವಳು ಮೇಲಿನಂತೆ ಹೇಳುವಳು.

ಸ್ವಾರಸ್ಯ : ಹುಡುಗಿಯರ ತಾಯಿಗೆ ಸಹಾಯ ಮಾಡುವ ಸಲುವಾಗಿ ಸಂಪಾದಿಸಬೇಕೆಂಬ ಮನೋಭಾವನೆಯ ಜೊತೆ ಅದು ತಮ್ಮ ತಾಯಿಗೆ ಗೊತ್ತಾದರೆ ಬಯ್ಯುಬಹುದು ಎಂಬ ಭಯವನ್ನೂ ಮೇಲಿನ ವಾಕ್ಯವು ಸೂಚಿಸುವುದು.

೨. " ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ ?"

ಉ: ಈ ಮೇಲಿನ ವಾಕ್ಯವನ್ನು ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದಿರುವ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಹುಡುಗಿಯು ದೊರೆಮಗನಿಗೆ ಕೇಳಿದಳು.

ಸಂದರ್ಭ : ದಿನವೂ ಅರಮನೆಗೆ ಗಮಗಮಿಸುವ ಹೂವು ಎಲ್ಲಿಂದ ಬರುತ್ತಿದೆ ಎಂದು ಯೋಚಿಸಿದ ದೊರೆಯ ಮಗನು ಅದನ್ನು ಅರಮನೆಗೆ ತಂದು ಮಾರುತ್ತಿದ್ದ ಅಕ್ಕನನ್ನು ಹಿಂಬಾಲಿಸಿ ನಿಜ ಸಂಗತಿಯನ್ನು ತಿಳಿದುಕೊಂಡನು. ನಂತರ ಮಂತ್ರಿಯ ಮಗನಿಗೆ ಈ ವಿಚಾರವನ್ನು ತಿಳಿಸಿದನು. ಈ ವಿಚಾರ ತಿಳಿದ ದೊರೆಯು ಮುದುಕಿಯನ್ನು ಕರೆಸಿ ಅವಳ ಕಿರಿಯ

ಮಗಳೊಡನೆ ಮದುವೆ ಸಿದ್ಧತೆ ಮಾಡಿಸಿದನು. ತದ ನಂತರದಲ್ಲಿ ದೊರೆಯ ಮಗನೊಂದಿಗೆ ಮದುವೆಯಾದ ಮದುವೆಯಾದ ತಂಗಿಯು ಏಕಾಂತದಲ್ಲಿದ್ದಾಗ ಅವಳೂ ಮಾತನಾಡದೇ ಪರಸ್ಪರ ಸುಮ್ಮನಿದ್ದಾಗ ಕೊನೆಗೆ ಅವಳೇ ಮೇಲಿನಂತೆ ಪ್ರಶ್ನಿಸುವಳು.

ಸ್ವಾರಸ್ಯ : ದೊರೆಯ ಮಗನು ಮಾತನಾಡಿಸದ ಕುರಿತಾದ ಹುಡುಗಿಯ ಬೇಸರ ಇಲ್ಲಿ ವ್ಯಕ್ತವಾಗಿದೆ.

೩. " ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ "

ಉ: ಈ ಮೇಲಿನ ವಾಕ್ಯವನ್ನು ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದಿರುವ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಗಾಡಿಯವನು ಹುಡುಗಿಗೆ ಹೇಳಿದನು.

ಸಂದರ್ಭ : ದೊರೆಯ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿದ ಅವನ ಹೆಂಡತಿಯು ಮಳೆಯ ನೀರಿನಲ್ಲಿ ತೇಲಿಕೊಂಡು ಮೋರಿಗೆ ಹೋಗಿ ಬಿದ್ದಳು. ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನ ಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋಗುವಾಗ ಮೇಲಿನಂತೆ ಹೇಳಿದನು.

ಸ್ವಾರಸ್ಯ : ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿಯವನು ಗಾಡಿಯಲ್ಲಿ ಕರೆತಂದು ಅವಳ ಬಗ್ಗೆ ತೋರಿದ ಕರುಣೆ ಇಲ್ಲಿ ವ್ಯಕ್ತವಾಗಿದೆ.

೪. " ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ. "

ಉ: ಈ ಮೇಲಿನ ಎ.ಕೆ.ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದಿರುವ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಪಟ್ಟಣದ ದಾದಿ ಮತ್ತು ಗೌಡತಿಯರು ದೊರೆಮಗನ ಅಕ್ಕನಿಗೆ ಹೇಳಿದರು.

ಸಂದರ್ಭ : ದೊರೆಯ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿ ಮೋರಿಯಲ್ಲಿ ಬಿದ್ದಿದ್ದ ಅವನ ಹೆಂಡತಿಯನ್ನು ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನ ಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋದಾಗ ಆ ಪಟ್ಟಣದ ದಾದಿಯರು ಮತ್ತು ಗೌಡತಿಯರು ನೀರಿಗೆ ಹೋಗುವಾಗ ಇವಳನ್ನು ನೋಡಿ ತಮ್ಮ ಪಟ್ಟಣದ ರಾಣಿಯ ತಮ್ಮನ ಹೆಂಡತಿಯಿರಬಹುದೆಂದು ಊಹಿಸಿ ರಾಣಿಯ ಬಳಿ ಹೋಗಿ ಮೇಲಿನಂತೆ ಹೇಳಿದರು.

ಸ್ವಾರಸ್ಯ : ಅರ್ಧಂಬರ್ಧ ದೇಹದವಳನ್ನು ನೋಡಿದ ಪಟ್ಟಣದ ಜನರು ಅವಳ ಗುರುತು ಹಿಡಿದು ಕಾಳಜಿ ತೋರಿದ ಸಂದರ್ಭ ಇಲ್ಲಿ ವ್ಯಕ್ತವಾಗಿದೆ.

**ಖಾಲಿ ಬಿಟ್ಟ ಜಾಗವನ್ನು ಸೂಕ್ತಪದಗಳಿಂದ ತುಂಬಿರಿ.**

೧. ನೋಡಕ್ಕಯ್ಯ ನಾನಿಲ್ಲಿ --- ಧ್ಯಾನ ಮಾಡಿ ಕೂತುಕೋತೀನಿ .(ದೇವರ )

೨. ಅವರು ಮಾತನಾಡಲೇ ಇಲ್ಲವಲ್ಲ. ಮತ್ತೇಕೆ ---- ಯಾದರು ? (ಮದುವೆ)

೩. ನರಮನುಷ್ಯರು ---- ಆಗೋದುಂಟೇ ?(ಹೂವಿನ ಗಿಡ )

೪. ದಿನವಹಿ ಮೈ ಮೇಲಿನ ಗಾಯಗಳಿಗೆ ---- ಹಾಕಿ ವಾಸಿ ಮಾಡಿದರು. (ಔಷಧ)

**ಅಭ್ಯಾಸ ಚಟುವಟಿಕೆ**

೧.ನಾಮ ಪ್ರಕೃತಿಗಳ ವಿಧಗಳಾವುವು ?

ಉ: ನಾಮ ಪ್ರಕೃತಿಗಳ ವಿಧಗಳು

ವಸ್ತುವಾಚಕಗಳು,ಗುಣವಾಚಕಗಳು,ಸಂಖ್ಯಾವಾಚಕಗಳು,ಸಂಖ್ಯೇಯವಾಚಕಗಳು,ಭಾವನಾಮಗಳು,
ಪರಿಮಾಣವಾಚಕಗಳು,ದಿಗ್ವಾಚಕಗಳು ಹಾಗೂ ಸರ್ವನಾಮಗಳು.

೨. ಭಾವನಾಮ ಎಂದರೇನು ?

ಉ: ವಸ್ತು ಹಾಗೂ ಕ್ರಿಯೆಗಳ ಭಾವವನ್ನು ತಿಳಿಸುವ ಪದಗಳನ್ನು ಭಾವನಾಮಗಳು ಎನ್ನುವರು.

೩. ಸರ್ವನಾಮ ಎಂದರೇನು ?ವಿಧಗಳಾವುವು ?

ಉ: ನಾಮಪದಗಳ ಸ್ಥಾನದಲ್ಲಿ ಬಂದು ಅವುಗಳ ಕಾರ್ಯವನ್ನು ನಿರ್ವಹಿಸುವ ಪದಗಳೇ ಸರ್ವನಾಮಗಳು. ಸರ್ವನಾಮಗಳ ವಿಧಗಳೆಂದರೆ ಪುರುಷಾರ್ಥಕ, ಪ್ರಶ್ನಾರ್ಥಕ ಮತ್ತು ಆತ್ಮಾರ್ಥಕ ಸರ್ವನಾಮಗಳೆಂದು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

೪. ಪುರುಷಾರ್ಥಕ ಸರ್ವನಾಮಗಳಲ್ಲಿ ಎಷ್ಟು ವಿಧ ?

ಉ: ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧಗಳು. ಪ್ರಥಮ ಪುರುಷ ಸರ್ವನಾಮ : ಅವನು,ಅವಳು, ಇವನು, ಇವಳು, ಇವರು,ಅವರು,ಅದು,ಅವು ಇತ್ಯಾದಿ .

ಮಧ್ಯಮ ಪುರುಷ ಸರ್ವನಾಮ : ನೀನು ,ನೀವು ಇತ್ಯಾದಿ .

ಉತ್ತಮ ಪುರುಷ ಸರ್ವನಾಮ : ನಾನು,ನಾವು,ನಮ್ಮ ಇತ್ಯಾದಿ .

ಪ್ರಾಯೋಗಿಕ ಭಾಷಾಭ್ಯಾಸ :

೧. ಕೊಟ್ಟಿರುವ ಪದಗಳಲ್ಲಿ ರೂಢ ,ಅನ್ವರ್ಥ ಮತ್ತು ಅಂಕಿತನಾಮಗಳನ್ನು ಆರಿಸಿ ಬರೆಯಿರಿ.

ಕಾಲ,ಕಾಳಿ,ದೇವಸ್ಥಾನ,ವ್ಯಾಪಾರಿ,ರಾಜ,ಅಡಗೂರು

ರೂಢನಾಮ :ಕಾಲ, ದೇವಸ್ಥಾನ,ರಾಜ

ಅಂಕಿತನಾಮ :ಕಾಳಿ,ಅಡಗೂರು

ಅನ್ವರ್ಥಕ ನಾಮ :ವ್ಯಾಪಾರಿ

೨. ಕೊಟ್ಟಿರುವ ಪದಗಳಲ್ಲಿರುವ ಪ್ರಥಮ ಪುರುಷ ,ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಪದಗಳನ್ನು ಆರಿಸಿ ಬರೆಯಿರಿ.

ಇವನು, ನೀನು, ಅವರು,ನಾನು,ಅವಳು,ಇವಳು

ಪ್ರಥಮ ಪುರುಷ ಸರ್ವನಾಮ :ಅವರು ,ಅವಳು, ಇವಳು,ಇವನು

ಮಧ್ಯಮ ಪುರುಷ ಸರ್ವನಾಮ : ನೀನು

ಉತ್ತಮ ಪುರುಷ ಸರ್ವನಾಮ :ನಾನು

ಕೊಟ್ಟಿರುವ ವಾಕ್ಯಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

೧. ನೀನು ಹೂ ತಕ್ಕೊಂಡು ಹೋಗಿ ಮಾರ್ಕೊಂಡು ಬಂದ್ಬಿಡೇ .

ಉ: ನೀನು ಹೂ ತೆಗೆದುಕೊಂಡು ಹೋಗಿ ಮಾರಿಕೊಂಡು ಬಂದುಬಿಡು.

೨. ದಾದೇರು ಗೋಗರೆದದ್ದಕ್ಕೆ ಒಪ್ಕತಾಳೆ.


ಉ: ದಾದಿಯರು ಗೋಗರೆದಿದ್ದರಿಂದ ಒಪ್ಪಿಕ್ಕೊಳ್ಳುತ್ತಾಳೆ.

೩. ತಾಯಿ ಅಣ್ಣನ ಕೇಳ್ಕೊಂಡು ಕರ್ಕೊಂಡು ಹೋಗು ಅನ್ತಾಳೆ.

ಉ: ತಾಯಿ ಅಣ್ಣನನ್ನು ಕೇಳಿಕೊಂಡು ಕರೆದುಕೊಂಡು ಹೋಗು ಎನ್ನುತ್ತಾಳೆ.

# ಗದ್ಯ -೬ ಯಶೋಧರೆ -ಮಾಸ್ತಿ ವೆಂಕಟೇಶ ಅಯ್ಯಂಗಾರ್

### ಕೃತಿಕಾರರ ಪರಿಚಯ



ಕನ್ನಡ ಸಾಹಿತ್ಯ ಲೋಕದಲ್ಲಿ ಸಣ್ಣಕಥೆಗಳ ಜನಕ ಎಂದು ಖ್ಯಾತರಾದ ಶ್ರೀನಿವಾಸ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ ೬/೬/೧೮೯೧ರಲ್ಲಿ ಜನಿಸಿದರು . ಗೌತಮಿ ಹೇಳಿದ ಕಥೆ ,ಸಾರಿಪುತ್ರ ನ ಕೊನೆಯ ದಿನಗಳು ,ಕುಚೇಲನ ಭಾಗ್ಯ ,ಹೇಮಕೂಟದಿಂದ ಬಂದ ಮೇಲೆ ,ಚಿಕವೀರರಾಜೇಂದ್ರ ಮೊದಲಾದವು ಇವರು ಬರೆದ ಪ್ರಮುಖ ಕೃತಿಗಳು .ಇವರ ಚಿಕವೀರರಾಜೇಂದ್ರ ಕೃತಿಗೆ ೧೯೮೩ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಇವರು ೬/೬/೧೯೮೬ರಲ್ಲಿ ನಿಧನರಾದರು .

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ ?

ಉ: ಯಶೋಧರೆಯು ಮತ್ತೊಮ್ಮೆ ತನ್ನ ಪತಿಯನ್ನು (ಸಿದ್ದಾರ್ಥ ,ಬುದ್ಧ ) ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ .

೨. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರಾರು ?

ಉ: ತಂದೆಯನ್ನು ಕರೆತರಲು ಹೋಗುವೆನೆಂದು ರಾಹುಲನು ಹೇಳಿದನು .

೩. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರಾರು ?

ಉ: ರಾಜನಿಗೆ ಸಖಿ ಅಂಬಿಕೆಯು ಕನಸಿನ ವಿಚಾರವನ್ನು ತಿಳಿಸಿದಳು.

೪. ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು ?

ಉ: ಸನ್ಯಾಸಿಯಾದವನು ಸತಿಯನ್ನು ನೋಡುವುದು ಸಂಪ್ರದಾಯಕ್ಕೆ ವಿರುದ್ಧವಾದುದು.

೫. ಈಗ ನೀನಿರುವ ಸ್ಥಿತಿ ಯಾವುದೆಂದು ರಾಜ ಹೇಳುತ್ತಾನೆ ?

ಉ: ಈಗ ನೀನಿರುವ ಸ್ಥಿತಿ ಸನ್ಯಾಸವಲ್ಲವೆ ಎಂದು ರಾಜನು ಯಶೋಧರೆಗೆ ಹೇಳುತ್ತಾನೆ.

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ ?

ಉ : ಸೋದರಿಯ ಸುತಳೆಂದು ಎಳೆತನದಿಂದಲೇ ನನ್ನನ್ನು ಕರೆತಂದು ಸಾಕಿ ಸಲುಹಿ ಸೊಸೆಯಾಗಿ ಸ್ವೀಕರಿಸಿ ನನ್ನ ಬಾಳ್ವೆಯನ್ನುದ್ಧರಿಸಿದಿರಿ. ನಿಮ್ಮ ಅರಮನೆಯಲ್ಲಿ ನಾನು ಕನಸಿನಲ್ಲೂ ಎಣಿಸಲಾಗದ ಸುಖವನ್ನು ಅನುಭವಿಸಿದೆನು. ಪತಿಯನ್ನು ನನಗೆ ಇನ್ನೊಮ್ಮೆ ನೀಡಿ ರಕ್ಷಿಸಿರಿ. ನಾನು ನನ್ನ ಪತಿಯೆಡೆಗೆ ಹೋಗುವೆನು. ರಾಹುಲನನ್ನು ಇಲ್ಲಿಯೇ ಇರಿಸಿಕೊಳ್ಳಿರಿ. ನನಗೆ ಪತಿಯೆಡೆಗೆ ಹೋಗಲು ಅನುಮತಿ ಕೊಡಿ ಎಂದು ರಾಜನನ್ನು ಪೀಠದಲ್ಲಿ ಕುಳ್ಳಿರಿಸಿದ ಯಶೋಧರೆಯು ವಿನಂತಿಸಿದಳು.

೨. ಯಶೋಧರೆ ಮಂಡಿಯೂರಿ ನಮಸ್ಕರಿಸುತ್ತಾ ಏನು ಹೇಳುತ್ತಾಳೆ ?

ಉ: ರಾಹುಲನು ತನ್ನ ತಂದೆಯನ್ನು ಕರೆತರಲು ಹೋಗುವೆನೆಂದು ಹಠ ಮಾಡಲು ಯಶೋಧರೆಗೆ ಚಿಂತೆಯಾಯಿತು. ಹಿಂದೊಮ್ಮೆ ಕನಸು ಬಿದ್ದು ಎಚ್ಚರವಾಗಿ ನೋಡಿದಾಗ ಪಕ್ಕದಲ್ಲಿ ಮಲಗಿದ್ದ ಸಿದ್ದಾರ್ಥನು ಮನೆ ಬಿಟ್ಟು ಹೊರಟುಹೋಗಿದ್ದನು . ಈಗಲೂ ಅಂತದ್ದೇ ಒಂದು ಕನಸು ಬಿದ್ದಿತ್ತು . ಇಂದು ಇರುಳಾದ ಮೇಲೆ ಮತ್ತೆ ಏನು ಮಾಡುವುದು ? ನಿದ್ದೆಯಲಿ

ಮುಳುಗಿದಾಗ ಮತ್ತೆ ಇನ್ನಾವ ಕನಸಿನ ಮೊಸಳೆ ಹಿಡಿಯುವುದೋ ಎನ್ನೆಷ್ಟು ತೊಳಲಬೇಕೋ ಎಂದು ನನಗೆ ಭಯವಾಗುತ್ತಿದೆ ಎಂದು ಯಶೋಧರೆ ರಾಜನಿಗೆ ಮಂಡಿಯೂರಿ ನಮಸ್ಕರಿಸುತ್ತಾ ಹೇಳುತ್ತಾಳೆ.

೩. ರಾಜನು ಈಗ ನೀನಿರುವ ರೀತಿ ಸನ್ಯಾಸವಲ್ಲವೆ ಎನ್ನಲು ಕಾರಣವೇನು ?

ಉ: ಯಶೋಧರೆಯು ಸಿದ್ಧಾರ್ಥನನ್ನು ನೋಡಲು ತಾನೇ ಹೋಗುವೆನೆಂದಾಗ ರಾಜನು ನಿನಗೆ ಗೊತ್ತಲ್ಲವೇ ಅವನು ಸನ್ಯಾಸವನ್ನು ಸ್ವೀಕರಿಸಿಹನು ಎಂದು . ನೀನು ಹೋಗಿ ನೋಡುವುದು ಸರಿಯೇ ಎಂದು ಕೇಳುವನು. ಹೋಗಿ ಕೇಳುವೆನು ಎಂದು ಯಶೋಧರೆಯು ಹೇಳಿದಾಗ ಸನ್ಯಾಸಿಯಾದವನು ಸತಿಯ ನೋಡುವ ಮಾತು ಸಂಪ್ರದಾಯಕ್ಕೆ ವಿರೋಧವಾದುದು ಎಂದು ರಾಜನು ಉತ್ತರಿಸುವನು. ಆಗ ಯಶೋಧರೆಯು ಪುನಃ ಹಿಂದೊಮ್ಮೆ ಗಾರ್ಗಿಯು ಸನ್ಯಾಸದಲಿ ತನ್ನ ಪತಿಯೊಡನೆ ಕಾನನಕ್ಕೆ ತೆರಳಿದ್ದಳು ಎಂದು ಕೇಳಿದ್ದೇನೆ. ನಾನೂ ಅಂತೆಯೇ ಸನ್ಯಾಸ ಪಡೆದು ಸಿದ್ಧಾರ್ಥನೆಡೆಗೆ ಹೋಗಲೇ ಎಂದು ಕೇಳಿದಾಗ ಈ ಹತ್ತು ವರ್ಷಗಳಿಂದಲೂ ನೀನಿರುವ ರೀತಿ ಸನ್ಯಾಸವೇ ಅಲ್ಲವೇ? ಎಂದು ಪ್ರಶ್ನಿಸುವನು.

೪. ಯಶೋಧರೆಯ ಆಂತರ್ಯದಲ್ಲಿರುವ ಸಂದೇಹವೇನು ?

ಉ: ತಂದೆಯನ್ನು ಕರೆತರಲು ರಾಹಿಲನು ಹೋದವನು ಬರುವನೋ ಇಲ್ಲವೋ ಎಂದು ಯಶೋಧರೆಗೆ ಭಯವಾಗುವುದು. ನಾನು ಬರುವುದು ಸಂದೇಹವಾದರೆ ನಮ್ಮ ಜೊತೆಯಲ್ಲಿ ಅಂಬಿಕೆಯನ್ನು ಕಳಿಸು ಎಂದು ರಾಹಿಲನು ಹೇಳುವನು.ರಾಜನು ಯಶೋಧರೆಯನ್ನು ಈ ಕುರಿತು ವಿಚಾರಿಸಲಾಗಿ ತನಗೆ ಯಾವುದೂ ತೋಚದು . ಅವರನ್ನು (ಬುದ್ಧ ) ನೋಡುವ ಪುಣ್ಯ ತನ್ನ ಕಣ್ಣುಗಳಿಗೆ ಇದೆಯೋ ಇಲ್ಲವೋ ಅರಿಯೆ. ಬಾಲಕನು (ರಾಹುಲನು) ತನ್ನ ತಂದೆಯನ್ನು ನೋಡಬೇಕೆಂದು ಆಶಿಸಲು ಬೇಡವೆನ್ನುವದು ಸರಿಯೇ ಎಂಬ ಸಂದೇಹ ತನ್ನ ಆಂತರ್ಯದೊಳಿರುವುದು ಎಂದು ಯಶೋಧರೆಯು ಹೇಳುವಳು.

## ನಾಲ್ಕು -ಐದು ವಾಕ್ಯಗಳಲ್ಲಿ ಉತ್ತರಿಸಿ.

೧. ಬೇಹಿನವರನ್ನು ಕಳಿಸುವ ವಿಚಾರದಲ್ಲಿ ರಾಹುಲನ ಅಭಿಪ್ರಾಯವೇನು ?

ಉ: ರಾಹುಲನು ಹತ್ತು ವರುಷದ ಹಿಂದೆ ಮನೆ ಬಿಟ್ಟು ಹೋದ ತನ್ನ ತಂದೆಯನ್ನು ಕಾಣಲು ಉತ್ಸುಕನಾಗಿರುವನು. ಆಗ ರಾಜನು ಮೊದಲು ಬೇಹಿನವರನ್ನು ಕಳಿಸೋಣ ಎನ್ನುವನು. ಆಗ ತನ್ನ ತಂದೆಯನ್ನು ನೋಡಲು ಬೇರೆ ಯಾರನ್ನೋ ಕಳಿಸುವುದು ಏಕೆ ?ನಾನೇ ಕರೆತರಲು ಹೋಗುತ್ತೇನೆ ಎಂದು ಸಿದ್ಧನಾಗುವನು. ಆಗ ರಾಜನು ಬೇಹಿನವರು ಹೋಗಿ ಸಿದ್ಧಾರ್ಥನ ಇಚ್ಛೆಯನ್ನು ತಿಳಿದು ಬರಲೆಂದು ಅಪೇಕ್ಷಿಸುವನು.ಆಗ ರಾಹುಲನು ನಿಮಗೆ ಮೊದಲೇ ಅವನನ್ನು ನೋಡಿದ್ದರಿಂದ ಈಗ ನೋಡಬೇಕೆಂಬ ಆಸೆ ಅಷ್ಟು ಬಲವಾಗಿಲ್ಲ. ಆದರೆ ನಾನು ಅವರನ್ನು ನೋಡಿಲ್ಲ. ಇನ್ನೆಷ್ಟು ದಿನಕ್ಕೆ ನೋಡುವುದು ?ನೀವು ಭಯಪಡಬೇಡಿ ನಾನು ಮರಳಿ ಬರುತ್ತೇನೆ .ಅಲ್ಲಿಯೇ ಇರುವುದಿಲ್ಲ. ಅವರನ್ನು ಕರೆದು ತರುತ್ತೇನೆ. ತಂದೆಯನ್ನು ನೋಡಬೇಕೆಂದು ಅವರೊಡನೆ ಇದ್ದು ಮಾತನಾಡಬೇಕೆಂದು ನನಗೆ ಬಹು ಆಸೆಯಿದೆ ಎಂದು ಅಭಿಪ್ರಾಯ ಪಡುವನು.

೨. ಯಶೋಧರೆಯ ವಿಧಿಯ ಬಗ್ಗೆ ರಾಜನು ಏನೆಂದು ಹೇಳಿದನು ?

ಉ: ರಾಹುಲನು ತನ್ನ ತಂದೆಯನ್ನು ಕರೆತರಲು ಅಂಬಿಕೆಯೊಡನೆ ಹೊರಟುನಿಂತಾಗ ಸಿದ್ಧಾರ್ಥನಂತೆ ತನ್ನನ್ನು ಮರೆಯಬೇಡಿರೆಂದು ಯಶೋಧರೆಯು ಹೇಳುವಳು. ಅಂಬಿಕೆಯು ನಿಮ್ಮನ್ನು ಮರೆಯಲು ಸಾಧ್ಯವೇ ಎನ್ನುವಳು. ಆಗ ಯಶೋಧರೆಯು ಮರೆತರೂ ತಪ್ಪಿಲ್ಲ .ಅದು ನನ್ನ ವಿಧಿ (ಹಣೆಬರಹ ) ಎನ್ನುವಳು. ಆಗ ರಾಜನು ನಿನ್ನ ವಿಧಿ ಕೆಟ್ಟದ್ದೆಂದು ಭಾವಿಸಬೇಡ. ನಿನ್ನ ಅರಸನು ಈಗ ಲೋಕಪೂಜ್ಯನೆನಿಸಿದ್ದಾನೆ. ಜಗದ ಜೀವಗಳನ್ನು ಉದ್ಧರಿಸುವಂತ ಹಿರಿಮೆ ಪಡೆದು ರಾಜಾಧಿರಾಜರಿಂದ ಓಲೈಸಿಕೊಳ್ಳುವ ಚಕ್ರಾಧಿಪತಿಯಂತೆ ನಿಂತಿದ್ದಾನೆ. ನಿನ್ನ ಹತ್ತು ವರ್ಷದ ಕಾಯುವಿಕೆಯ ತಪದ

ಫಲವೆನ್ನುವಂತೆ ಸಿದ್ದಾರ್ಥನನ್ನು ಹುಡುಕಿ ಕರೆದುತರಲು ರಾಹುಲನು ಹೊರಟಿದ್ದಾನೆ. ವಿಧಿರಿತು ನಡೆಯುವ ಯಜ್ಞಯಾಗಗಳಲ್ಲಿ ಋತ್ವಿಕ್ಕರು ಶ್ರದ್ದೆಯಿಂದ ಹೇಳುವ ಶಕ್ತಿಯ ಮಂತ್ರವು ದೇವರನ್ನು ಕರೆತರುವಂತೆ ರಾಹುಲನು ಸಿದ್ದಾರ್ಥನನ್ನು ಕರೆತರುವನು.ಎಂದು ರಾಜನು ಯಶೋಧರೆಯನ್ನು ಸಂತೈಸಿ ಧೈರ್ಯ ತುಂಬುವನು.

**ಕೆಳಗಿನ ಹೇಳಿಕೆಗಳನ್ನು ಯಾರು ಯಾರಿಗೆ ಯಾವ ಸಂದರ್ಭದಲ್ಲಿ ಹೇಳಿದರು ?**

೧. " ಸೋದರಿಯ ಸುತೆಯೆಂದು ಎಳೆತನದಿಂದಲೇ ನನ್ನ ಕರೆತಂದು ಸಾಕಿದಿರಿ. ."

ಉ : ಈ ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಯಶೋಧರೆ ರಾಜನಿಗೆ ಹೇಳಿದ್ದಾಳೆ.

ಸಂದರ್ಭ : ಸಿದ್ದಾರ್ಥನು ಅರಮನೆ ತ್ಯಜಿಸಿ ಹತ್ತು ವರ್ಷಗಳು ಕಳೆದಿವೆ .ಮಗ ರಾಹುಲನಿಗೂ ಹತ್ತು ವರ್ಷಗಳಾಗಿವೆ. ಮಗ ರಾಹುಲನು ತನ್ನ ತಂದೆಯನ್ನು ಕರೆತರುವುದಕ್ಕಾಗಿ ಹೇಳುತ್ತಿದ್ದಾನೆ. ಆತನನ್ನು ಕರೆತರಲು ತಾನೇ ಹೋಗಬೇಕೆಂಬುದು ಯಶೋಧರೆಯ ಅಭಿಮತ . ಮಗನೂ ಹೋದವನು ಬಾರದಿದ್ದರೆ ಎಂಬ ಆತಂಖ ಅವಳನ್ನು ಕಾಡುತ್ತಿದೆ. ಅವಳನ್ನು ಕಾಣಲು ಬಂದ ರಾಜನಲ್ಲಿ ಈ ಅರಮನೆಯಲ್ಲಿ ಎಲ್ಲ ಸುಖಗಳನ್ನೂ ತಾನು ಅನುಭವಿಸಿರುವೆ ,ಕನಸಲ್ಲೂ ಎಣಿಸದ ಸುಖ ತನಗೆ ದೊರೆತಿದೆ. ಆದರೆ ಪತಿಯೆಡೆಗೆ ಹೋಗಲು ತನಗೆ ಅನುಮತಿ ನೀಡಿ ಎಂದು ಕೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಅರಮನೆಯಲ್ಲಿ ಸುಖದಲ್ಲಿ ತಾನಿದ್ದ ಗಳಿಗೆಯನ್ನು ನೆನಪಿಸಿಕೊಳ್ಳುವಾಗ ಯಶೋಧರೆ ಮೇಲಿನಂತೆ ಹೇಳಿದ್ದಾಳೆ.

೨. "ಅಮ್ಮಾಜಿ ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ ."

ಉ : ಈ ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಹುಲನು ತನ್ನ ತಾಯಿ ಯಶೋಧರೆಗೆ ಹೇಳಿದ್ದಾನೆ .

ಸಂದರ್ಭ : ತಂದೆಯನ್ನು ಕರೆತರಲು ರಾಹುಲನು ಹೋದವನು ಬರುವನೋ ಇಲ್ಲವೋ ಎಂದು ಯಶೋಧರೆಗೆ ಭಯವಾಗುವುದು. ನಾನು ಬರುವುದು ಸಂದೇಹವಾದರೆ ನಮ್ಮ ಜೊತೆಯಲ್ಲಿ ಅಂಬಿಕೆಯನ್ನು ಕಳುಹಿಸು ಎಂದು ರಾಹುಲನು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ರಾಹುಲನು ತನ್ನ ತಾಯಿಗೆ ಮರಳಿ ಬರುವ ಭರವಸೆ ನಿಡುವ ಸನ್ನಿವೇಶ ಇದಾಗಿದೆ.

೩. "ನಿನ್ನ ವಿಧಿ ಕೆಟ್ಟುದೆಂದು ಎಣಿಸದಿರು ಅಮ್ಮಾಜಿ "

ಉ: ಈ ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಜನು ಹೇಳಿದ್ದಾನೆ.

ಸಂದರ್ಭ : ತನ್ನ ತಂದೆಯನ್ನು ಕರೆತರಲು ರಾಹುಲನು ಅಂಬಿಕೆಯೊಡನೆ ಹೊರಟಾಗ ಯಶೋಧರೆಯು ದುಃಖಿಸುವಳು. ತನಗೆ ಒದಗಿ ಬಂದ ವಿಧಿಯನ್ನು ನೆನೆದು ದುಃಖಿಸುತ್ತಿರುವಾಗ ರಾಜನು ಮೇಲಿನಂತೆ ಸಮಾಧಾನಿಸುವನು.

ಸ್ವಾರಸ್ಯ : ವಿಧಿಯು ಕೆಟ್ಟದು ಮಾಡಿದೆ ಎಂದು ಶೋಕಿಸಬೇಡ . ನಿನ್ನ ತೊರೆದ ನಿನ್ನ ಪತಿಯು ಈಗ ಲೋಕಪೂಜ್ಯನಾಗಿರುವನು ಎಂದು ಯಶೋಧರೆಯನ್ನು ಸಮಾಧಾನಿಸುವ ರಾಜನು ವಿಧಿಯ ಬಗ್ಗೆ ಆಡಿದ ಒಳ್ಳೆಯ ಮಾತುಗಳು ಇಲ್ಲಿ ವ್ಯಕ್ತವಾಗಿವೆ.

೪. " ನಿದ್ದೆಯಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ "

ಉ : ಈ ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಯಶೋಧರೆ ಹೇಳಿದ್ದಾಳೆ.

ಸಂದರ್ಭ : ಯಶೋಧರೆಯು ತನಗೆ ಬಿದ್ದ ಕನಸಿನ ಕುರಿತು ತನ್ನ ಸಖಿ ಅಂಬಿಕೆಗೆ ವಿವರಿಸುವಳು. ಈ ಕನಸಿನಿಂದ ಇನ್ನೆಷ್ಟು ತೊಳಲಬೇಕೋ ಎಂದು ಭೀತಿಯಾಗುತ್ತಿದೆ ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾಳೆ.

ಸ್ವಾರಸ್ಯ : ಹಿಂದೊಮ್ಮೆ ಕನಸು ಕಂಡು ಎಚ್ಚರವಾದಾಗ ಬಳಿ ಮಲಗಿದ್ದ ಸಿದ್ಧಾರ್ಥ ರಾಜ್ಯ ತೊರೆದು ಹೋಗಿದ್ದರಿಂದ ಈ ಕನಸಿನಿಂದ ಇನ್ನಾವ ಆಪತ್ತು ಕಾದಿದೆಯೋ ಎಂಬ ಆತಂಕ ಯಶೋಧರೆಯ ಮಾತಿನಲ್ಲಿ ವ್ಯಕ್ತವಾಗಿದೆ.

ಹೊಂದಿಸಿ ಬರೆಯಿರಿ.

೧. ಯಶೋಧರೆ - ಸಖಿ

೨. ಶುದ್ಧೋದನ - ಬುದ್ಧನ ಮಗ

೩. ಅಂಬಿಕೆ -ರಾಜ

೪. ರಾಹುಲ -ಗೌತಮ ಬುದ್ಧ

೫. ಸಿದ್ಧಾರ್ಥ - ಯುವರಾಣಿ

ಉತ್ತರ - ಯಶೋಧರೆ -ಯುವರಾಣಿ ಶುದ್ಧೋದನ -ರಾಜ ಅಂಬಿಕೆ - ಸಖಿ

ರಾಹುಲ - ಬುದ್ಧನ ಮಗ ಸಿದ್ಧಾರ್ಥ - ಗೌತಮಬುದ್ಧ

ಈ ಕೆಳಗಿನ ಪದಗಳಿಗೆ ತದ್ಭವ ರೂಪಗಳನ್ನು ಬರೆಯಿರಿ.

ವಿನೋದ -ಬಿನದ ದುಃಖ -ದುಕ್ಕ ರಾಜ -ರಾಯ ಕಾರ್ಯ -ಕಜ್ಜ

ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.

ನಿನ್ನ +ಅಣ್ಣ =ನಿನ್ನಾಣ್ಣ =ಸವರ್ಣದೀರ್ಘ ಸಂಧಿ

ಚಕ್ರ+ಅಧಿಪತಿ =ಚಕ್ರಾಧಿಪತಿ

ಹರಕೆ+ಅನು =ಹರಕೆಯನು =ಆಗಮಸಂಧಿ

ಪತಿ+ಒಡನೆ =ಪತಿಯೊಡನೆ =ಆಗಮ ಸಂಧಿ

ಇಂದ +ಅಳುತ =ಇಂದಳುತ = ಲೋಪಸಂಧಿ

ಅಭ್ಯಾಸ ಚಟುವಟಿಕೆ

೧. ಲಿಂಗದ ವಿಧಗಳಾವುವು ?

ಉ: ಲಿಂಗದ ವಿಧಗಳು ಪುಲ್ಲಿಂಗ ಸ್ತ್ರೀಲಿಂಗ ಮತ್ತು ನಪುಂಸಕಲಿಂಗ

ಗಂಡಸು ಎಂಬ ಅರ್ಥವನ್ನು ನೀಡುವ ಪದಗಳು -ಪುಲ್ಲಿಂಗ ಪದಗಳು -ರಾಮ ,ಶಾಮ ಇತ್ಯಾದಿ

ಹೆಂಗಸು ಎಂಬ ಅರ್ಥವನ್ನು ನೀಡುವ ಪದಗಳು -ಸ್ತ್ರೀಲಿಂಗ ಪದಗಳು -ಗೌರಿ ,ತಂಗಿ ಇತ್ಯಾದಿ

ಗಂಡಸು ಅಥವಾ ಹೆಂಗಸು ಎಂಬ ಯಾವುದೇ ಅರ್ಥವನ್ನು ನೀಡದ ಪದಗಳು - ನಪುಂಸಕಲಿಂಗ ಪದಗಳು -ಆಡು ,ಮಗು ಇತ್ಯಾದಿ

೨. ಬಹುವಚನವನ್ನು ನಿದರ್ಶನದ ಮೂಲಕ ವಿವರಿಸಿ .

ಉ: ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸುವ ಪದಗಳೇ - ಬಹುವಚನ ಪದಗಳು .

ಏಕವಚನದ ನಾಮಪ್ರಕೃತಿಗಳಿಗೆ ಅರು,ವು ,ಗಳು ,ಅಂದಿರು ಇತ್ಯಾದಿ ಬಹುವಚನ ಸೂಚಕಗಳು ಸೇರಿ ಬಹುವಚನ ಪದಗಳಾಗುತ್ತವೆ.

ಉದಾ - ರಾಜ-ರಾಜರು ನೀನು -ನೀವು ಮರ-ಮರಗಳು ರಾಣಿ-ರಾಣಿಯರು ಇತ್ಯಾದಿ

೩. ವಾಕ್ಯ ಎಂದರೇನು ?

ಉ: ವಾಕ್ಯ ಎಂದರೆ ಕರ್ತೃ,ಕರ್ಮ ,ಕ್ರಿಯಾಪದಗಳಿಂದ ವ್ಯವಸ್ಥಿತವಾಗಿ ಕೂಡಿರುವ ಪದಸಮೂಹ . ಉದಾ -ಜಿಂಕೆಯು ಹುಲ್ಲನ್ನು ತಿಂದಿತು .

ಪ್ರಾಯೋಗಿಕ ಭಾಷಾಭ್ಯಾಸ

ಕೊಟ್ಟಿರುವ ಪದಗಳನ್ನು ಪುಲ್ಲಿಂಗ ,ಸ್ತ್ರೀಲಿಂಗ ಮತ್ತು ನಪುಂಸಕಲಿಂಗಗಳಾಗಿ ಪರಿವರ್ತಿಸಿ.

ರಾಹುಲ ,ಯಶೋಧರೆ ,ಸಖಿ ,ಅಮ್ಮಾಜಿ ,ರಾಜ ,ವಿಧಿ ,ಅಂಬಿಕೆ ,ಲೋಕ ,ಅರಮನೆ ,ತಂದೆ ,ಸನ್ಯಾಸ ,ಸತಿ,ಹುಲಿ ,ಕನಸು ,

ಪುಲ್ಲಿಂಗ ಪದಗಳು - ರಾಹುಲ ,ರಾಜ ,ತಂದೆ

ಸ್ತ್ರೀಲಿಂಗ ಪದಗಳು - ಯಶೋಧರೆ ,ಸಖಿ ,ಅಮ್ಮಾಜಿ ,ಅಂಬಿಕೆ ,ಸತಿ

ನಪುಂಸಕಲಿಂಗ ಪದಗಳು - ವಿಧಿ ,ಲೋಕ , ಅರಮನೆ ,ಸನ್ಯಾಸ ,ಹುಲಿ ,ಕನಸು

೨. ಕೊಟ್ಟಿರುವ ಪದಗಳ ಬಹುವಚನ ರೂಪ ಬರೆಯಿರಿ.

ನಾನು ,ಅಮ್ಮ ,ಕಿರಿಯ ,ರಾಜ ,ನನ್ನ , ಲೋಕ ,ಬಾಲಕ ,ಮಗು ,ತಾಯಿ , ಸ್ವರ ,ತಾತ ,ನೀನು

ಉ : ನಾನು -ನಾವು ಅಮ್ಮ -ಅಮ್ಮಂದಿರು ರಾಜ -ರಾಜರು ಕಿರಿಯ -ಕಿರಿಯರು ನನ್ನ -ನಮ್ಮ

ಲೋಕ -ಲೋಕಗಳು ಬಾಲಕ -ಬಾಲಕರು ಮಗು -ಮಕ್ಕಳು ತಾಯಿ -ತಾಯಂದಿರು

ಸ್ವರ -ಸ್ವರಗಳು, ತಾತ -ತಾತಂದಿರು ನೀನು - ನೀವು

೩. ಕೊಟ್ಟಿರುವ ವಾಕ್ಯಗಳಲ್ಲಿರುವ ಕರ್ತೃ ,ಕರ್ಮ ,ಕ್ರಿಯಾಪದಗಳನ್ನು ಆರಿಸಿ ಬರೆಯಿರಿ.

೧. ಅಮ್ಮ ಅಣ್ಣನನ್ನು ಕರೆಯುವೆನು

ಅಮ್ಮ -ಕರ್ತೃ ಅಣ್ಣನನ್ನು- ಕರ್ಮ ಕರೆಯುವೆನು-ಕ್ರಿಯಾಪದ

೨. ಸನ್ಯಾಸವನ್ನು ಕೊಂಡು ಪತಿಯನ್ನು ಸೇರುವೆನು .

ಸನ್ಯಾಸವನ್ನು -ಕ ರ್ತೃ ಪತಿಯನ್ನು -ಕರ್ಮ ಸೇರುವೆನು -ಕ್ರಿಯಾಪದ

೩. ಸಿದ್ದಾರ್ಥನು ಕರೆಯನ್ನು ಕೇಳಿಸಿಕೊಳ್ಳಲಿಲ್ಲ.

ಸಿದ್ದಾರ್ಥನು –ಕರ್ತೃ ಕರೆಯನ್ನು –ಕರ್ಮ ಕೇಳಿಸಿಕೊಳ್ಳಲಿಲ್ಲ–ಕ್ರಿಯಾಪದ

# ಗದ್ಯ -೭ ಅಮ್ಮ - ಯು ಆರ್ ಅನಂತಮೂರ್ತಿ

## ಕೃತಿಕಾರರ ಪರಿಚಯ



ಯು.ಆರ್ ಅನಂತಮೂರ್ತಿಯವರ ಕಾಲ ೧೯೩೨ ರಿಂದ ೨೦೧೪ .ಇವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಇವರ ಆತ್ಮಕಥೆ ಸುರಗಿ ಸಂಸ್ಕಾರ ,ಭಾರತೀಪುರ ,ಭವ ,ಅವಸ್ಥೆ ಇವು ಇವರು ಬರೆದ ಕಾದಂಬರಿಗಳು . ಆವಾಹನೆ ,ಮೌನಿ ,ಎಂದಿಗೂ ಮುಗಿಯದ ಕಥೆ ಇವು ಕಥಾ ಸಂಕಲನಗಳು .ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ,ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ,ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ಗದ್ಯ ಭಾಗವನ್ನು ಇವರ ಆತ್ಮಕಥೆ ಸುರಗಿ ಎಂಬ ಕೃತಿಯಿಂದ ಆರಿಸಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಬಾಲ್ಯದಲ್ಲಿ ಲೇಖಕರು ಭಯವಾದಾಗ ಯಾವ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು ?

ಉ : ಬಾಲ್ಯದಲ್ಲಿ ಲೇಖಕರು ಭಯವಾದಾಗ ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನ ಎಂಬ ಮಂತ್ರವನ್ನು ಹೇಳಿಕೊಳ್ಳುತ್ತಿದ್ದರು .

೨. ಲೇಖಕರ ಮೊದಲ ವಿದ್ಯಾಗುರು ಯಾರು ?

ಉ: ಲೇಖಕರ ಮೊದಲ ವಿದ್ಯಾ ಗುರು ಅವರ ಅಮ್ಮ.

೩. ಸಣ್ಣ ಕುಳಿಯೊಳಗಿನ ಕಪ್ಪು ಹುಳವನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?

ಸಣ್ಣ ಕುಳಿಯೊಳಗಿನ ಕಪ್ಪು ಹುಳವನ್ನು ಗುಬ್ಬಿ ತನ್ನಾದೇವಿ ಎಂದು ಕರೆಯುತ್ತಿದ್ದರು .

೪. ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು ?

ಉ: ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ ಎಂದು ಮನಸ್ಸಲ್ಲೇ ಪ್ರಾರ್ಥಿಸುತ್ತ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು .

೫. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು ?

ಉ: ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಬ್ಯಾರಿಯವರು.

**ಮೂರು- ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ ?

ಉ: ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ . ಕೆರೆಕೊಪ್ಪದ ಮನೆಯಲ್ಲಿದ್ದಾಗ ಅವರ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು ,ಹಬ್ಬದ ದಿನ ಅವರ ಅಮ್ಮ " ಸರಸ್ವತೀ ನಮಸ್ತುಭ್ಯಂ ವರದೇ ಕಾಮ ರೂಪಿಣೀ ,ವಿದ್ಯಾರಂಭಂ ಕರಿಷ್ಯಾಮಿ! ಸಿದ್ಧಿರ್ಭವತು ಮೇ ಸದಾ " ಎಂದು ಹೇಳಿ ನೆಲದಲ್ಲಿ ಹರಡಿ ಕೂರಿಸಿ ಲೇಖಕರ ಬೆರಳು ಹಿಡಿದುಕೊಂಡು ಅ ಎಂಬ ಅಕ್ಷರವನ್ನು ಬರೆಯಿಸಿದ್ದಳು. ಹೀಗೆ ಲೇಖಕರ ಅಕ್ಷರಾಭ್ಯಾಸ ಪ್ರಾರಂಭವಾಯಿತು.

೨. ಮಳೆಗಾಲದ ಆರಂಭಕ್ಕೆ ಮುನ್ನ ಮಲೆನಾಡಿನಲ್ಲಿ ಏನೆಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿತ್ತು ?

ಉ: ಸತತ ಮಳೆ ಸುರಿಯುತ್ತಿದ್ದ ಮಳೆಗಾಲದಲ್ಲಿ ಮನೆಯಲ್ಲಿ ಸೋರದ ಭಾಗವನ್ನು ಹುಡುಕಬೇಕಾಗಿತ್ತು. ಮಳೆಗಾಲದ ಆರಂಭಕ್ಕೆ ಮೊದಲೇ ಒಣ ಸೌದೆ ,ಅಕ್ಕಿ ,ಬೇಳೆ ,ಜೋನಿ ಬೆಲ್ಲವನ್ನು ಸಂಗ್ರಹಿಸುತ್ತಿದ್ದರು. ಬೇಸಿಗೆಯಲ್ಲಿ ಮಳೆಗಾಲದ ದಿನಗಳಿಗೆಂದು ಹಪ್ಪಳ, ಸಂಡಿಗೆಯಂತಹ ಅನೇಕ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು.

೩. ನಸುಕಿನಲ್ಲಿ ಲೇಖಕರಿಗೆ ಖುಷಿ ಕೊಡುತ್ತಿದ್ದ ಸಂಗತಿಗಳು ಯಾವುವು ?

ಉ: ನಸುಕಿನಲ್ಲಿ ಎದ್ದು ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರವೊಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುವುದು , ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು ,ಕೇದಗೆ ಅರಳಿದೆಯೆ ,ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೆ ಎಂದು ಬಿದಿರಿನ ಸಂದಿಯಿಂದ ನಿತ್ಯ ನೋಡುವುದು ಲೇಖಕರಿಗೆ ಖುಷಿಯ ಸಂಗತಿಗಳು.

೪. ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುತ್ತಿದ್ದ ಹಾಗೂ ತೀರಿಸುತ್ತಿದ್ದ ಬಗೆ ಹೇಗೆ ?

ಉ: ಕಾಫಿ ಬೀಜವನ್ನು ಬ್ಯಾರಿಯೊಬ್ಬರು ಲೇಖಕರ ಮನೆಗೆ ತಂದು ಕೊಡುತ್ತಿದ್ದರು. ಈ ವಿಶೇಷ ಪದಾರ್ಥಗಳನ್ನು ಕಡವಾಗಿ ಪಡೆಯುವುದು ವರ್ಷಕ್ಕೊಮ್ಮೆ ,ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ ,ಯುಗಾದಿಯಿಂದ ಇನ್ನೊಂದು ಯುಗಾದಿಗೆ ,ಗೌರಿ ಹಬ್ಬದಿಂದ ಇನ್ನೊಂದು ಗೌರಿ ಹಬ್ಬದವರೆಗೆ ಕಡದ ಅವಧಿ. ಅವರು ಬೆಳೆದ ಅಡಿಕೆಯನ್ನೋ ,ಭತ್ತವನ್ನೋ ಬದಲಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು.

ಐದು -ಆರು ವಾಕ್ಯಗಳಲ್ಲಿ ಉತ್ತರಿಸಿ .

೧. ಮಲೆನಾಡಿನಲ್ಲಿ ಹುಲಿಗಳಿಂದಾಗುತ್ತಿದ್ದ ತೊಂದರೆಯ ಬಗ್ಗೆ ಹೇಗೆ ವರ್ಣಿಸಲಾಗಿದೆ ?

ಉ: ಹುಲಿಗಳ ಕಾಟ ಮಲೆನಾಡಿನ ಊರುಗಳಲ್ಲಿ ಸಾಮಾನ್ಯವಾಗಿತ್ತು. ಲೇಖಕರ ಅಮ್ಮನಿಗೆ ದೂರದಿಂದ ಹುಲಿಯು ಕೂಗುತ್ತಿದ್ದರೆ ತಿಳಿಯುತ್ತಿತ್ತು. ಹುಲಿಗಳ ಶಬ್ದಕ್ಕೆ ಕೊಟ್ಟಿಗೆಯಲ್ಲಿದ್ದ ದನಗಳು ನಡುಗಲು ಶುರು ಮಾಡುತ್ತಿದ್ದವು. ಅವುಗಳ ಕೊರಳಿನಲ್ಲಿದ್ದ ಗಂಟೆ ಜೋರು ಶಬ್ದ ಮಾಡುತ್ತಿತ್ತು. ಚಿಮಣಿ ದೀಪದ ಬೆಳಕಿನಲ್ಲಿ ಲೇಖಕರು ,ಅವರ ಅಮ್ಮ ,ಅಜ್ಜ ,ಹುಲಿ ಎಲ್ಲಿ ಕೊಟ್ಟಿಗೆಗೂ ನುಗ್ಗಿ ಬಿಡುತ್ತದೇನೋ ಎಂದು ಕಾಯುತ್ತಿದ್ದರು. ಮನೆಗೆ ಆಳುಗಳು ಬಂದರೂ ಯಾರ್ಯಾರ ಮನೆ ದನವನ್ನು ಹುಲಿ ಹಿಡಿಯಿತು ಎಂದು ಮಾತು ಶುರುವಾಗುತ್ತಿತ್ತು. ಹುಲಿ ಮಲೆನಾಡಿನಲ್ಲಿ ನಿಜವಾಧ ಹಸಿದ ಕಣ್ಣುಗಳ ಕೋರೆ ದಾಡೆಯ ಮುಖವಾಗಿತ್ತು. ಅಜ್ಜ ಹೇಳಿಕೊಟ್ಟಿದ್ದ ಅರ್ಜುನಃ ಫಲ್ಗುಣೋ ಪಾರ್ಥಃ ಕಿರೀಟೀ ಶ್ವೇತವಾಹನಃ ಎಂಬ ಭಯವಾದಾಗ ಅದರ ನಿವಾರಣೆಗಾಗಿ ಹೇಳುವ ಮಂತ್ರವನ್ನು ಹೇಳುತ್ತ ಲೇಖಕರು ನಿದ್ದೆ ಹೋಗುತ್ತಿದ್ದರು. ಅಮ್ಮ ಮಾತ್ರ ನಿದ್ದೆ ಮಾಡದೇ ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂಬುದನ್ನು ನೋಡಿ ಮನಸ್ಸಿಗೆ ಸಮಾಧಾನ ತಂದುಕೊಳ್ಳುತ್ತಿದ್ದರು.

೨. ಒರಿಜಿನಲ್ ಹಾಗೂ ಚರಟದ ಕಾಫಿಯನ್ನು ಸಿದ್ಧಗೊಳಿಸುತ್ತಿದ್ದ ಬಗೆಯನ್ನು ವಿವರಿಸಿ .

ಉ: ಲೇಖಕರಿಗೆ ಬಾಲ್ಯದಲ್ಲಿ ದೊರೆಯುತ್ತಿದ್ದುದು ಚರಟದ ಕಾಫಿ. ಆದರೆ ಕೆಲವು ಸಾರಿ ಅಜ್ಜಯ್ಯನಿಗೆ ,ಅವರ ತಂದೆ ಶಾನುಭೋಗರಿಗೆ ಅವರ ಗೆಳೆಯರಾದ ಪಟೇಲರಿಗೆ ಒರಿಜಿನಲ್ ಕಾಫಿ ಪುಡಿಯ ಕಾಫಿ , ಕಾಫಿಬೀಜವನ್ನು ಆಗಲೇ ಹುರಿದು ,ಆಗಲೇ ಪುಡಿ ಮಾಡಿ ,ಆಗಲೇ ಕುದಿಯುವ ನೀರಿಗೆ ಬೆರೆಸಿ ,ಮುಚ್ಚಿಟ್ಟು ,ಅದರ ಗಸಿ ಇಳಿಯುವಷ್ಟು ಹೊತ್ತು ಕಾದು ,ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ , ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿ ಬಿಸಿ ಎಮ್ಮೆ ಹಾಲು ಬೆರೆಸಿ ಹದ ಮಾಡಿ ಕಾಪಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವು ಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ ಸೆರಗು ಮುಚ್ಚಿದ ಕೈಯ ಮೇಲೆ ಅದನ್ನು ಇಟ್ಟುಕೊಂಡು ಹಸನ್ಮುಖಿಯಾಗಿ ಲೇಖಕರ ಅಮ್ಮ ಕುಡಿಯಲು

ಕೊಡುತ್ತಿದ್ದರು. ಒಂದೊಂದು ಸಲ ಈ ಕಾಫಿಯ ಪುಣ್ಯ ಲೇಖಕರಿಗೆ ಸಿಗುತ್ತಿತ್ತು. ಇಲ್ಲವಾದರೆ ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ಇರುತ್ತಿತ್ತು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. " ಸರಸ್ವತೀ ನಮಸ್ತುಭ್ಯಂ ವರದೇ ಕಾಮರೂಪಿಣಿ "

ಉ: ಈ ಮೇಲಿನ ವಾಕ್ಯವನ್ನು ಯು.ಆರ್. ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ .ಅವರು ಕೆರೆಕೊಪ್ಪದ ಮನೆಯಲ್ಲಿದ್ದಾಗ ಅವರಿಗೆ ಅಕ್ಷರಾಭ್ಯಾಸ ಪ್ರಾರಂಭವಾಯಿತು. ಆಗ ಸ್ಕೂಲ್ ಹತ್ತಿರ ಇರಲಿಲ್ಲ. ಅವರ ಅಮ್ಮ ಹಬ್ಬದ ದಿನ ನೆಲದಲ್ಲಿ ಮರಳು ಹರಡಿ ಲೇಖಕರನ್ನು ಕೂರಿಸಿ ಅವರ ಬೆರಳು ಹಿಡಿದು ಅ ಎಂಬ ಅಕ್ಷರವನ್ನು ಬರೆಯಿಸುವ ಪೂರ್ವದಲ್ಲಿ ಮೇಲಿನಂತೆ ಶ್ಲೋಕವನ್ನು ಉಚ್ಚರಿಸಿದ್ದರು ಎಂದು ಲೇಖಕರು ತಾವು ಅಕ್ಷರಾಭ್ಯಾಸ ಪ್ರಾರಂಭಿಸಿದ ದಿನಗಳನ್ನು ಸ್ಮರಿಸಿದ್ದಾರೆ.

ಸ್ವಾರಸ್ಯ : ಅಕ್ಷರಾಭ್ಯಾಸ ಪ್ರಾರಂಭಿಸುವ ಪೂರ್ವದಲ್ಲಿ ವಿದ್ಯಾಧಿದೇವತೆ ಸರಸ್ವತಿಯನ್ನು ಸ್ಮರಿಸುವ ಶ್ಲೋಕವನ್ನು ಹೇಳಲಾಗುತ್ತಿತ್ತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು."

ಉ: ಈ ಮೇಲಿನ ವಾಕ್ಯವನ್ನು ಯು.ಆರ್. ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಚಿಕ್ಕವರಿದ್ದಾಗ ಅವರಿಗೆ ಚೌಲವಾಗಿರಲಿಲ್ಲ. ಅವರಿಗೆ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು. ಅವರಿಗೆ ರಂಜದ ಹೂವನ್ನು ತಂದು ಪೋಣಿಸಿ ದೊಡ್ಡ ದೊಡ್ಡ ಸರಗಳನ್ನು ಮಾಡಿ ಅಮ್ಮನಿಗೆ ಮುಡಿಯುವುದಕ್ಕೆ ಕೊಡುವುದು ಅವರೂ ಮುಡಿದುಕೊಳ್ಳುವುದು ಅವರಿಗೆ ಇಷ್ಟವಾಗಿತ್ತು ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಚೌಲವಾಗದೇ ಇದ್ದ ಸಂದರ್ಭದಲ್ಲಿ ತನಗೂ ಹೆಣ್ಣು ಮಕ್ಕಳಿಗೆ ಇದ್ದಂತೆ ಉದ್ದ ಕೂದಲು ಇದ್ದ ದಿನಗಳನ್ನು ,ಅವರ ಅಮ್ಮ ಅವರನ್ನು ಹೆಣ್ಣು ಮಗುವಿನಂತೆ ಅಲಂಕರಿಸುತ್ತಿದ್ದ ದಿನಗಳನ್ನೂ ಲೇಖಕರು ಇಲ್ಲಿ ಸ್ಮರಿಸಿದ್ದಾರೆ.

೩. " ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ "

ಉ: ಈ ಮೇಲಿನ ವಾಕ್ಯವನ್ನು ಯು.ಆರ್. ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಲೇಖಕರಿಗೆ ಬಾಲ್ಯದ ದಿನಗಳಲ್ಲಿ ರಂಜದ ಹೂವುಗಳನ್ನು ಕೊಯ್ಯುವುದು ,ಪೋಣಿಸುವುದು ,ದೂರ್ವೆಯನ್ನು ಆಯ್ದು ತರುವುದು ಮೊದಲಾದವು ಅವರ ಖುಷಿಯ ಸಂಗತಿಗಳಾಗಿದ್ದವು. ಅವರ ಅಮ್ಮ ಕಡಗೋಲಿನಿಂದ ಮೊಸರು ಕಡೆಯುವಾಗ ಏಳು ನಾರಾಯಣನೆ , ಏಳು ಲಕ್ಷ್ಮೀ ರಮಣ ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತ ,ರಂಜದ ಹೂವನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತ ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತ ಮನಸ್ಸಿನಲ್ಲಿ ಮೇಲಿನಂತೆ ಪ್ರಾರ್ಥಿಸುತ್ತಿದ್ದರು.

ಸ್ವಾರಸ್ಯ : ಕೃಷ್ಣಪ್ಪಯ್ಯ ಮೇಷ್ಟ್ರು ಬಹಳ ಕಟ್ಟುನಿಟ್ಟಿನ ಶಿಸ್ತಿನ ಮೇಷ್ಟ್ರಾಗಿದ್ದರು. ಸಹಜವಾಗಿ ತರಗತಿಗಿಂತ ಹೊರಗಡೆ ಹೋಗುವುದನ್ನು ಕಾಯುವುದು ಬಾಲ್ಯದ ದಿನಗಳಲ್ಲಿ ಸಹಜ ಸ್ವಭಾವವಾಗಿರುವುದು ಅದರಂತೆಯೇ ಲೇಖಕರೂ ಸಹ ಮೇಷ್ಟ್ರು ಬರದಿದ್ದರೆ ಚೆನ್ನ ಎಂದು ಯೋಚಿಸುವುದು ಮೇಲಿನ ವಾಕ್ಯದ ಸ್ವಾರಸ್ಯಯವಾಗಿದೆ.

೪. " ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು "

ಉ: ಈ ಮೇಲಿನ ವಾಕ್ಯವನ್ನು ಯು.ಆರ್. ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಬಾಲ್ಯದ ದಿನಗಳಲ್ಲಿ ಕೆರೆಕೊಪ್ಪದ ಮನೆಯಲ್ಲಿ ಅವರಿಗೆ ಚರಟದ ಕಾಫಿ ದೊರೆಯುತ್ತಿತ್ತು. ಆದರೆ ಕೆಲವು ಸಾರಿ ಅವರ ಅಜ್ಜಯ್ಯನಿಗೆ ಅವರ ತಂದೆ ಶಾನುಭೋಗರಿಗೆ ಅವರ ಗೆಳೆಯರಾದ ಊರಿನ ಪಟೇಲರಿಗೆ ಒರಿಜಿನಲ್ ಕಾಫಿ ಪುಡಿಯ ಕಾಫಿ ಕೊಡುತ್ತಿದ್ದರು. ಹಾಗೆ ಕೊಡುವಾಗ ಕೆಲವೊಮ್ಮೆ ತನಗೂ ಆ ಭಾಗ್ಯ ದೊರೆಯುತ್ತಿತ್ತು ಎಂದು ಲೇಖಕರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಚರಟದ ಕಾಫಿಯೇ ದೊರೆಯುತ್ತಿದ್ದ ಆ ದಿನಗಳಲ್ಲಿ ಕೆಲವೊಮ್ಮೆ ಒರಿಜಿನಲ್ ಕಾಫಿ ಪುಡಿಯಿಂದ ಮಾಡಿದ ಕಾಫಿ ತನಗೆ ದೊರೆಯುತ್ತಿದ್ದ ಖುಷಿಯನ್ನು ಲೇಖಕರು ಸ್ಮರಿಸಿದ ಕ್ಷಣ ಇದಾಗಿದೆ.

೫. " ನನಗೆ ಚರಟದಲ್ಲಿ ಕಾಫಿಯೋ "

ಉ: ಈ ಮೇಲಿನ ವಾಕ್ಯವನ್ನು ಯು.ಆರ್. ಅನಂತಮೂರ್ತಿಯವರ ಆತ್ಮಕಥನ ಸುರಗಿಯಿಂದ ಆರಿಸಲಾದ ಅಮ್ಮ ಎನ್ನುವ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಲೇಖಕರ ಬಾಲ್ಯದ ದಿನಗಳಲ್ಲಿ ಹಲವು ಬಾರಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಅವರ ಮನೆಯಲ್ಲಿ ಇರಲಿಲ್ಲ. ಕೆಲವೊಮ್ಮೆ ಅವರ ಅಮ್ಮ ಸ್ವಲ್ಪ ಕಾಫಿ ಪುಡಿಯಲ್ಲಿ ಒಂದು ಲೋಟ ಕಾಪಿ ಮಾಡಿ ಅಪ್ಪನಿಗೆ ಕೊಟ್ಟು ಆ ಕಾಫಿ ಮಾಡಿದ ಚರಟದಲ್ಲಿ ಲೇಖಕರಿಗೆ ,ತನಗೆ ಮತ್ತು ಲೇಖಕರ ಅಜ್ಜನಿಗೆ ಕೊಡುತ್ತಿದ್ದರು. ಆಗ ಲೇಖಕರ ಅಜ್ಜ ಮೇಲಿನಂತೆ ಕೇಳುತ್ತಿದ್ದರು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಲೇಖಕರ ಬಾಲ್ಯದ ದಿನಗಳ ಕಷ್ಟವೂ ಅದನ್ನು ಹಿರಿಯರು ಸಮಾಧಾನದಿಂದ ತೆಗೆದುಕೊಳ್ಳುತ್ತಿದ್ದ ರೀತಿಯು ಇಲ್ಲಿ ವ್ಯಕ್ತವಾಗಿದೆ.

ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.,

೧. ಅಧಿಕೃತವಾಗಿ ಲೇಖಕರ ಮೊದಲ ಶಿಕ್ಷಕರು ----- ಕೃಷ್ಣಪ್ಪಯ್ಯ.
(ಕೃಷ್ಣಪ್ಪಯ್ಯ , ಅಮ್ಮ ,ತಂದೆ , ಶೇಷಗಿರಿ. )

೨. ಮಳೆಗಾಲದಲ್ಲಿ ಮಲೆನಾಡಿನಲ್ಲಿ ಯಥೇಚ್ಛವಾಗಿ ಸಿಗುತ್ತಿದ್ದ ಹಣ್ಣು ------ ಹಲಸಿನ ಹಣ್ಣು
(ಮಾವಿನ ಹಣ್ಣು , ಸೀಬೆ ಹಣ್ಣು ,ಹಲಸಿನ ಹಣ್ಣು ,ಬಾಳೆಹಣ್ಣು )

೩. 'ಪಟ್ಟಾಂಗ ' ಈ ಪದದ ಅರ್ಥ --- ಹರಟೆ
(ಒಳ್ಳೆಯ ಮಾತು ,ಹರಟೆ , ಪಟ್ಟ ಕಟ್ಟುವುದು ,ಕೆಟ್ಟಮಾತು )

೪. ' ಕಡೆಗೋಲು' ಪದವು --- ಸಂಧಿಗೆ ಉದಾಹರಣೆಯಾಗಿದೆ. ----- ಆದೇಶ ಸಂಧಿ
(ಆಗಮ ಸಂಧಿ, ಗುಣಸಂಧಿ ,ಲೋಪಸಂಧಿ , ಆದೇಶಸಂಧಿ )

೫. 'ಸಕ್ಕರೆ ' ಪದದ ತತ್ಸಮ ರೂಪ ---- ಶರ್ಕರಾ
(ಸಕ್ಕರಿ ,ಸಕ್ಕಾರಿ ,ಶರ್ಕರಾ ,ಸರಕಾರಿ )

ಅಭ್ಯಾಸ ಚಟುವಟಿಕೆ

ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ವಾಕ್ಯ ಪ್ರಭೇದಗಳನ್ನು ವಿವರಿಸಿ .

ವಾಕ್ಯಗಳನ್ನು ಸಾಮಾನ್ಯವಾಕ್ಯ ,ಸಂಯೋಜಿತ ವಾಕ್ಯ ಮತ್ತು ಮಿಶ್ರವಾಕ್ಯ ಎಂಬುದಾಗಿ ಮೂರು ವಿಭಾಗ ಮಾಡಲಾಗಿದೆ.

ಸಾಮಾನ್ಯವಾಕ್ಯ : ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ವಾಕ್ಯವಾಗಿರುವ ವಾಕ್ಯಗಳು

ಸಂಯೋಜಿತ ವಾಕ್ಯ : ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವಾ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ .

ಮಿಶ್ರವಾಕ್ಯ : ಒಂದು ಅಥವಾಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ

೨. ಸಮಾಸ ಎಂದರೇನು ?

ಉ: ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ .

೩. ಸಮಾಸಗಳಲ್ಲಿ ಎಷ್ಟು ವಿಧ ?ಪಟ್ಟಿಮಾಡಿ

ಉ: ಕನ್ನಡ ಭಾಷೆಯಲ್ಲಿ ತತ್ಪುರುಷ ,ಕರ್ಮಧಾರಯ ,ದ್ವಿಗು ,ಅಂಶಿ, ದ್ವಂದ್ವ ,ಬಹುವ್ರೀಹಿ ,ಕ್ರಿಯಾ ಮತ್ತು ಗಮಕ ಎಂಬ ಎಂಟು ವಿಧದ ಸಮಾಸಗಳು ಬಳಕೆಯಲ್ಲಿವೆ.

ಕೊಟ್ಟಿರುವ ಸಾಮಾನ್ಯ ವಾಕ್ಯಗಳನ್ನು ಸಂಯೋಜಿತ ವಾಕ್ಯವಾಗಿ ಪರಿವರ್ತಿಸಿ ಬರೆಯಿರಿ.

ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು.

ಅವನ ಕಣ್ಣುಗಳು ಉರಿಯತೊಡಗಿದವು.

ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

ಉ: ವಾಸುವಿನ ತಲೆಗೆ ಹಾಕಿದ ಎಣ್ಣೆ ಹಣೆಯ ಮೂಲಕ ಇಳಿದು ಕಣ್ಣುಗಳನ್ನು ಪ್ರವೇಶಿಸಿತು; ಆಗ ಅವನ ಕಣ್ಣುಗಳು ಉರಿಯತೊಡಗಿದವು; ಆದ್ದರಿಂದ ಅವನು ಕಣ್ಣುಗಳನ್ನು ಬಟ್ಟೆಯಿಂದ ಉಜ್ಜತೊಡಗಿದನು.

## ಗದ್ಯ –೮ ಸಪ್ತಾಕ್ಷರೀ ಮಂತ್ರ – ಮುದ್ದಣ

### ಕೃತಿಕಾರರ ಪರಿಚಯ



ಸಾಹಿತ್ಯ ಕ್ಷೇತ್ರದಲ್ಲಿ ಮುದ್ದಣ ಎಂದೇ ಹೆಸರಾದ ಲಕ್ಷ್ಮೀನಾರಾಯಣಪ್ಪನವರು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯ ೧೮೭೦ರ ಜನವರಿ ೨೪ ರಂದು ಜನಿಸಿದರು. ವೃತ್ತಿಯಿಂದ ವ್ಯಾಯಾಮ ಶಿಕ್ಷಕನಾಗಿದ್ದ ಇವರು ಮಳಲಿಸುಬ್ಬರಾಯರೆಂಬ ವಿದ್ವಾಂಸರ ಪರಿಚಯದಿಂದ ಸಾಹಿತ್ಯಾಸಕ್ತಿ ಬೆಳೆಸಿಕೊಂಡು'ರತ್ನಾವತಿಕಲ್ಯಾಣ ' ಮತ್ತು 'ಕುಮಾರ ವಿಜಯ' ಎಂಬ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ವಾರ್ಧಕ ಷಟ್ಪದಿಯಲ್ಲಿ 'ಶ್ರೀ ರಾಮ ಪಟ್ಟಾಭಿಷೇಕಂ', ಹಳಗನ್ನಡ ಶೈಲಿಯಲ್ಲಿ 'ಅದ್ಭುತ ರಾಮಾಯಣ' ಮತ್ತು' ಶ್ರೀ ರಾಮಾಶ್ವಮೇಧಂ 'ಗದ್ಯಕಾವ್ಯಗಳನ್ನು ಬರೆದಿದ್ದಾರೆ. 'ಹೊಸಗನ್ನಡದ ಅರುಣೋದಯದ ಮುಂಗೋಳಿ 'ಎಂಬ ಪ್ರಶಂಸೆಗೆ ಪಾತ್ರರಾಗಿದ್ದ ಇವರು ೧೯೦೧ ರ ಫೆಬ್ರುವರಿ ಹದಿನೈದರಂದು ಮರಣ ಹೊಂದಿದರು.

ಪ್ರಸ್ತುತ ಅಂತರಾಳ ಗದ್ಯಭಾಗವನ್ನು ಪ್ರೊ. ಜಿ. ವೆಂಕಟಸುಬ್ಬಯ್ಯನವರು ಸಂಪಾದಿಸಿದ 'ಮುದ್ದಣ ಭಂಡಾರ 'ದ ಸಂಪುಟ ಎರಡರ 'ತ್ರಯೋದಶಾಶ್ವಾಸಂ – ಅರಣ್ಯಕ ಮುನಿದರ್ಶನಂ ' ಭಾಗದಿಂದ ಆರಿಸಲಾಗಿದೆ.

### ಹೊಸಗನ್ನಡ ರೂಪ

ಈ ರೀತಿಯಾಗಿ ಬಂದೊದಗಿದ ಚಳಿಗಾಲದಲ್ಲಿ ಶ್ರೀರಾಮನ (ರಾಘವನ ) ಯಜ್ಞದ ಕುದುರೆಯು ಅರಣ್ಯಕನೆಂಬ ಒಬ್ಬ ಋಷಿಯ ಆಶ್ರಮವನ್ನು ಪ್ರವೇಶಿಸಿದ್ದನ್ನು ನೋಡಿ ,ಶತ್ರುಘ್ನರಾದಿಯಾಗಿ ಎಲ್ಲರೂ (ಕುದುರೆಯ ಜೊತೆ ಬಂದಿದ್ದ ರಾಮನ ಸೈನ್ಯ )ಮುನಿಯ ದರ್ಶನಕ್ಕೆಂದು ಆಶ್ರಮವನ್ನು ಪ್ರವೇಶಿಸಿ ಮುನಿಗೆ ನಮಸ್ಕರಿಸಿದರು. ಆಗ ಅರಣ್ಯಕನು ಆಭ್ಯಾಗತರನ್ನು ಗೌರವಿಸಿ ,ಎಲ್ಲರಿಗೂ ಆತಿಥ್ಯ ಕೊಟ್ಟು ಸತ್ಕರಿಸಿದನು. ಅವರೆಲ್ಲರೂ ಶ್ರೀರಾಮನ ಸತ್ಕಥಾ ವಿನೋದ ಗೋಷ್ಠಿಯಲ್ಲಿ ........

ಮನೋರಮೆ : ಎನ್ನ ಚೆನ್ನಿಗ ! ಆತಿಥ್ಯವೆಂದರೇನು ? ಕೇವಲ (ಬರಿಯ) ಬಾಯುಪಚಾರವೇ ?

ಮುದ್ದಣ : ಅಲ್ಲ ,ಅಲ್ಲ , ಬಾಯ ಉಪಚಾರವಲ್ಲ . ಬಂದವರಿಗೆ ಕೈಗೆ ,ಕಾಲಿಗೆ ನೀರನ್ನು ಇತ್ತು ಕೂರಿಸಿ ಸವಿಯಾದ ಅನ್ನವನ್ನು ನೀಡಿ , ಹೂವಿನಿಂದ ಸಿಂಗರಿಸಿ ,ಗಂಧದಿಂದ ಅಲಂಕರಿಸಿ ,ಜೊತೆಗಿದ್ದು ನುಡಿದು ನಡೆದು ಗೌರವಿಸುವುದು.

ಮನೋರಮೆ : ಅದಿರಲಿ ,ಶತ್ರುಘ್ನನ ಸಾವಿರ ಸಾವಿರ ಲೆಕ್ಕವಿಲ್ಲದಷ್ಟು ಪಡೆಗೆ ಅರಣ್ಯಕನು ಅನ್ನ ನೀರನ್ನಿತ್ತು ಗೌರವಿಸಿದನೆ ?

ಮುದ್ದಣ : ಹೌದು ,ಹೌದು ಅವರೆಲ್ಲರನ್ನು ಯಥೇಚ್ಛ ಮೃಷ್ಟಾನ್ನ ಭೋಜನದಿಂದ ತಣಿಸಿದನು.

ಮನೋರಮೆ : ನನಗೆ ಇದು ಅಚ್ಚರಿ (ಆಶ್ಚರ್ಯದ ವಿಷಯ ) ಇದು ಹೇಗೆ ಸಾಧ್ಯವಾಯಿತು ?.

ಮುದ್ದಣ : ಏನು ? ಮುನಿಗಳ ಜಪದ ತಪದ ಮಂತ್ರದ ಹಿರಿಮೆಯೇನು ಸಾಮಾನ್ಯವಾದುದೆ ? ಬೇಡಿದ ದ್ರವ್ಯವನ್ನು ಕ್ಷಣಮಾತ್ರದಲ್ಲಿ ತಂದಿಡುವರು.

ಮನೋರಮೆ : ಹಾಗಿರುವುದೆ ? ಒಳ್ಳೆಯದು ಯಾವುದು ಆ ಮಂತ್ರ ?

ಮುದ್ದಣ : ಅದುವೆ ?ಏಕಾಕ್ಷರೀ , ದ್ವಿಅಕ್ಷರೀ , ತ್ರಿ ಅಕ್ಷರೀ ,ಚತುರಾಕ್ಷರೀ ,ಪಂಚಾಕ್ಷರೀ ,ಷಡಕ್ಷರೀ , ಮೊದಲಾದ ಪ್ರಸಿದ್ಧ ಮಂತ್ರಗಳಿವೆಯಲ್ಲವೇ ?

ಮನೋರಮೆ : ಓಹೋ ! ಇಷ್ಟೊಂದು ಜಪದ ಶಕ್ತಿಯ ನೆರವಿನಿಂದ ತಪಸ್ವಿಗಳು ಇನ್ನು ಯಾವುದರ ಗೊಡವೆಯಿಲ್ಲದಂತೆ ಇರುವರು.

ಮುದ್ದಣ : ಹೌದು ,ಹೌದು .ತಪ್ಪೇನಿದೆ ?

ಮನೋರಮೆ : ಅದಿರಲಿ , ನಿಮ್ಮಂತಹ ಕವಿಗಳು ತಮ್ಮ ಸಂಸಾರದ ಬಗ್ಗೆ ಒಂದಿಷ್ಟು ಗಮನವಿಲ್ಲದೆ , ಸುಮ್ಮ ಸುಮ್ಮನೆ ಹಾಳು ಕಥೆಯ ಕಾವ್ಯದ ಭ್ರಮೆಯಲ್ಲಿರುವಿರಿ. ಋಷಿಗಳಿಗೇನು ಬಟ್ಟೆಯೋ ? ಉಣ್ಣಲು ,ತಿನ್ನಲು ಯಾವುದರ ಅವಶ್ಯಕತೆಯೂ ಇಲ್ಲ. ನಿಮ್ಮಂತಹ ಕವಿಗಳು ಹಾಗಿರುವ ಒಂದು ಜಪದ ಉಪದೇಶವನ್ನು ಹಿರಿಯ ಋಷಿಗಳ ಸಹಾಯದಿಂದ ಪಡೆದುಕೊಂಡರಾಗದೇ ?

ಮುದ್ದಣ : (ಮುಗುಳ್ನಗೆಯಿಂದ) ಏನು ? ನಮ್ಮ ಹಾಗಿರುವುದಕ್ಕೆ ನಗುವೆ ?ನಮ್ಮಂತಹ ಕವಿಗಳಿಗೇನು ಕೊರತೆಯೇ ?
ತಮ್ಮ ಒಂದು ನುಡಿಯ ಶಕ್ತಿಯಿಂದ ಮೂರು ಜಗವನ್ನು ನಾಶ ಮಾಡುವ ,ಹೊಗಳುವ ,ತೆಗಳುವ ,ಕೊಳ್ಳುವ ,ಆಳುವ , ಅನುಭವಿಸುವ ,ನಾಶಪಡಿಸುವ ,ಹೂಳುವ ,ಆಜ್ಞಾಪಿಸುವ ,ಬಾಳಿಸುವ (ಉಳಿಸುವ ) ಭೂಷಣಪ್ರಾಯರಾದ ನಮ್ಮಂತಹ ಕವಿಗಳ ರೀತಿಯನ್ನು ನೀನು ಇನ್ನು ಅರಿತಿಲ್ಲ.
ಮನೋರಮೆ : (ಆಶ್ಚರ್ಯಗೊಂಡು ) ನಿಮ್ಮಂತಹ ಕವಿಗಳಿಗೆ ಅಂತಹ ಮಂತ್ರ ಸಿದ್ಧಿಸಿದೆಯೆ ?
ಮುದ್ದಣ : ಅದಕ್ಕೆ ತಡೆಯೇನು ? ಭಯವೇನು ?
ಮನೋರಮೆ : ನಿನ್ನಲ್ಲು ಆ ಮಂತ್ರ ವಿದೆಯೆ ?(ನಿನಗೆ ಆ ಮಂತ್ರ ಸಿದ್ಧಿಸಿದೆಯೆ ? )
ಮುದ್ದಣ : ನನ್ನಲ್ಲಿ ಆ ಮಂತ್ರ ಹಾಸುಹೊಕ್ಕಾಗಿದೆ.
ಮನೋರಮೆ : ಆಹಾ ! ನೀನು ಬಲು ಸಮರ್ಥನು , ನಿನಗೆ ಯಾರಿಂದ ಮಂತ್ರದ ಉಪದೇಶವಾಯ್ತು ?
ಮುದ್ದಣ : ಗುರುವಿನಿಂದ ಬಾಲ್ಯದಲ್ಲಿಯೇ (ಚಿಕ್ಕವನಿರುವಾಗಲೇ ) ಮಂತ್ರದ ಉಪದೇಶವಾಯಿತು.
ಮನೋರಮೆ : ನನ್ನೊಡೆಯ !ಅದು ಯಾವ ಮಂತ್ರ ವೆಂದು ನನಗೆ ಹೇಳುವಿರ ?
ಮುದ್ದಣ : ಎಲೆ ಹೆಣ್ಣೆ ! ನೀನು ಯಾರಲ್ಲಿಯೂ ಎಂದೆಂದಿಗೂ ಹೇಳಬಾರದು ಎಚ್ಚರಿಕೆ !
ಮನೋರಮೆ : ಎಂದು ,ಯಾವತ್ತೂ ಹೇಳುವುದಿಲ್ಲ.
ಮುದ್ದಣ : ಹಾಗಾದರೆ ಅದು ಈ ಮಂತ್ರ . ಕೇಳು .... ಭ... ವ... .ಯಾರಲ್ಲಿಯೂ ಹೇಳುವುದಿಲ್ಲ ಎಂದು ಭರವಸೆ ನೀಡು .
ಮನೋರಮೆ : ಇದೋ ಭರವಸೆ ನೀಡುತ್ತೇನೆ .ನಿನ್ನಾಣೆ ,ಕುಲದೈವದಾಣೆ ! ಎಂದೂ ಬೇರೆಯವರಿಗೆ ಹೇಳಿ ಗುಟ್ಟನ್ನು ಬಿಟ್ಟುಕೊಟ್ಟರೆ ನಮ್ಮಂತವರ ಬಾಳು ಹಾಳಾಗುವುದು.
ಮನೋರಮೆ : ನಾನೇನು ಮೂಢಳೇ ? ಹೋಗು ! ನನ್ನಾಣೆ ,ಕಣ್ಣಾಣೆ ,ಹೇಳುವುದಿಲ್ಲ.
ಮುದ್ದಣ : (ಜೋರಾಗಿ ) 'ಭವತಿ ಭಿಕ್ಷಾಂ ದೇಹಿ ' ಎಂಬುದೇ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಸಪ್ತಾಕ್ಷರೀ ಮಂತ್ರವು . ಯಾರಲ್ಲಿಯೂ ಹೇಳಬೇಡ .
ಮನೋರಮೆ : (ಅರೆಮುನಿಸಿನಿಂದ ) ಹೋಗಲಿ ಬಿಡು ರಮಣ ! ನಿನ್ನ ಮಾತನ್ನು ಸಹಜ ನಿಶ್ಚಯ(ನಿಜ ) ವೆಂದೇ ತಿಳಿದೆನು . ಈ ರೀತಿಯ ಮಾಟದ ಮೋಸದ ನುಡಿಯ ಕೊಂಕು ಎಂಬುದನ್ನು ಅರಿಯದಾದೆನು . ನೀ ಕವಿಯೋ! ಹಾಸ್ಯಗಾರನೋ ! ನಿನ್ನ ಈ ಕಾವ್ಯದ ಸೊಬಗನ್ನು ನಮ್ಮಂತಹ ಜಾಣರಲ್ಲದವರು ಕೊಂಡಾಡುವರಲ್ಲದೆ ತಿಳಿದವರು ಒಪ್ಪುವರೇ ?
ಮುದ್ದಣ : ಸಾಕು ಈ ಪರಿಹಾಸವು . ಮುಂದಿನ ಕತೆಯನ್ನು ಕೇಳು .

**ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧.ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತು ?
ಉ: ರಾಘವನ ಯಜ್ಞಾಶ್ವ ಅರಣ್ಯಕನೆಂಬ ಮುನಿಯ ಪುಣ್ಯಾಶ್ರಮವನ್ನು ಹೊಕ್ಕಿತು .

೨.ಮನೋರಮೆಯಲ್ಲಿ ಮೂಡಿದ ಸಂದೇಹವೇನು ?
ಉ: ಅರಣ್ಯಕ ಋಷಿಯು ಶತ್ರುಘ್ನನ ಸಾವಿರ ಸಂಖ್ಯೆಯ ಸೈನಿಕರಿಗೆ ಯಥೇಚ್ಛ ಮೃಷ್ಟಾನ್ನ ಭೋಜನ ನೀಡಿ ಸತ್ಕರಿಸಲು ಸಾಧ್ಯವಾಯಿತೇ ? ಎನ್ನುವುದು ಮನೋರಮೆಯಲ್ಲಿ ಮೂಡಿದ ಸಂದೇಹ

೩.ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು ?
ಉ: ಬೇಡಿದ ದ್ರವ್ಯವನ್ನು ಕೂಡಲೇ ತಂದುಕೊಡುವ ಮಂತ್ರದ ಶಕ್ತಿ ಮುನಿಗಳಲ್ಲಿದೆ.

೪.ತಪಸ್ವಿಗಳಿಗೆ ಬೇರೆಗೊಡವೆ ಇಲ್ಲದಿರಲು ಕಾರಣವೇನು ?
ಉ: ತಪಸ್ವಿಗಳಿಗೆ ಅಷ್ಟೊಂದು ಜಪದ ಶಕ್ತಿಯ ನೆರವಿರುವುದರಿಂದ ಬೇರೆ ಗೊಡವೆ ಅವರಿಗಿರುವುದಿಲ್ಲ.

೫.ಮುದ್ದಣನಿಗೆ ಸಿದ್ಧಿಸಿದ ಮಂತ್ರದಹೆಸರೇನು ?
ಉ: 'ಭವತಿ ಭಿಕ್ಷಾಂದೇಹಿ ' ಎನ್ನುವುದು ಮುದ್ದಣನಿಗೆ ಸಿದ್ಧಿಸಿದ ಮಂತ್ರ

ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.
೧.ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಹೇಗೆ ಸತ್ಕರಿಸಿದ ?
ಉ: ಬಂದೊದಗಿದ ಚಳಿಗಾಲದಲ್ಲಿ ಶ್ರೀರಾಮನ (ರಾಘವನ ) ಯಜ್ಞದ ಕುದುರೆಯು ಅರಣ್ಯಕನೆಂಬ ಒಬ್ಬ ಋಷಿಯ ಆಶ್ರಮವನ್ನು ಪ್ರವೇಶಿಸಿದ್ದನ್ನು ನೋಡಿ ,ಶತ್ರುಘ್ನರಾದಿಯಾಗಿ ಎಲ್ಲರೂ (ಕುದುರೆಯ ಜೊತೆ ಬಂದಿದ್ದ ರಾಮನ ಸೈನ್ಯ ) ಮುನಿಯ ದರ್ಶನಕ್ಕೆಂದು ಆಶ್ರಮವನ್ನು ಪ್ರವೇಶಿಸಿ ಮುನಿಗೆ ನಮಸ್ಕರಿಸಿದರು. ಆಗ ಅರಣ್ಯಕನು ಆಭ್ಯಾಗತರನ್ನು ಗೌರವಿಸಿ , ಅವರೆಲ್ಲರನ್ನು ಯಥೇಚ್ಛ ಮೃಷ್ಟಾನ್ನ ಭೋಜನದಿಂದ ಆತಿಥ್ಯ ಕೊಟ್ಟು ಸತ್ಕರಿಸಿದನು.

೨.ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯೇನು ?
ಉ: ಕವಿಗಳಿಗೆ ಒಲಿದಿರುವ ಮಂತ್ರದ ಮಹಿಮೆಯ ಬಗ್ಗೆ ಮುದ್ದಣನು ಮನೋರಮೆಗೆ ವಿವರಿಸುತ್ತಾನೆ . ತಮ್ಮ ಒಂದು ನುಡಿಯ ಶಕ್ತಿಯಿಂದ ಮೂರು ಜಗವನ್ನು ನಾಶ ಮಾಡುವ ,ಹೊಗಳುವ ,ತೆಗಳುವ ,ಕೊಳ್ಳುವ ,ಆಳುವ , ಅನುಭವಿಸುವ ,ನಾಶಪಡಿಸುವ ,ಹೂಳುವ ,ಆಜ್ಞಾಪಿಸುವ ,ಬಾಳಿಸುವ (ಉಳಿಸುವ ) ಶಕ್ತಿ ಕವಿಗಳಿಗಿದೆ ಎಂದು ಮುದ್ದಣ ಹೇಳಿದ್ದಾನೆ.

೩.ಮುದ್ದಣನಿಗೆ ಒಲಿದ ಮಂತ್ರದ ಬಗ್ಗೆ ಮನೋರಮೆಯ ಪ್ರತಿಕ್ರಿಯೆ ಏನು ?
ಉ: ನಿನ್ನ ಮಾತನ್ನು ಸಹಜ ನಿಶ್ಚಯ(ನಿಜ ) ವೆಂದೇ ತಿಳಿದೆನು . ಈ ರೀತಿಯ ಮಾಟದ ಮೋಸದ ನುಡಿಯ ಕೊಂಕು ಎಂಬುದನ್ನು ಅರಿಯದಾದೆನು . ನೀ ಕವಿಯೋ! ಹಾಸ್ಯಗಾರನೋ ! ನಿನ್ನ ಈ ಕಾವ್ಯದ ಸೊಬಗನ್ನು ನಮ್ಮಂತಹ ಜಾಣರಲ್ಲದವರು ಕೊಂಡಾಡುವರಲ್ಲದೆ ತಿಳಿದವರು ಒಪ್ಪುವರೇ ? ಎಂದು ಮನೋರಮೆ ಪ್ರತಿಕ್ರಯಿಸಿದಳು.

ಐದು ಆರು ವಾಕ್ಯಗಳಲ್ಲಿ ಉತ್ತರಿಸಿ.
೧. ಮುದ್ದಣ ಪರಿಹಾಸ ಮಾಡಿದನೆಂದು ಮನೋರಮೆ ಹೇಳಲು ಕಾರಣವೇನು ?
ಅರಣ್ಯಕನು ಶತ್ರುಘ್ನ ನ ಸಾವಿರ ಸಂಖ್ಯೆಯ ಸೈನಿಕರಿಗೆ ಮೃಷ್ಟಾನ್ನ ಭೋಜನವನ್ನು ಇತ್ತು ಸತ್ಕರಿಸಿದ ಕತೆ ಕೇಳಿ ಆಶ್ಚರ್ಯ ಪಟ್ಟ ಮನೋರಮೆ ಒಬ್ಬ ಋಷಿಗೆ ಇದು ಹೇಗೆ ಸಾಧ್ಯವಾಯಿತು ಎಂದು ಮುದ್ದಣನಿಗೆ ಕೇಳಿದಾಗ ಇದಕ್ಕೆಲ್ಲ ಕಾರಣ ಅವರಿಗೆ ಒಲಿದಿರುವ ಮಂತ್ರಶಕ್ತಿ ಎಂದು ಮುದ್ದಣನು ಹೇಳಿದನು. ಏನೂ ಬೇಡದ ಋಷಿಗಳು ಅಂತಹ ಮಂತ್ರ ಸಿದ್ಧಿಯನ್ನು ಪಡೆದಿರುವಾಗ ನಿಮ್ಮಂತಹ ಸಂಸಾರಿಗರು ಯಾಕೆ ಮಂತ್ರದ ಉಪದೇಶ ಪಡೆಯಬಾರದು ಎಂದು ಮನೋರಮೆ ಪ್ರಶ್ನಿಸುವಳು. ಆಗ ಮುದ್ದಣನು ತಾವೂ ಅಂತಹ ಮಂತ್ರವನ್ನು ಸಿದ್ಧಿಸಿಕೊಂಡಿರುವುದಾಗಿ ,ಆ ಮಂತ್ರದ ಮಹಿಮೆಯಿಂದ ಜಗತ್ತನ್ನು ಸೃಷ್ಟಿಸಬಹುದು,ನಾಶ ಮಾಡಬಹುದು.ಹೊಗಳುವ ,ತೆಗಳುವ ,ಆದೇಶಿಸುವ ಎಲ್ಲ ಶಕ್ತಿಯೂ ಆ ಮಂತ್ರದಲ್ಲಡಗಿದೆ ಎಂದಾಗ ಮನೋರಮೆ ಯಾವುದು ಆಮಂತ್ರ ಎಂದು ಹೇಳುವಂತೆ ಒತ್ತಾಯಿಸುವಳು. ಆಗ ಮುದ್ದಣನು ಭವತಿ ಭಿಕ್ಷಾಂದೇಹಿ ಎಂಬುದೇ ಕವಿಗಳಿಗೆ ಒಲಿದಿರುವ ಮಂತ್ರ ಎಂದು ಉತ್ತರಿಸುವನು.ಆಗ ಮನೋರಮೆಯು ತನ್ನಂತಹವರು ನಿಮ್ಮ ಮಾತನ್ನು ಒಪ್ಪವರು.ಬಲ್ಲವರು ಒಪ್ಪುವರೇ ಈ ರೀತಿಯ ಪರಿಹಾಸ್ಯವನ್ನು ಎಂದು ಪ್ರತಿಕ್ರಯಿಸುವಳು.

೨. ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ ಹೆಂಡತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಉ: ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯೊಡನೆ ಬಂದ ಶತ್ರುಘ್ನರಾದಿಯಾಗಿ ಲೆಕ್ಕವಿಲ್ಲದಷ್ಟು ಸಂಖ್ಯೆಯ ಸೈನಿಕರಿಗೆ ಅರಣ್ಯಕನೆಂಬ ಋಷಿಯು ಮೃಷ್ಟಾನ್ನ ಭೋಜನ ನೀಡಿ ಸತ್ಕರಿಸಿದ ಸಂಗತಿಯು ಮನೋರಮೆಯಲ್ಲಿ ಆಶ್ಚರ್ಯವನ್ನುಂಟು

ಮಾಡುತ್ತದೆ. ಆಗ ಕತೆ ಹೇಳುತ್ತಿದ್ದ ಮುದ್ದಣನನ್ನು ತಡೆದ ಮನೋರಮೆ ಒಬ್ಬ ಋಷಿಗೆ ಇದು ಹೇಗೆ ಸಾಧ್ಯ ಎಂದು ಕೇಳುವಳು.ಅದಕ್ಕೆ ಮುದ್ದಣನು ಇದಕ್ಕೆ ಕಾರಣ ಅವರಿಗೆ ಸಿದ್ಧಿಸಿರುವ ಮಂತ್ರ ಶಕ್ತಿ ಎಂದು ವಿವರಿಸುವನು. ನೀವೂ ಅಂತಹ ಮಂತ್ರದ ಸಿದ್ಧಿ ಪಡೆದುಕೊಳ್ಳಿ ಎಂದು ಮನೋರಮೆ ಹೇಳಿದಾಗ ಮುದ್ದಣನು ಈಗಾಗಲೇ ಅಂತಹ ಮಂತ್ರ ಸಿದ್ಧಿ ಪಡೆದುಕೊಂಡಾಗಿದೆ.ನಮ್ಮಂತಹ ಕವಿಗಳಿಗೆ ಸಿದ್ಧಿಸಿರುವ ಈ ಮಂತ್ರದ ಮಹಿಮೆಯಿಂದಮೂರು ಜಗತ್ತನ್ನು ಕೊಳ್ಳುವ ,ನಾಶಪಡಿಸುವ ,ಹೊಗಳುವ , ಆದೇಶಿಸುವ ಎಲ್ಲಾ ಕಾರ್ಯ ಮಾಡಬಹುದು ಎಂದು ಮುದ್ದಣ ಕವಿಗಳಿಗೆ ಒಲಿದಿರುವ ಮಂತ್ರದ ಕುರಿತು ಮನೋರಮೆಯ ಕುತೂಹಲ ಕೆರಳುವಂತೆ ಮಾತನಾಡಿದಾಗ ಆ ಮಂತ್ರ ಯಾವುದು ಹೇಳು ಎಂದು ಮನೋರಮೆ ಕೇಳುತ್ತಾಳೆ. ಅವನು ನೀನು ಯಾರಿಗೂ ಹೇಳಬಾರದೆಂದು ಹೇಳುವನು.ಮನೋರಮೆ ಇನ್ನಷ್ಟು ಕುತೂಹಲ ಕೆರಳಿ ಹೇಳುವಂತೆ ಒತ್ತಾಯಿಸಿದಾಗ ಮುದ್ದಣನು ಭವತಿಭಿಕ್ಷಾಂದೇಹಿ ಎಂಬುದೇ ಕವಿಗಳಿಗೆ ಸಿದ್ಧಿಸಿದ ಮಂತ್ರ ಎಂದು ಹೇಳಿದಾಗ ಮನೋರಮೆ ಹುಸಿಮುನಿಸು ತೋರಿ ಬಲ್ಲವರು ನಿಮ್ಮ ಮಾತನ್ನು ಒಪ್ಪುವರೇ ಎನ್ನುವಳು.

ಸಂದರ್ಭಾನುಸಾರ ವಿವರಿಸಿ

೧.""ಎನಗಿದಚ್ಚರಿ ಎಂತುಟಾರ್ತಂ'’

ಉ: ಈ ಮೇಲಿನ ವಾಕ್ಯವನ್ನು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ "ಮುದ್ದಣ ಭಂಡಾರ' ಕೃತಿಯ "ತ್ರಯೋದಶಾಶ್ವಸಂ–ಅರಣ್ಯಕ ಮುನಿದರ್ಶನಂ' ಭಾಗದಿಂದ ಆರಿಸಲಾದ ಅಂತರಾಳ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಮನೋರಮೆ ಮುದ್ದಣನಿಗೆ ಹೇಳಿದಳು.

ಸಂದರ್ಭ :ಶ್ರೀರಾಮನ ಅಶ್ವಮೇಧದ ಕುದುರೆಯ ಜೊತೆ ಬಂದ ಶತ್ರುಘ್ನನಾದಿಯಾಗಿ ಸಾವಿರ ಸಂಖ್ಯೆಯ ಸೈನಿಕರು ಅರಣ್ಯಕ ಮುನಿಯ ಆಶ್ರಮವನ್ನು ಪ್ರವೇಶಿಸಿದಾಗ ಅವನು ಅವರನ್ನು ಆದರದಿಂದ ಮೃಷ್ಟನ್ನ ಭೋಜನ ನೀಡಿ ಸತ್ಕರಿಸಿದನು ಎಂದು ಮುದ್ದಣನು ಮನೋರಮೆಗೆ ಹೇಳಿದಾಗ ಮನೋರಮೆಯು ಮೇಲಿನಂತೆ ಕೇಳಿದಳು.

ಸ್ವಾರಸ್ಯ : ಒಬ್ಬ ಋಷಿಯು ಅಷ್ಟು ಪ್ರಮಾಣದಲ್ಲಿ ಸಾವಿರ ಸೈನಿಕರನ್ನು ಸತ್ಕರಿಸಲು ಹೇಗೆ ಸಾಧ್ಯವಾಯಿತು ಎಂಬುದು ಮನೋರಮೆಗೆ ಬಂದ ಸಂದೇಹವನ್ನು ಇಲ್ಲಿ ನೋಡಬಹುದು.

೨. " ಅಪ್ಪುದಪ್ಪುದು ತಪ್ಪೇಂ "

ಉ: ಈ ಮೇಲಿನ ವಾಕ್ಯವನ್ನು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ "ಮುದ್ದಣ ಭಂಡಾರ' ಕೃತಿಯ "ತ್ರಯೋದಶಾಶ್ವಸಂ–ಅರಣ್ಯಕ ಮುನಿದರ್ಶನಂ' ಭಾಗದಿಂದ ಆರಿಸಲಾದ ಅಂತರಾಳ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಮುದ್ದಣನು ಮನೋರಮೆಗೆ ಹೇಳಿದನು.

ಸಂದರ್ಭ : ಅರಣ್ಯಕ ಮುನಿಯು ಶತ್ರುಘ್ನನ ಸಾವಿರ ಸಂಖ್ಯೆಯ ಸೈನಿಕರನ್ನು ಮೃಷ್ಟಾನ್ನ ಭೋಜನ ನೀಡಿ ಸತ್ಕರಿಸಿದನು ಎಂದು ಮುದ್ದಣನು ಮನೋರಮೆಗೆ ಹೇಳಿದಾಗ ಮನೋರಮೆಯು ಒಬ್ಬ ಋಷಿಗೆ ಇದು ಹೇಗೆ ಸಾಧ್ಯವಾಯಿತು ಎಂದು ಆಶ್ಚರ್ಯ ವ್ಯಕ್ತಪಡಿಸುವಳು.ಆಗ ಮುದ್ದಣನು ಮುನಿಗಳಿಗೆ ಒಲಿದಿರುವ ಮಂತ್ರದ ಸಿದ್ಧಿಯೇನು ಕಡಿಮೆಯೇ ಎಂದು ಕೇಳುವನು.ಅದು ಯಾವ ಮಂತ್ರಗಳೆಂದು ಮನೋರಮೆ ಕೇಳಿದಾಗ ಅದಕ್ಕೆ ಮುದ್ದಣನು ಮಂತ್ರಗಳ ಕುರಿತು ವಿವರಿಸುವನುಆಗ ಮನೋರಮೆಯು ಈ ಎಲ್ಲ ಮಂತ್ರಗಳ ಮಹಿಮೆಯಿಂದ ಮುನಿಗಳಿಗೆ ಬೇರೆ ಯಾವುದರ ಗೊಡವೆ ಇಲ್ಲ ಎಂದು ಪ್ರತಿಕ್ರಿಯಿಸುವಳು.ಆಗ ಮುದ್ದಣನು ಮೇಲಿನಂತೆ ಕೇಳುವನು.

ಸ್ವಾರಸ್ಯ :ಮುನಿಗಳು ತಮ್ಮ ಮಂತ್ರದ ಸಿದ್ಧಿಯಿಂದ ಜೀವಿಸುವುದರಲ್ಲಿ ತಪ್ಪೇನೂ ಇಲ್ಲ ಎಂಬ ಮುದ್ದಣನ ಮನೋಭಾವನೆ ವ್ಯಕ್ತವಾಗಿದೆ.

೩. ಎಮ್ಮವರೊಂದಿರಕೆ ನಗುವ

ಉ: ಈ ಮೇಲಿನ ವಾಕ್ಯವನ್ನು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ "ಮುದ್ದಣ ಭಂಡಾರ' ಕೃತಿಯ "ತ್ರಯೋದಶಾಶ್ವಾಸಂ-ಅರಣ್ಯಕ ಮುನಿದರ್ಶನಂ' ಭಾಗದಿಂದ ಆರಿಸಲಾದ ಅಂತರಾಳ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಮುದ್ದಣನು ಮನೋರಮೆಗೆ ಹೇಳಿದನು.

ಸಂದರ್ಭ : ಋಷಿಗಳಿಗೆ ಕೇಳಿದ ಸಂಪತ್ತನ್ನು ಪಡೆಯುವ ಶಕ್ತಿ ಅವರಲ್ಲಿರುವ ಮಂತ್ರವಿದ್ಯೆಯಿಂದ ಲಭ್ಯವಾಗಿದೆ.ನೀನೂ ಸಹ ತಪಸ್ವಿಗಳ ಸಹಾಯದಿಂದ ಅಂತಹ ಮಂತ್ರಗಳ ಉಪದೇಶವನ್ನು ಪಡೆಯಬಾರದೇ ಎಂದು ಮನೋರಮೆ ಮುದ್ದಣನಿಗೆ ಸಲಹೆ ನೀಡಿದಾಗ ಮುದ್ದಣನು ಮನೋರಮೆಗೆ ಮೇಲಿನಂತೆ ಹೇಳಿದನು.

ಸ್ವಾರಸ್ಯ : ಮನೋರಮೆ ತನ್ನ ಪರಿಸ್ಥಿತಿಯನ್ನು ಅಪಹಾಸ್ಯ ಮಾಡುತ್ತಿರುವಳೇನೋ ಎಂಬ ಮುದ್ದಣನ ಸಂದೇಹ ಇಲ್ಲಿ ವ್ಯಕ್ತವಾಗಿದೆ

೪. " ಸಾಲ್ಗುಮೀ ಪರಿಹಾಸಂ "

ಉ: ಈ ಮೇಲಿನ ವಾಕ್ಯವನ್ನು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ "ಮುದ್ದಣ ಭಂಡಾರ' ಕೃತಿಯ "ತ್ರಯೋದಶಾಶ್ವಾಸಂ-ಅರಣ್ಯಕ ಮುನಿದರ್ಶನಂ' ಭಾಗದಿಂದ ಆರಿಸಲಾದ ಅಂತರಾಳ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಮುದ್ದಣನು ಮನೋರಮೆಗೆ ಹೇಳಿದನು.

ಸಂದರ್ಭ : ಅರಣ್ಯಕ ಋಷಿಯು ತನಗೆ ಸಿದ್ಧಿಸಿದ ಮಂತ್ರದ ಮಹಿಮೆಯಿಂದ ಶತ್ರುಘ್ನನ ಸಾವಿರ ಸಂಖ್ಯೆಯ ಸೈನಿಕರನ್ನು ಉಪಚರಿಸಿದ ವಿಚಾರ ತಿಳಿದ ಮನೋರಮೆಯು ಮುದ್ದಣನಿಗೆ ನೀವೂ ಅಂತಹ ಮಂತ್ರವನ್ನು ಸಿದ್ಧಿಸಿಕೊಳ್ಳಿ ಎಂದು ಸಲಹೆ ನೀಡುವಳು.ಮುದ್ದಣನು ತನಗೂ ಬಾಲ್ಯದಲ್ಲಿಯೇ ಗುರುವಿನಿಂದ ಮಂತ್ರದ ಉಪದೇಶವಾಗಿದೆ ಎಂದು ಹೇಳಿದಾಗ ಅದಾವ ಮಂತ್ರ ಎಂದು ಮನೋರಮೆ ಪ್ರಶ್ನಿಸುವಳು.ಭವತಿ ಭಿಕ್ಷಾಂದೇಹಿ ಎಂಬುದೇ ತಮ್ಮಂತಹ ಕವಿಗಳಿಗೆ ಸಿದ್ಧಿಸಿದ ಮಂತ್ರ ಎಂದು ಮುದ್ದಣನು ಹೇಳಿದಾಗ ಮನೋರಮೆಯು ಹುಸಿಮುನಿಸು ತೋರುವಳು. ಆಗ ಮುದ್ದಣ ಮೇಲಿನಂತೆ ಹೇಳುವನು.

ಸ್ವಾರಸ್ಯ : ಮುದ್ದಣನು ಮುಂದಿನ ಕತೆ ಹೇಳಲು ಅಣಿಯಾಗುವ ಅವನ ಮನೋಭಾವನೆ ಇಲ್ಲಿ ವ್ಯಕ್ತವಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂದದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ

೧. ಮೃಷ್ಟಾನ್ನ –ಸವರ್ಣದೀರ್ಘ ಸಂದಿ :; ಒಡನಿರ್ದು :<u>ಲೋಪಸಂಧಿ</u> ___

೨.ಕಾವ್ಯ :ಕಬ್ಬ : : ಆಶ್ಚರ್ಯ : _<u>ಅಚ್ಚರಿ</u>

೩. ಮನ್ನಿಸಿ : ಗೌರವಿಸಿ : :ಬಾವನ್ನ : <u>ಶ್ರೀಗಂಧ</u>

೪. ಕುವೆಂಪು :ಕುಪ್ಪಳಿ : : ಮುದ್ದಣ : <u>ನಂದಳಿಕೆ</u>

ಅಭ್ಯಾಸ ಚಟುವಟಿಕೆ

೧. ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ .

೧. ತತ್ಪುರುಷ ಸಮಾಸ ಎಂದರೇನು ?

ಉ: ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷಸಮಾಸ. ಉದಾ . ಬೆಟ್ಟದ +ತಾವರೆ –ಬೆಟ್ಟದಾವರೆ

ಹಗಲಿನಲ್ಲಿ + ಕನಸು – ಹಗಲುಗನಸು

೨. ಕರ್ಮಧಾರಯ ಸಮಾಸದ ವಿಧಗಳಾವುವು ?

ಉ: ಪೂರ್ವೋತ್ತರ ಪದಗಳು ಲಿಂಗ ,ವಚನ ,ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ –ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರಯ ಸಮಾಸ .

ಉದಾ : ಹಿರಿದು+ಮರ =ಹಿರಿದು ಮರ

ದಿವ್ಯವಾದ +ಪ್ರಕಾಶ =ದಿವ್ಯಪ್ರಕಾಶ

೩. ದ್ವಿಗು ಸಮಾಸ ಎಂದರೇನು ? ಉದಾಹರಣೆ ಕೊಡಿ .

ಉ: ಪೂರ್ವಪದ ಸಂಖ್ಯಾವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ

ಉದಾ : ಮೂರು+ಮಡಿ =ಮುಮ್ಮಡಿ

ನಾಲ್ಕು +ದೆಸೆ =ನಾಲ್ದೆಸೆ

ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹಿಸಿ ಸಮಾಸ ಹೆಸರಿಸಿ.

ಚಳಿಯ +ಕಾಲ = ಚಳಿಗಾಲ =ತತ್ಪುರುಷ ಸಮಾಸ

ಯಜ್ಞದ +ತುರಗ =ಯಜ್ಞತುರಗ = ತತ್ಪುರುಷ ಸಮಾಸ

ಬಾಯಿಯ +ಉಪಚಾರ =ಬಾಯುಪಚಾರ = ತತ್ಪುರುಷ ಸಮಾಸ

ಸವಿಯಾದ +ಕೂಳು =ಸವಿಗೂಳು =ಕರ್ಮಧಾರಯಸಮಾಸ

ಮೃಷ್ಟಾನ್ನ =ಮೃಷ್ಟವಾದ +ಅನ್ನ = ಕರ್ಮಧಾರಯಸಮಾಸ


ಏಕ+ಅಕ್ಷರಿ =ಏಕಾಕ್ಷರಿ = ದ್ವಿಗುಸಮಾಸ

ಮೂರು+ಜಗ =ಮೂಜಗ = ದ್ವಿಗುಸಮಾಸ

ಸಪ್ತ+ಅಕ್ಷರೀ =ಸಪ್ತಾಕ್ಷರೀ =ದ್ವಿಗುಸಮಾಸ

## ಪದ್ಯ - ೧ ಕನ್ನಡಿಗರ ತಾಯಿ - ಎಂ ಗೋವಿಂದ ಪೈ

### ಕೃತಿಕಾರರ ಪರಿಚಯ



ರಾಷ್ಟ್ರಕವಿ ಎಂ ಗೋವಿಂದ ಪೈ ಯವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ೨೩/೩/೧೮೮೩ ರಲ್ಲಿ ಜನಿಸಿದರು. ಇವರ ಮೊದಲ ಕವಿತೆ ೧೯೦೦ ರಲ್ಲಿ ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟವಾಯಿತು. ಗಿಳಿವಿಂಡು ,ನಂದಾದೀಪ ಮೊದಲಾದವು ಇವರ ಕವನ ಸಂಕಲನಗಳು . ವೈಶಾಖ ಮತ್ತು ಗೊಲ್ಗೊಥಾ ಎನ್ನುವುದು ಇವರು ಬರೆದ ಖಂಡ ಕಾವ್ಯವಾಗಿದೆ.ಇವರು ಚಿತ್ರಭಾನು ,ಹೆಬ್ಬೆರಳು ,ಪಾರ್ಶ್ವನಾಥ ತೀರ್ಥಂಕರ ಚರಿತೆ ,ಬಾಹುಬಲಿ,ಗೊಮ್ಮಟೇಶ್ವರ ಚರಿತೆ ,ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ಬರೆದಿದ್ದಾರೆ.

ಪ್ರಸ್ತುತ ಪದ್ಯಭಾಗವನ್ನು ಎನ್ ಎಸ್ ರಘುನಾಥರವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆರಿಸಿ ನಿಗದಿ ಪಡಿಸಿದೆ.

**ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ .**

೧. ನಮ್ಮನ್ನು ಆಳುವವರು ಯಾರು ?

ಉ: ಕನ್ನಡಿಗರ ತಾಯಿ ನಮ್ಮನ್ನು ಆಳುವವಳು.

೨. ಲತೆ ಯಾವುದನ್ನೆಲ್ಲ ನೀಡುತ್ತದೆ ?

ಉ: ಲತೆ ಪತ್ರ ಪುಷ್ಪಗಳನ್ನು ನೀಡುತ್ತದ.

೩. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?

ಉ: ಕನ್ನಡ ತಾಯಿಯ ಬಸಿರ ಹೊನ್ನಗನಿ ವಿದ್ಯಾರಣ್ಯರು .

೪. ಕನ್ನಡ ತಾಯಿಯ ಹಾಡನ್ನು ಯಾವುದರಿಂದ ಉಕ್ಕಿಸಬೇಕು ?

ಉ: ಹೊಸ ಕಿನ್ನರಿಯಲ್ಲಿ ಕನ್ನಡ ತಾಯಿಯ ಹಳೆಯ ಹಾಡನ್ನು ಉಕ್ಕಿಸಬೇಕು.

೫. ಕನ್ನಡಿಗರ ಪಾಡು ಏನು ?

ಉ: ತನ್ನ ಮರೆಯ ಕಂಪನರಿಯದೆ ಅದನ್ನೇ ಹೊರಗೆ ಹುಡುಕುವ ಮೃಗದ ಸೇಡು ಕನ್ನಡಿಗರ ಪಾಡು .

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ಕನ್ನಡ ನಾಡಿನ ಪ್ರಕೃತಿ ವೈಶಿಷ್ಟ್ಯವೇನು ?

ಉ: ಕನ್ನಡ ನಾಡಿನಲ್ಲಿ ವಿವಿಧ ಜಾತಿಯ ಹಣ್ಣು ಕಾಯಿಗಳನ್ನು ನೀಡುವ ಬೇರೆ ಬೇರೆ ಜಾತಿಯ ಮರಗಳಿವೆ. ಪತ್ರ ಪುಷ್ಪಗಳನ್ನು ನೀಡುವ ಬಳ್ಳಿಗಳಿವೆ. ವಿವಿಧ ರೀತಿಯ ಧಾನ್ಯಗಳನ್ನು ಇಲ್ಲಿ ಬೆಳೆಯಲಾಗುವುದು. ಪಕ್ಷಿ ಪ್ರಾಣಿಗಳಿಗೆ ಆಸರೆ ನೀಡಿದ ಅರಣ್ಯ ಸಂಪತ್ತು ಇಲ್ಲಿದೆ. ವಿವಿಧ ನದಿಗಳು ಇಲ್ಲಿ ಹರಿದಿವೆ. ವಿವಿಧ ಪ್ರಸಿದ್ಧ ನಗರಗಳಿವೆ. ಇಲ್ಲಿಲ್ಲದಿರುವುದೂ ಏನೂ ಇಲ್ಲ. ಜೇನು ಸುರಿವ ಹಾಲು ಹರಿವ ಸ್ವರ್ಗವೇ ಭೂಮಿಗಿಳಿದಂತೆ ಭಾಸವಾಗುತ್ತಿದೆ.

೨. ಕನ್ನಡದ ಕವಿ ಶ್ರೇಷ್ಠರ ಹಿರಿಮೆ ಏನು ?

ಉ : ಜೈನ ದಿಗಂಬರ ಪಂಥಕ್ಕೆ ಸೇರಿದ ಕೊಂಡಕುಂದಾಚಾರ್ಯರೂ ,ಧರ್ಮ ಪರಿಪಾಲಕರೂ ,ಪುನರುಜ್ಜೀವನಕ್ಕೆ ಕಾರಣರಾದ ಮಧ್ವಾಚಾರ್ಯರೂ ,ಬಸವೇಶ್ವರರರೂ ಮೊದಲಾದವರು ಕನ್ನಡ ನಾಡಿನವರು. ಕವಿರಾಜಮಾರ್ಗವನ್ನು ಬರೆದ ನೃಪತುಂಗ ,ಆದಿಕವಿ ಪಂಪ ,ಕವಿಚಕ್ರವರ್ತಿ ,ರನ್ನ ,ಲಕ್ಷ್ಮೀಶ, ಜನ್ನ ,ಷಡಕ್ಷರದೇವ ,ಮುದ್ದಣ ಮೊದಲಾದ ಶ್ರೇಷ್ಠಕವಿಗಳು ಕನ್ನಡ

ನಾಡಿಗೆ ಸಾಹಿತ್ಯದ ಸೊಬಗು ಉಣಬಡಿಸಿದವರು. ಕರ್ನಾಟಕ ಸಂಗೀತದ ಪಿತಾಮಹರೆನಿಸಿದ ಪುರಂದರದಾಸರು ಇಲ್ಲಿಯವರು. ಕನ್ನಡ ತಾಯಿಯ ಮಡಿಲು ವಿದ್ಯಾರಣ್ಯರಿಗೆ ಜನ್ಮವಿತ್ತ ಹೊನ್ನಿನ ಗಣಿಯಾಗಿದೆ.

೩. ಕವಿ ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಆಶಿಸುತ್ತಾರೆ ?

ಉ: ತನ್ನ ಮರೆಯ ಕಂಪನ್ನು ಅರಿಯದೆ ಹೊರಗೆ ಹುಡುಕುವ ಕಸ್ತೂರಿ ಮೃಗದಂತೆ ನಾವು ಕನ್ನಡಿಗರು ಕನ್ನಡದ ಕಂಪನ್ನು ಅರಿಯದೆ ಇನ್ನೆಲ್ಲೋ ಅದರ ಸೊಬಗನ್ನು ಬೇರೆ ಭಾಷೆಯಲ್ಲಿ ಹುಡುಕುತ್ತಿದ್ದೇವೆ. ನಮ್ಮ ಭಾಷಾ ಸಂಪತ್ತನ್ನು ಬೆಳೆಸಿ ಅದರ ಸುಗಂಧವನ್ನು ಹರಡುವಂತೆ ಮಾಡಬೇಕು. ನವಶಕ್ತಿಯಿಂದ ಹೊಸ ಪರಿಮಳವ ,ಸಂತಸದಿಂದ ಕನ್ನಡ ಕಸ್ತೂರಿಯ ಪರಿಮಳವನ್ನು ಜಗತ್ತಿನಾದ್ಯಂತ ಹರಡಬೇಕು. ಎಲ್ಲರ ಬಾಯಲ್ಲಿ ಕನ್ನಡ ನೆಲೆಸುವಂತೆ ಆಗಬೇಕು. ಒಡೆದು ಹೋಗಿರುವ ಕನ್ನಡಿಗರ ಮನಸ್ಸು ಒಂದಾಗಿ ಕನ್ನಡದ ಕೀರ್ತಿಯನ್ನು ಎಲ್ಲರೂ ಎಲ್ಲ ಕಡೆ  ಹರಡಿಸುವಂತಾಗಲಿ ಎಂದು ಕವಿ ಆಶಿಸುತ್ತಾರೆ.

೪/೫ ವಾಕ್ಯಗಳಲ್ಲಿ ಉತ್ತರಿಸಿ .

೧. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ ಏಕೆ ?

ಉ : ಕನ್ನಡ ತಾಯಿಯು ನಮ್ಮೆಲ್ಲರ ತಾಯಿ . ಅವಳು ನಮ್ಮನ್ನು ಹರಸುವವಳು, ಕಾಯುವವಳು, ನಮಗೆ ಜನ್ಮ ನೀಡಿದವಳು. ನಮ್ಮ ತಪ್ಪುಗಳನ್ನು ಸಹಿಸುವವಳು, ತಿದ್ದುವವಳು, ಅಕ್ಕರೆಯಿಂದ ನಮ್ಮನ್ನು ಆಳುವವಳು. ಅವಳು ನಮ್ಮ ಬದುಕು . ಅವಳೇ ನಮ್ಮ ಸರ್ವಸ್ವ. ನಮ್ಮ ತನು ಮನ ನುಡಿಯಲ್ಲಿ ನೆಲೆಸುವವಳು. ಆದ್ದರಿಂದ ಅವಳನ್ನು ಮರೆಯಲು ಸಾಧ್ಯವಿಲ್ಲ.

೨. ಕವಿ ಕನ್ನಡ ತಾಯಿಯಲ್ಲಿ ಏನೆಂದು ಕೋರುತ್ತಾರೆ ?

ಉ : ತನ್ನೊಳಗೇ ಅಡಗಿರುವ ಪರಿಮಳವನ್ನು ಕಸ್ತೂರಿ ಮೃಗವು ಬೇರೆಲ್ಲೋ ಹುಡುಕುವಂತೆ ನಮ್ಮ ಕನ್ನಡಿಗರೂ ಒಳಗೇ ಹುದುಗಿರುವ ಕನ್ನಡದ ಸೊಬಗು ಅರಿಯದೇ ಬೇರೆಡೆಗೆ ಹುಡುಕುತ್ತಿದ್ದಾರೆ. . ಕನ್ನಡದ ಸೊಬಗು ಅರಿಯದೇ ಬೇರೆ ಭಾಷೆಗಳ ಕಡೆಗೆ ಕನ್ನಡಿಗರು ಒಲವು ತೋರಿಸುತ್ತಿದ್ದಾರೆ. ಕನ್ನಡವೇ ಕಸ್ತೂರಿ .ಅದನ್ನು ತೀಡಿದಾಗ ಪರಿಮಳವು ಹೊರಸೂಸುವುದು. ಅಂದರೆ ಕನ್ನಡಿಗರು ಕನ್ನಡ ಭಾಷೆಯನ್ನು ಬಳಸಬೇಕು. ಬೆಳೆಸಬೇಕು. ನಮ್ಮಲ್ಲಿರುವ ಕನ್ನಡ ಭಾಷೆಯ ಪರಿಮಳವನ್ನು ತಾಯಿಯು ನವಶಕ್ತಿಯಿಂದ ಬಡಿದೆಬ್ಬಿಸಬೇಕಿದೆ. ಹೊಸ ಪರಿಮಳದಿಂದ ಜಗದಿ ಕನ್ನಡದ ಹೆಸರನ್ನು ಹಬ್ಬಿಸಬೇಕಿದೆ. ತಾಯಿಯು ಎಲ್ಲರ ಬಾಯಲ್ಲಿ ನೆಲೆಸುವಂತೆ ಆಗಬೇಕು. ನಮ್ಮ ಒಡೆದು ಹೋಗಿರುವ ಮನಸ್ಸುಗಳು ಒಂದುಗೂಡಬೇಕಿದೆ. ತಾಯಿಯು ಇದನ್ನು ನೆರವೇರಿಸಲಿ ಅವಳ ಕೀರ್ತಿ ಜಗತ್ತಿನಾದ್ಯಂತ ಹಬ್ಬುವಂತಾಗಲಿ ಎಂದು ಕವಿ ಕನ್ನಡ ತಾಯಿಯಲ್ಲಿ ಕೋರಿದ್ದಾರೆ.

೩. ಗೋವಿಂದ ಪೈಯವರ ಪ್ರಮುಖ ಕೃತಿಗಳು ಯಾವುವು ?

ಉ: ಗಿಳಿವಿಂಡು , ಚಿತ್ರಭಾನು ,ನಂದಾದೀಪ ಮೊದಲಾದವು ಗೋವಿಂದ ಪೈಯವರು ಬರೆದ ಕವನ ಸಂಕಲನಗಳು. ವೈಶಾಖ ಮತ್ತು ಗೊಲ್ಗೊಥಾ ಖಂಡಕಾವ್ಯ . ಹೆಬ್ಬೆರಳು ,ಪಾರ್ಶ್ವನಾಥ ತೀರ್ಥಂಕರ ಚರಿತೆ , ಬಾಹುಬಲಿ ,ಗೊಮ್ಮಟೇಶ್ವರ ಚರಿತೆ ,ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ಗೋವಿಂದ ಪೈಯವರು ಬರೆದಿದ್ದಾರೆ.

ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ .

೧. ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಕವಿ ಏಕೆ ಬಯಸುತ್ತಾರೆ ?

ಉ: ಕನ್ನಡಿಗರ ತಾಯಿ ಕವನವು ಕರ್ನಾಟಕದ ಏಕೀಕರಣದ ಪೂರ್ವದಲ್ಲಿ ಕನ್ನಡ ತಾಯಿಯನ್ನು ಸ್ತುತಿಸಿ ಬರೆದ ಕವನ .ಕನ್ನಡ ತಾಯಿ ತನ್ನ ಮುಖವನ್ನು ತೋರುವ ಮೂಲಕ ಕನ್ನಡದ ಮಕ್ಕಳನ್ನು ಒಂದಾಗಿಸಬೇಕು ಎನ್ನುವುದು ಪದ್ಯದ ಮುಖ್ಯ ಆಶಯ . ಕನ್ನಡ ನಾಡಿನಲ್ಲಿ ಎಲ್ಲಾ ಸಂಪತ್ತೂ ಇದೆ. ತಾಯಿಯ ಮುಖ ಕಂಡಾಗ ಅದೆಲ್ಲವೂ ಗೋಚರವಾಗುತ್ತದೆ. ಹೀಗೆ

ಗೋಚರಿಸಿದಾಗ ಮಾತ್ರ ಕನ್ನಡ ತಾಯಿಯ ಕೀರ್ತಿ ಜಗತ್ತಿನಾದ್ಯಂತ ಪಸರಿಸಲು ಸಾಧ್ಯ .ಅದಕ್ಕಾಗಿ ಕನ್ನಡ ತಾಯಿ ಎಲ್ಲರ ನಡೆ-ನುಡಿ , ಆಚಾರ -ವಿಚಾರಗಳಲ್ಲಿ ನೆಲೆಲಯಾಗಬೇಕು. ಕನ್ನಡ ತಾಯಿ ಜನ್ಮದಾತೆಗೆ ಸಮನಾಗಿರುವುದರಿಂದ ಅವಳ ಹರಕೆ -ಹಾರೈಕೆ ನಮಗೆ ಶ್ರೀ ರಕ್ಷೆ . ಕನ್ನಡಿಗರಿಗೆ ಕನ್ನಡವೇ ಉಸಿರು . ಕನ್ನಡಿಗರ ಧಮನಿಧಮನಿಗಳಲ್ಲಿಯೂ ಕನ್ನಡವೇ ಉಸಿರಾಗಬೇಕು. ಕನ್ನಡ ನಾಡು ನುಡಿಯ ಶ್ರೇಷ್ಠತೆ ,ಭವ್ಯಪರಂಪರೆ ,ಇತಿಹಾಸ ,ಪ್ರಾಕೃತಿಕ ,ಸಾಹಿತ್ಯಕ ,ವಾಸ್ತುಶಿಲ್ಪಗಳ ಭವ್ಯತೆಯಿಂದ ಜಗತ್ತಿನೆಲ್ಲೆಡೆ ಹರಡಬೇಕು . ಇದನ್ನು ನೆರವೇರಿಸಲು ಕನ್ನಡಿಗರ ತಾಯಿಯ ಆಗಮನದಿಂದಾಗಿ ಅವಳು ಮೊಗ ತೋರಬೇಕೆಂದು ಕವಿ ಅಪೇಕ್ಷಿಸಿದ್ದಾರೆ.

ಸಂದರ್ಭಾನುಸಾರ ಸ್ವಾರಸ್ಯ ವಿವರಿಸಿ.

೧. " ಖಗ ಮೃಗೋರಗಾಳಿಯೋ "

ಉ : ಈ ಮೇಲಿನ ವಾಕ್ಯವನ್ನು ಎನ್ ಎಸ್ ರಘುನಾಥರವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆರಿಸಿದೆ. ಈ ಪದ್ಯಭಾಗದ ಕವಿ ಗೋವಿಂದ ಪೈರವರು.

ಸಂದರ್ಭ : ಕನ್ನಡ ನಾಡು ಪ್ರಕೃತಿ ಸೊಬಗಿನ ನಾಡು . ಇಲ್ಲಿ ಬೇರೆ ಬೇರೆ ಜಾತಿಯ ಮರಗಳಿವೆ. ವಿವಿಧ ಹೂ ಹಣ್ಣುಗಳನ್ನು ನೀಡುವ ಮರಗಳು , ಲತೆಗಳು ಪತ್ರ ಪುಷ್ಪಗಳಿಂದ ಕಂಗೊಳಿಸುತ್ತಿವೆ. ಪರಿಶುದ್ಧ ಗಾಳಿಯಿದೆ. ಖಗ , ಮೃಗ , ಉರಗಗಳು ವಾಸಿಸುವ ಅರಣ್ಯಸಂಪತ್ತಿನಿಂದ ಕನ್ನಡ ನಾಡು ಸುಂದರವಾಗಿದೆ ಎಂದು ಕವಿ ಕನ್ನಡ ನಾಡನ್ನು ವರ್ಣಿಸಿದ್ದಾರೆ.

ಸ್ವಾರಸ್ಯ : ಕನ್ನಡ ನಾಡಿನ ಪ್ರಕೃತಿ ಸಂಪತ್ತಿನ ವಿಶೇಷತೆ ಇಲ್ಲಿ ವ್ಯಕ್ತವಾಗಿದೆ.

೨. " ನಿನ್ನ ಕಲ್ಲೆ ನುಡಿವುದಲ್ಲ ."

ಉ : ಈ ಮೇಲಿನ ವಾಕ್ಯವನ್ನು ಎನ್ . ಎಸ್. ರಘುನಾಥರವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆರಿಸಿದೆ. ಈ ಪದ್ಯಭಾಗದ ಕವಿ ಗೋವಿಂದ ಪೈಯವರು.

ಸಂದರ್ಭ : ಕನ್ನಡ ನಾಡು ಶಿಲ್ಪಕಲೆಗಳ ಬೀಡು .ಹಳೆಬೀಡು ,ಬೇಲೂರು ಸುಂದರವಾದ ಕೆತ್ತನೆಗಳಿಂದ ಕೂಡಿವೆ. ಕಾರ್ಕಳದಲ್ಲಿ ನಿಶ್ಚಲತೆ , ನಿರ್ಲಿಪ್ತತೆ ,ಸ್ಥಿತಪ್ರಜ್ಞತೆಗೆ ಸಾಕ್ಷಿಯಾದ ಗೊಮ್ಮಟೇಶ್ವರನ ವಿಗ್ರಹವಿದೆ. ಇಲ್ಲಿಲ್ಲದ ಶಿಲ್ಪವಿಲ್ಲ. ಇಲ್ಲಿನ ಪ್ರತೀ ಕಲ್ಲು ಕನ್ನಡ ನಾಡಿನ ಇತಿಹಾಸವನ್ನು ವಿವರಿಸುವುದು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಕನ್ನಡ ನಾಡಿನ ಉದ್ದಗಲಕ್ಕೂ ಇರುವ ಶಿಲ್ಪಕಲೆಯ ವೈಭವವು ಇಲ್ಲಿ ವ್ಯಕ್ತವಾಗಿದೆ.

೩. " ನಮ್ಮ ಮನಮನೊಂದೆ ಕಲಸು. "

ಉ : ಈ ಮೇಲಿನ ವಾಕ್ಯವನ್ನು ಎನ್ . ಎಸ್. ರಘುನಾಥರವರು ಸಂಪಾದಿಸಿರುವ ಶತಮಾನದ ಮಕ್ಕಳ ಸಾಹಿತ್ಯ ಸಂಕಲನದಿಂದ ಆರಿಸಿದೆ. ಈ ಪದ್ಯಭಾಗದ ಕವಿ ಗೋವಿಂದ ಪೈಯವರು.

ಸಂದರ್ಭ : ಕನ್ನಡಿಗರ ಪರಿಸ್ಥಿತಿಯು ಕಸ್ತೂರಿ ಮೃಗದಂತಾಗಿದೆ. ಕಸ್ತೂರಿ ಮೃಗಕ್ಕೆ ತನ್ನಲ್ಲಿಯೇ ಪರಿಮಳವಿರುವುದು ಗೊತ್ತಾಗದೇ ಬೇರೆಡೆಗೆ ಹುಡುಕುವಂತೆ ಕನ್ನಡಿಗರು ತಮ್ಮಲ್ಲಿಯೇ ಇರುವ ಕನ್ನಡದ ಸೊಗಡು ಅರಿಯದೇ ಪರಭಾಷಾ ವ್ಯಾಮೋಹಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಕನ್ನಡದ ಸೊಬಗು ಅರಿಯುವ ,ಕನ್ನಡ ಉಳಿಸುವ ಶಕ್ತಿ ಕನ್ನಡಿಗರಿಗೆ ದೊರೆಯುವಂತಾಗಲು ಅವರ ಮನವನ್ನು ಒಂದುಗೂಡಿಸಬೇಕಾದ ಅವಶ್ಯಕತೆ ಇದೆ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಕನ್ನಡಿಗರು ಒಂದಾಗಿ ಕನ್ನಡ ಭಾಷೆಯನ್ನು ,ನಾಡನ್ನು ಉಳಿಸಬೇಕಾದ ಅಗತ್ಯದ ಕುರಿತು ಕವಿ ಹೇಳಿದ್ದಾರೆ.

ಹೊಂದಿಸಿ ಬರೆಯಿರಿ.

೧. ಬೇಲನಾಡು - ಬೇಲೂರು

೨. ಶರ್ವ - ನೃಪತುಂಗ

**೩. ಗೊಲ್ಗೊಥಾ - ಖಂಡಕಾವ್ಯ**

**೪. ಗಿಳಿವಿಂಡು -ಕವನಸಂಕಲನ**

**ಬಿಟ್ಟ ಸ್ಥಳ ತುಂಬಿರಿ.**

**೧. ಹರಸು ತಾಯಿ ----- ಕಾಯಿ (ಸುತರ )**

**೨. ಹಾಲು ಹರಿವ ---- ಭೂಮಿಗಿಳಿದುದೆ (ದಿವಂ)**

**೩. ಜೈನರಾದ ಪೂಜ್ಯಪಾದ ---- (ಕೊಂಡಕುಂದವರ್ಯರ )**

**೪. ------ ಸೇಡು ನಮ್ಮ ಪಾಡು (ಮೃಗದ )**

mamatabhagwat1@gmail.com ಮಮತಾ ಭಾಗ್ವತ ಸಹಶಿಕ್ಷಕಿ ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು

# ಪದ್ಯ -೨ ಸಣ್ಣ ಸಂಗತಿ - ಕೆ.ಎಸ್. ನರಸಿಂಹಸ್ವಾಮಿ

## ಕೃತಿಕಾರರ ಪರಿಚಯ



ಕೆ.ಎಸ್. ನರಸಿಂಹಸ್ವಾಮಿಯವರು ೨೬/೦೧/೧೯೧೫ ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. ಇವರು ಶಿಲಾಲತೆ, ನವಪಲ್ಲವ ,ಇರುವಂತಿಗೆ, ದೀಪದಮಲ್ಲಿ, ಮನೆಯಿಂದ ಮನೆಗೆ ,ತೆರೆದ ಬಾಗಿಲು ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ೧೯೭೭ ರಲ್ಲಿ ಇವರ ತೆರೆದ ಬಾಗಿಲು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ಇವರ ದುಂಡುಮಲ್ಲಿಗೆ ಕವನಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ಲಭಿಸಿದೆ. ಇವರು ೨೦೦೪ರಲ್ಲಿ ಮರಣಹೊಂದಿದರು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇವರನ್ನು ಪ್ರೇಮಕವಿ ಎಂದೇ ಗುರುತಿಸುತ್ತಾರೆ.

ಪ್ರಸ್ತುತ ಪದ್ಯಭಾಗವನ್ನು ಇವರ ' ಇರುವಂತಿಗೆ ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ .**

೧. ಹುಣ್ಣಿಮೆಯ ಕಣ್ಣು ಎಲ್ಲಿ ತೆರೆದಿದೆ ?

ಉ: ನಟ್ಟಿರುಳ ಕರಿಮುಗಿಲ ನೀರ್ ತುಂಬಿಗಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿದೆ.

೨. ಪುಟ್ಟ ಮಗುವು ತೊಟ್ಟಿಲಲ್ಲಿ ಹೇಗೆ ಮಲಗಿದೆ. ?

ಉ: ಪುಟ್ಟ ಮಗುವು ತೊಟ್ಟಿಲಲ್ಲಿ ಕಣ್ಣನ್ನು ಅರ್ಧ ಮುಚ್ಚಿ ಬರಿ ಮೈಯಲ್ಲಿ ಮಲಗಿದೆ.

೩. ಮೂಲೆಯಲ್ಲಿ ಇರುವುದೇನು ?

ಉ: ಮೂಲೆಯಲ್ಲಿ ಸಣ್ಣಗಿನ ದೀಪವಿದೆ.

೪. ನಿದ್ದೆ ಎಚ್ಚರಗಳಲ್ಲಿ ಯಾವ ಕೈ ದುಡಿಯುತ್ತಿದೆ ?

ಉ: ನಿದ್ದೆ ಎಚ್ಚರಗಳಲ್ಲಿ ಪೊರೆವ ಕೈ ದುಡಿಯುತಿದೆ.

೫. ಯಾವುದನ್ನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ ?

ಉ: ನಿದ್ದೆ ಎಚ್ಚರಗಳಲ್ಲಿ ಪೊರೆವ ಕೈ ದುಡಿಯುವುದನ್ನು ಲೆಕ್ಕಿಸದೆ ಮಗು ಹೊದಿಕೆಯನ್ನು ಒದೆಯುತಿದೆ.

**ಎರಡು - ಮೂರು ವಾಕ್ಯಗಳಲ್ಲಿ ಉತ್ತರಿಸಿ .**

೧. ತಾಯಿ ತನ್ನ ಮಗುವಿನ ಆರೈಕೆಯನ್ನು ಹೇಗೆ ಮಾಡುತ್ತಾಳೆ ವಿವರಿಸಿ.

ಉ: ಸುರಿಯುತ್ತಿರುವ ಮಳೆ ನಿಂತು ಆಕಾಶ ಶುಭ್ರವಾಗಿ ಚಂದ್ರನು ಉದಯಿಸಿದ ಸಂದರ್ಭದಲ್ಲಿ ಕೋಣೆಯಲ್ಲಿ ಮಂಚದ ಮೇಲೆ ತಾಯಿಯು ಮಲಗಿದ್ದಾಳೆ. ಅಲ್ಲಿ ಪಕ್ಕದ ತೊಟ್ಟಿಲಲ್ಲಿ ಮಗುವು ಕಣ್ಣನ್ನು ಅರ್ಧ ಮುಚ್ಚಿ ಬರಿ ಮೈಯಲ್ಲಿ ಮಲಗಿದೆ. ಆಗ ತಾಯಿಯು ನಿದ್ದೆಗಣ್ಣಿನಲ್ಲಿದ್ದರೂ ಕೈ ನೀಡಿ ಮಗುವಿಗೆ ಹೊದಿಕೆಯನ್ನು ಸರಿಪಡಿಸುವಳು. ಮಗು ಅಪ್ರಯತ್ನಪೂರ್ವಕವಾಗಿ ಹೊದಿಕೆಯನ್ನು ಕಿತ್ತೆಸೆದು ಪುನಃ ಬರಿ ಮೈಯಲ್ಲಿ ಮಲಗಿದಾಗ ತಾಯಿಯು ಮತ್ತೆ ಮತ್ತೆ ಹೊದಿಕೆಯನ್ನು ಹೊದಿಸಿ ತನ್ನ ಮಗುವಿನ ಆರೈಕೆಯನ್ನು ಮಾಡುವಳು ಎಂದು ಕವಿ ವರ್ಣಿಸಿದ್ದಾರೆ.

೨. ಕವಿ ಯಾವ ಸಣ್ಣ ಸಂಗತಿಯನ್ನು ಈ ಕವನದಲ್ಲಿ ವಿವರಿಸಿದ್ದಾರೆ ?

ಉ: ಕವಿ ವಿವರಿಸುವ ಸಣ್ಣ ಸಂಗತಿಯು ವಾಸ್ತವವವಾಗಿ ಸದಾ ಕಾಲ ಕಾಪಾಡುವ ಕರುಣೆಯೊಂದರ ಸಂಕೇತವಾಗಿದೆ. ಹಗಲಿರುಳೆನ್ನದೆ ಸದಾ ತನ್ನ ಮಗುವಿನ ಆರೈಕೆಯಲ್ಲಿ ತನ್ನ ತಾಯ್ತನದ ಸಾರ್ಥಕ್ಯ ಪಡೆಯುವ ತಾಯಿಯ ಹೃದಯದ ತುಡಿತ -ಮಿಡಿತಗಳ ಗಹನವಾದ ತತ್ವದ ಸಂಕೇತವಾಗಿದೆ. ಇದು ಮನುಷ್ಯ ಮತ್ತು ಪ್ರಕೃತಿಗಿರುವ ಸಂಬಂಧವಿರಬಹುದೇ ? ಇದು ಇಡೀ ಜೀವ ಸಂಕುಲವನ್ನು ಕಾಪಿಡುವ ತಾಯಿ ಪ್ರಜ್ಞೆಯಿರಬಹುದೇ ಅದು ಸಣ್ಣ ಸಂಗತಿಯೆನ್ನಬಹುದೇ ?ಅಲ್ಲ ಎಂಬುದನ್ನು ಕವಿ ಸೂಚ್ಯವಾಗಿ ಹೇಳಿದ್ದಾರೆ.

೩. ಈ ಕವನದಲ್ಲಿ ಕವಿ ನೀಡಿರುವ ಪ್ರಾಕೃತಿಕ ಘಟನೆಗಳನ್ನು ತಿಳಿಸಿ.

ಉ: ಸಣ್ಣ ಸಂಗತಿ ಕವನದಲ್ಲಿ ಕವಿ ತಾಯ ಪಕ್ಕದಲ್ಲಿ ಮಲಗಿರುವ ಮಗು ನಟ್ಟಿರುಳು ತನ್ನ ಹೊದಿಕೆಯನ್ನು ಕಿತ್ತೆಸೆದಾಗ ,ಮತ್ತೆ ಮತ್ತೆ ತಾಯಿಯ ಕೈ ಮಗುವಿನ ಹೊದಿಕೆಯನ್ನು ಸರಿಪಡಿಸುವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ನೀರು ತುಂಬಿರುವ ಕರಿಮುಗಿಲು ,ಆಕಾಶಕ್ಕೆ ಹುಣ್ಣಿಮೆಯ ಕಣ್ಣು ತೆರೆದ ,ಬಾನ ಬೀದಿಗೆ ತಾರೆ ಬಂದಿವೆ ,ಸೋನೆಯ ಶ್ರುತಿಗೆ ಗಾಳಿಯೇ ಹಾಡುವ ಮೊದಲಾದ ಪ್ರಾಕೃತಿಕ ಚೌಕಟ್ಟಿನೊಳಗಿನ ದೊಡ್ಡ ಘಟನೆಗಳೊಂದಿಗೆ ಹೋಲಿಸಿ ವರ್ಣಿಸಲಾಗಿದೆ.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. “ ತಾರೆ ಬಂದಿವೆ ಬಾನ ಬೀದಿಗೆ .”

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಕವಿ ರಾತ್ರಿ ಸಮಯದ ಪ್ರಕೃತಿಯನ್ನು ವರ್ಣಿಸುವಾಗ ನಟ್ಟಿರುಳ ಕರಿ ಮುಗಿಲ ನೀರ ತುಂಬಿಗಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿದೆ. ಅಂದರೆ ಆಗ ತಾನೇ ಮಳೆ ಬಂದು ನಿಂತು ಆಕಾಶ ಶುಭ್ರವಾಗಿ ಚಂದ್ರನು ಆಕಾಶದಲ್ಲಿ ಗೋಚರಿಸುತ್ತಿದ್ದಾನೆ ,ಅಲ್ಲದೇ ತಾರೆಗಳು ಬಾನ ಬೀದಿಗೆ ಬಂದಿವೆ ಎಂದು ಪ್ರಾಕೃತಿಕ ಸನ್ನಿವೇಶ ವರ್ಣಿಸುವಾಗ ಈ ಮಾತು ಹೇಳಿದ್ದಾರೆ.

ಸ್ವಾರಸ್ಯ : ಜೋರಾಗಿ ಮಳೆ ಬಂದು ಆಗ ತಾನೇ ನಿಂತಿರುವ ಮಳೆಗಾಲದ ರಾತ್ರಿಯ ಪ್ರಾಕೃತಿಕ ಸನ್ನಿವೇಶವನ್ನು ಕವಿ ಇಲ್ಲಿ ವರ್ಣಿಸಿದ್ದಾರೆ.

೨. “ ತಾಯಿ  ಕೈ ನೀಡಿ ಮತ್ತೆ ಹೊದಿಕೆಯನು ಸರಿಪಡಿಸುವಳು .”

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಸುರಿಯುತ್ತಿರುವ ಮಳೆ ನಿಂತು ಆಕಾಶ ಶುಭ್ರವಾಗಿ ಚಂದ್ರನು ಉದಯಿಸಿದ ಸಂದರ್ಭದಲ್ಲಿ ಕೋಣೆಯಲ್ಲಿ ಮಂಚದ ಮೇಲೆ ತಾಯಿಯು ಮಲಗಿದ್ದಾಳೆ. ಅಲ್ಲಿ ಪಕ್ಕದ ತೊಟ್ಟಿಲಲ್ಲಿ ಮಗುವು ಕಣ್ಣನ್ನು ಅರ್ಧ ಮುಚ್ಚಿ ಬರಿ ಮೈಯಲ್ಲಿ ಮಲಗಿದೆ. ಆಗ ತಾಯಿಯು ನಿದ್ದೆಗಣ್ಣಿನಲ್ಲಿದ್ದರೂ ಕೈ ನೀಡಿ ಮಗುವಿಗೆ ಹೊದಿಕೆಯನ್ನು ಸರಿಪಡಿಸುವಳು. ಮಗು ಅಪ್ರಯತ್ನಪೂರ್ವಕವಾಗಿ ಹೊದಿಕೆಯನ್ನು ಕಿತ್ತೆಸೆದು ಪುನಃ ಬರಿ ಮೈಯಲ್ಲಿ ಮಲಗಿದಾಗ ತಾಯಿಯು ಮತ್ತೆ ಮತ್ತೆ ಹೊದಿಕೆಯನ್ನು ಹೊದಿಸಿ ತನ್ನ ಮಗುವಿನ ಆರೈಕೆಯನ್ನು ಮಾಡುವಳು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಇಡೀ ಜೀವಸಂಕುಲವನ್ನು ಕಾಪಾಡುವ ಪ್ರಕೃತಿ ಮಾತೆಯ  ಪ್ರಜ್ಞೆಯನ್ನು ವಿವರಿಸುವಾಗ ಕವಿ ತಾಯಿಯು ತನ್ನ ಮಗುವಿನ ಆರೈಕೆಯಲ್ಲಿ ತಾಯ್ತನದ ಸಾರ್ಥಕ್ಯ ಪಡೆಯುವ ಸನ್ನಿವೇಶಕ್ಕೆ ಹೊಂದಿಸಿ ವರ್ಣಿಸಿರುವುದನ್ನು ಇಲ್ಲಿ ನೋಡಹುದು.

೩. “ ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ .”

ಉ: ಈ ಮೇಲಿನ ವಾಕ್ಯವನ್ನು ಕೆ.ಎಸ್. ನರಸಿಂಹಸ್ವಾಮಿಯವರು ಬರೆದ ಇರುವಂತಿಗೆ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿರುವ ಸಣ್ಣಸಂಗತಿ ಕವನದಿಂದ ಆರಿಸಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಸೃಷ್ಟಿ ,ಪಾಲನೆ ಮತ್ತು ಪೊರೆಯುವ ಮೌಲ್ಯಗಳಿಗೆ ಸಂಬಂಧಿಸಿದ ಸಣ್ಣ ಸಂಗತಿಯನ್ನು ಕವಿ ವರ್ಣಿಸುತ್ತ ತಾಯಿ ಮಗು ಇಬ್ಬರೂ ಎಚ್ಚರದ ಸ್ಥಿತಿಯಲ್ಲಿ ಇಲ್ಲದಿದ್ದರೂ ತಾಯಿಗೆ ಮಗುವಿನ ಮೈ ಮೇಲೆ ಹೊದಿಕೆ ಇರಲಾರದು ಎಂಬ ಎಂದು ಅನಿಸಿ ಹೊದಿಕೆಯನ್ನು ಹೊದಿಸುತ್ತಿರುತ್ತಾಳೆ. ಆದರೆ ಪ್ರಪಂಚಕ್ಕೆ  ಆಗ ತಾನೇ ಕಾಲಿಟ್ಟಿರುವ ಆ ಮಗುವಿಗೆ ಈಗೀಗ ಪರಿಚಿತವಾಗುತ್ತಿರುವ  ಹೊದಿಕೆಯನ್ನು ಕಿತ್ತೆಸೆಯುತ್ತಿದೆ. ಆ ಕೋಣೆಯಲ್ಲಿ ಏನು ನಡೆಯುತ್ತಿದೆ ಎಂಬ ಅರಿವಿಲ್ಲದೆ ಹೊರ ಜಗತ್ತಿನಲ್ಲಿ ಎಲ್ಲರೂ ನಿಶ್ಚಿಂತೆಯಿಂದ ಮಲಗಿದ್ದಾರೆ. ಆದರೆ ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಇಡೀ ಜೀವ ಸಂಕುಲವನ್ನು ಕಾಪಿಡುವ ತಾಯಿಯ ಪ್ರಜ್ಞೆಯನ್ನು ,ವಾಸ್ತವವಾಗಿ ಸದಾ ಕಾಲ ಕಾಪಾಡುವ ದೇವರ ಕರುಣೆಯನ್ನು ವಿವರಿಸುವ ರೀತಿಯಲ್ಲಿ ಕವಿ ಮೇಲಿನಂತೆ ವರ್ಣಿಸಿದ್ದಾರೆ.

**ಕೊಟ್ಟಿರುವ ಪ್ರಶ್ನೆಗೆ ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ.**

೧. ಕವಿ ಯಾವ ಸಣ್ಣ ಸಂಗತಿಯೊಂದನ್ನು ಪ್ರಕೃತಿಯ ಘಟನೆಗಳೊಂದಿಗೆ ಹೋಲಿಕೆ ಮಾಡಿದ್ದಾರೆಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉ: ರಾತ್ರಿಸಮಯದ ಪ್ರಕೃತಿ ವರ್ಣನೆ ಮಾಡುತ್ತ ಕವಿಯು ನಟ್ಟಿರುಳ ಕರಿ ಮುಗಿಲ ನೀರ್ ತುಂಬಿಗಳ ನಡುವೆ ಚಂದ್ರ ಮೂಡಿರುವುದನ್ನು ತಾರೆಗಳು ಉದಯಿಸಿರುವುದನ್ನು ವರ್ಣಿಸುತ್ತ ಕೋಣೆಯಲ್ಲಿ ತಾಯಿಯು ಮಲಗಿರುವ ಮತ್ತು ಅದರ ಪಕ್ಕದ ತೊಟ್ಟಿಲಲ್ಲಿ ಮಗುವೊಂದು ಬರಿ ಮೈಯಲ್ಲಿ ಅರ್ಧಕಣ್ಣುಮುಚ್ಚಿ ಮಲಗಿರುವ ಸನ್ನಿವೇಶವನ್ನು ಸೃಷ್ಟಿಸುತ್ತಾರೆ. ಮಳೆ ಬಂದು ಇಳೆ ತಂಪಾದ ಪರಿಸರದಲ್ಲಿ ಜೀವ ಸೃಷ್ಟಿಯೊಂದು ಮೊಳಕೆಯೊಡೆದಿದೆ. ಅಲ್ಲಿ ನೀರವತೆಯಿದ್ದರೂ ಸೃಷ್ಟಿ ,ಪಾಲನೆ, ಮತ್ತು ಪೊರೆಯುವ ಕ್ರಿಯೆಯನ್ನು ಇಲ್ಲಿ ನೋಡಬಹುದು. ಮಗುವಿನ ಮೈಯಲ್ಲಿ ಹೊದಿಕೆಯಿರಲಾರದೆಂದು ಭಾವಿಸುವ ತಾಯಿಯು ಮಲಗಿದ್ದರೂ ಅವಳ ಕೈ ಮಗುವಿಗೆ ಹೊದಿಕೆ ಹೊದೆಸುವ ಕಾರ್ಯವನ್ನು ಮತ್ತೆ ಮತ್ತೆ ಮಾಡುವುದನ್ನು ಹೇಳುವ ಕವಿಯು ಲೌಕಿಕ ಅಲೌಕಿಕದ  ನಡುವೆ ಸೇತುವೆ ಕಲ್ಪಿಸಿರುವುದನ್ನು ಇಲ್ಲಿ ನೋಡಬಹುದು. ಕಾಣದ ಕರುಣೆಯ ಕೈ ಜಗತ್ತನ್ನು ಪೊರೆಯುವ ಹಾಗೆ ತಾಯಿಯು ತನ್ನ ಮಗುವಿನ ಆರೈಕೆಯಲ್ಲಿ ತಾಯ್ತನದ ಸಾರ್ಥಕತೆ ಅನುಭವಿಸುವ ಸನ್ನಿವೇಶವನ್ನು ಕವಿ ಇಲ್ಲಿ ವಿವರಿಸಿದ್ದಾರೆ. ಸಣ್ಣನೆಯ ದೀಪದ ಬೆಳಕಿನಲ್ಲಿ ಅರ್ಧ ಕಣ್ಣು ಮುಚ್ಚಿ  ಮಲಗಿದ ಮಗುವನ್ನು ಕವಿ ನಟ್ಟಿರುಳ ನಡುವೆ ಹುಣ್ಣಿಮೆಯ ಕಣ್ಣು ತೆರೆದಿರುವುದಕ್ಕೆ ಹೋಲಿಸಿದ್ದಾರೆ. ಮನುಷ್ಯ ಮತ್ತು ಪ್ರಕೃತಿಗಿರುವ ಸಂಬಂಧವನ್ನು ,ಇಡೀ ಜೀವ ಸಂಕುಲವನ್ನು ಕಾಪಿಡುವ ಪ್ರಜ್ಞೆಯನ್ನು ಕವಿ ಪ್ರಕೃತಿಯ ಘಟನೆಗಳ ಮೂಲಕ ವರ್ಣಿಸಿದ್ದಾರೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.**

೧. ಛಂದಸ್ಸು ಎಂದರೇನು ?

ಉ: ಪದ್ಯಗಳನ್ನು ರಚಿಸುವಾಗ ನಿರ್ಧಿಷ್ಟ ನಿಯಮಗಳನ್ನು ಆಚರಿಸಲಾಗುವುದು. ಅದೇ ಛಂದಸ್ಸು.

೨. ಪ್ರಾಸ ಎಂದರೇನು ? ಅದರ ವಿಧಗಳಾವುವು ?

ಉ: ಪದ್ಯದ ಪ್ರತಿಯೊಂದು ಪಾದದ ಎರಡನೆಯ ಅಕ್ಷರದಲ್ಲಿ ಅಥವಾ ಪ್ರತಿಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದೇ ಪ್ರಾಸ. ಪ್ರಾಸದ ವಿಧಗಳು ಮೂರು .

ಆದಿ ಪ್ರಾಸ : ಪ್ರತೀ ಸಾಲಿನ ಎರಡನೆಯ ಅಕ್ಷರ ಪ್ರಾಸವಾಗಿರುವುದು.

ಅಂತ್ಯಪ್ರಾಸ : ಪ್ರತೀ ಸಾಲಿನ ಕೊನೆಯ ಅಕ್ಷರ ಪ್ರಾಸವಾಗಿರುವುದು.


ಮಧ್ಯಪ್ರಾಸ : ಪ್ರತೀ ಸಾಲಿನ ಮಧ್ಯದಲ್ಲಿ ಬರುವ ಪ್ರಾಸ .

**೩.ಗಣ ಎಂದರೇನು ? ವಿವರಿಸಿ.**

**ಉ: ಗಣ ಎಂದರೆ ಗುಂಪು ಎಂದರ್ಥ .ಪದ್ಯದ ಪ್ರತೀ ಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪೇ ಗಣ . ಮಾತ್ರೆಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅದು -ಮಾತ್ರಾಗಣ . ಅಕ್ಷರಗಳ ಲೆಕ್ಕಾಚಾರದಿಂದ ಗುಂಪುಮಾಡಿದರೆ ಅದು -ಅಕ್ಷರಗಣ. ಅಂಶಗಳ ಆಧಾರದಿಂದ ಗುಂಪು ಮಾಡಿದರೆ ಅದು -ಅಂಶ ಗಣ**

# ಪದ್ಯ -೩ ಗೆಳೆತನ - ಚೆನ್ನವೀರ ಕಣವಿ

***ಕವಿ ಪರಿಚಯ***




ನವೋದಯ ಪರಂಪರೆಯ ಪ್ರಮುಖ ಕವಿಗಳಲ್ಲಿ ಒಬ್ಬರಾದ ಚೆನ್ನವೀರ ಕಣವಿಯವರು ಗದಗ ಜಿಲ್ಲೆಯ ಹೊಂಬಳದವರು.ಇವರ ಕಾಲ ಕ್ರಿ.ಶ. ೧೯೨೮ .

ಆಕಾಶ ಬುಟ್ಟಿ ಭಾವಜೀವಿ, ಮಧುಚಂದ್ರ , ದೀಪಧಾರಿ,ಮಣ್ಣಿನ ಮೆರವಣಿಗೆ ,ನೆಲಮುಗಿಲು ,ಕಾವ್ಯಾಕ್ಷಿ ,ಚಿರಂತನ ದಾಹ ಇವೇ ಮೊದಲಾದವು ಇವರ ಪ್ರಮುಖ ಕವನ ಸಂಕಲನಗಳು . ಇವರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ ,೧೯೮೧ ರಲ್ಲಿ ಜೀವಧ್ವನಿ ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ .೧೯೯೬ರಲ್ಲಿ ಹಾಸನದಲ್ಲಿ ನಡೆದ ೬೫ ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಪ್ರಸ್ತುತ ಗೆಳೆತನ ಕವನವನ್ನು ಅವರ ಆಕಾಶ ಬುಟ್ಟಿ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ_**

೧.ಕವಿ ಎಲ್ಲಿ ತಂಗಿದ್ದಾರೆ ?

ಉ: ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ ನೆರಳಿನ ತಂಪಿನಲ್ಲಿ ತಂಗಿದ್ದಾರೆ.

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ ?

ಉ: ಜೀವನದ ಮುಗಿಯದ ಕಷ್ಟ ನೋವುಗಳ ಕಾವನ್ನು ಕವಿ ಮೌನದಲ್ಲಿ ನುಂಗಿದ್ದಾರೆ.

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ ?

ಉ: ಗೆಳೆತನದ ಮನಸ್ಸಿನ ಭಾವನೆ ಬಾನಿನಂತೆ ಅಗಲವಾಗಿದೆ. ಸ್ಪಟಿಕದಂತೆ ಶುದ್ಧವಾಗಿದೆ.

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು ?

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು ಇಲ್ಲ ಎಂಬುದು ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ .

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ ?

ಉ: ಗೆಳೆತನದಲ್ಲಿ ವಂಚನೆಯಿಲ್ಲ, ಚಂಚಲತೆ ಎಳ್ಳಷ್ಟೂ ಇಲ್ಲ. ಮೇಲು ಕೀಳುಗಳು ಎನ್ನುವ ಬೇಧವೂ ಇಲ್ಲ. ಅಹಮಿಕೆಯ ನೆಪವಿಲ್ಲ.ದ್ವೇಷ ಗುಣಕ್ಕೆ ಆಸ್ಪದವಿಲ್ಲ.ಸಣ್ಣತನಕ್ಕೆ ಸಂಕೋಚಕ್ಕೆ ಅವಕಾಶವಿಲ್ಲ.

೨.ಗೆಳೆತನದ ಶುಚಿರುಚಿ ಎಂಥದ್ದು ?ಉಪ್ಪಿಗಿಂತಲೂ ರುಚಿಯಿಲ್ಲ.ತಾಯಿಗಿಂತ ಬಂಧುವಿಲ್ಲ.ಎನ್ನುವ ಗಾದೆ ಮಾತಿದೆ. ಗೆಳೆತನದ ಶುಚಿ ರುಚಿಯು ಇದಕ್ಕು ಮಿಗಿಲಾಗಿರುವಂತದ್ದು. ಎಲ್ಲರಿಗೂ ಇದು ಅರ್ಥವಾಗಲಾರದು. ಯಾರು ಈ ಸವಿಯನ್ನು ಸವಿದಿರುವರೋ ಅಂಥವರಿಗೆ ಮಾತ್ರವೇ ಇದರ ಅರಿವಾಗಲು ಸಾಧ್ಯ

೩.ಜೀವನ ರಸಪಾಕವಾಗುವುದು ಹೇಗೆ ?

ಉ: ಸ್ನೇಹಿತರು ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಬೇಕು. ಜೀವನದ ಆಗು ಹೋಗುಗಳಿಗೆ ಬಾಗದಂತೆ, ಕುಗ್ಗದಂತೆ ,ಒಬ್ಬರಿಗೊಬ್ಬರು ಹೆಗಲುಕೊಟ್ಟು ಬದುಕಬೇಕು. ಸುಖದಲ್ಲಿ ಸಂತಸ ಪಟ್ಟು ದುಃಖದಲ್ಲಿ ಪರಸ್ಪರ ನೆರವಾಗಿ ಸಹಭಾಗಿಗಳಾದರೆ ಜೀವನ ರಸದ ಪಾಕವಾಗುವುದು.

**ನಾಲ್ಕು ಐದು ವಾಕ್ಯಗಳಲ್ಲಿ ಉತ್ತರಿಸಿ.**

೧.ಗೆಳೆತನವು ಇಹಲೋಕಕಿರುವ ಅಮೃತ ಹೇಗೆ ?

ಉ: ಗೆಳೆತನವು ವಿಶಾಲವಾದ ಆಲದ ಮರವಿದ್ದಂತೆ . ಇಲ್ಲಿ ಪ್ರೀತಿ,ವಿಶ್ವಾಸದ ತಂಪಾದ ನೆರಳು ಇರುವುದು. ಜೀವನದ ಕೊನೆಯಿಲ್ಲದ ಬವಣೆ ನೋವುಗಳನ್ನು ಗೆಳೆತನದ ಸ್ಪರ್ಷದಿಂದ ಮರೆಯಬಹುದು. ಗೆಳೆತನವು ಇಹ ಲೋಕದಲ್ಲಿರುವ ಅಮೃತದ ಹಾಗೆ ಇರುವುದು. ಗೆಳೆತನವನ್ನು ತೊರೆದರೆ ಜೀವನ ಮರಣದಂತೆ .

೨. ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ ? ವಿವರಿಸಿ.

ಉ: ಗೆಳೆತನದಲ್ಲಿ ಗೆಳೆಯರಿಬ್ಬರ ಮನಸ್ಸಿನ ಭಾವವು ಸ್ಫಟಿಕದಂತೆ ಶುದ್ಧವಾಗಿರುತ್ತದೆ. ಎದೆಯು ಕಲ್ಮಶಗಳಿಲ್ಲದ ತಿಳಿಯಾದ ಕೊಳದಂತಿರುತ್ತದೆ. ಮನವು ಬಾನಿನಂತೆ ಅಗಲವಾಗಿರುತ್ತದೆ. ಬೆಲದಿಂಗಳಿನಂತೆ ತಂಪಾಗಿರುತ್ತದೆ.ನಿಜವಾದ ಗೆಳೆಯರಲ್ಲಿ ವಂಚನೆ ,ಚಂಚಲತೆ ,ಮೇಲುಕೀಳುಗಳೆನ್ನುವ ಬೇಧ ಭಾವನೆಗೆ ಅವಕಾಶವಿಲ್ಲ. ಅಹಂಕಾರ ದ್ವೇಷದ ಭಾವನೆಗೆ ಆಸ್ಪದವಿಲ್ಲ.

೩. ಗೆಳೆಯರು ಹೇಗೆ ಬಾಳುತ್ತಾರೆ ?

ಉ: ಜೀವನದ ಆಗು ಹೋಗುಗಳನ್ನು ಸಹಿಸಿಕೊಳ್ಳುವ ಮನೋಭಾವನೆ ಗೆಳೆಯರಲ್ಲಿರುತ್ತದೆ . ಗೆಳೆಯರು ಪರಸ್ಪರ ಸಂತಸ ಹಾಗೂ ದುಃಖಗಳಲ್ಲಿ ಸಹಭಾಗಿಗಳಾಗಿರುತ್ತಾರೆ. ಹಾಗಾದಾಗ ಜೀವನವು ರಸದ ಪಾಕದಂತಿರುತ್ತದೆ. ಗೆಳೆಯರು ಸರಸ ವಿರಸವನ್ನು ಸ್ವೀಕರಿಸಿ ಗಂಧದ ರೀತಿ ಜೀವ ತೇಯ್ದು ಪರಸ್ಪರರಿಗಾಗಿ ಬದುಕುತ್ತಾರೆ.

**ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಗೆಳೆತನದ ಮಹತ್ವವನ್ನು ಕಣವಿ ಅವರು ಹೇಗೆ ವಿವರಿಸಿದ್ದಾರೆ ?

ಉ: ' ಗೆಳೆತನ ' ಕವನದಲ್ಲಿ ಕವಿ ಚೆನ್ನವೀರಕಣವಿಯವರು ಗೆಳೆತನ ,ಅದರ ಸವಿ , ಮಹತ್ವ ಹಾಗೂ ಅನ್ಯೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಕವಿ ಗೆಳೆತನವು ಇಹ ಲೋಕಕ್ಕಿರುವ ಅಮೃತ ಎಂದು ಹೇಳುತ್ತಾರೆ. ನಿಜವಾದ ಗೆಳೆತನವಿದ್ದರೆ ,ಗೆಳೆಯರಿದ್ದರೆ ಜೀವನದ ಕಷ್ಟ ನಷ್ಟಗಳನ್ನು ಮರೆತು ಬಾಳಬಹುದು ಎಂಬುದು ಕವಿಯ ಅಭಿಪ್ರಾಯವಾಗಿದೆ. ಗೆಳೆತನದಲ್ಲಿ ವಂಚನೆ, ಚಂಚಲತೆ ,ಮೇಲು ಕೀಳು ಎಂಬ ಭಾವನೆಗೆ ಅವಕಾಶವಿಲ್ಲ. ಅಹಂಕಾರದ ಭಾವನೆಗೆ ಆಸ್ಪದವಿಲ್ಲ.ದ್ವೇಷವಾಗಲೀ, ಸಣ್ಣತನವಾಗಲೀ, ಸಂಕೋಚವಾಗಲೀ ಇವು ಯಾವುದೇ ಭಾವಗಳೂ ಅಲ್ಲಿ ಪ್ರವೇಶಿಸುವುದಿಲ್ಲ. ಗೆಳೆತನದಲ್ಲಿ ಗೆಳೆಯರ ಮನವು ಬಾನಿನಂತೆ ವಿಶಾಲವಾದ ಉತ್ತಮ ಗುಣಗಳನ್ನು ಹೊಂದಿದ್ದು, ಎದೆಯಲ್ಲಿ ಯಾವುದೇ ಕಲ್ಮಶ ಭಾವಗಳಿಲ್ಲದೇ ತಿಳಿಯಾಗಿರುವುದು. ಬೆಳದಿಂಗಳಿನ ತಂಪನ್ನು ಗೆಳೆತನವು ನೀಡುವುದು. ಉಪ್ಪಿಗಿಂತ ರುಚಿಯಿಲ್ಲ ,ತಾಯಿಗಿಂತ ಬಂಧುವಿಲ್ಲ ಎನ್ನುವ ಹಾಗೆ ಗೆಳೆತನವು ಇವೆಲ್ಲ ಭಾವಗಳನ್ನು ಮೀರಿಸುವಂತದ್ದು. ಯಾರು ಗೆಳೆತನದ ಸವಿಯನ್ನು ಅನುಭವಿಸಿರುವರೋ ಅಂತವರಿಗಷ್ಟೇ ಗೆಳೆತನದ ಮಹತ್ವ ಅರಿವಾಗುವುದು. ನಿಜವಾದ ಗೆಳೆಯರು ಕಷ್ಟದಲ್ಲಿ ಪರಸ್ಪರ ಸಹಭಾಗಿಗಳಾಗಿ, ವಿರಸವನ್ನು ಮರೆತು ಬಾಳುವರು ಎಮದು ಕವಿ ಗೆಳೆತನದ ಮಹತ್ವವನ್ನು ವಿವರಿಸಿದ್ದಾರೆ.

**ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.**

೧. ''ಅದನುಳಿದರೇನಿಹುದು ಜೀವನ್ಮೃತ''

ಉ: ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನವು ಈ ಲೋಕದಲ್ಲಿ ಮಾನವನಿಗೆ ದೊರೆತ ಅಮೃತದಂತೆ .ಅದನ್ನು ಬಿಟ್ಟರೆ ಜೀವನದಲ್ಲಿ ಇನ್ನೇನು ಇರಲು ಸಾಧ್ಯ ? ಗೆಳೆತನವಿಲ್ಲದ ಬದುಕು ಮರಣದಂತೆ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಗೆಳೆತನದ ಭಾವವು ಅಮೃತದ ಹಾಗೆ ಬದುಕಲು ಸ್ಪೂರ್ತಿಯನ್ನು ನೀಡುವುದು ಎಂಬುದು ಕವಿಯ ನಿಲುವಾಗಿದೆ .

೨. '' ಭಾವ ಶುದ್ಧ ಸ್ಫಟಿಕ ಬೆಳದಿಂಗಳು! ''

ಉ: ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನದಲ್ಲಿ ವಂಚನೆ ,ಚಂಚಲತೆ ,ಅಹಮಿಕೆ,ಸಣ್ಣತನ ಮೊದಲಾದ ದುರ್ಗುಣಗಳಿಗೆ ಅವಕಾಶವಿಲ್ಲ.ಮನವು ಬಾನಿನಷ್ಟು ವಿಶಾಲ ,ಸ್ಫಟಿಕದಂತೆ ಶುದ್ಧ ಭಾವನೆಗಳು , ಬೆಳದಿಂಗಳಿನಂತೆ ತಂಪು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ: ಗೆಳೆತನವು ನಿರ್ವಂಚನೆಯಿಂದ ಕೂಡಿರುವಂತದ್ದು ,ಕಪಟಕ್ಕೆ ಅಲ್ಲಿ ಆಸ್ಪದವಿಲ್ಲ .

೩. ''ಕಂಡ ಕಂಡವರೇನು ಬಲ್ಲರಿದನು ''

ಉ: ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆತನವು ಪರಿಶುದ್ಧವಾದುದು ,ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಎಂಬ ಗಾದೆ ಮಾತಿದೆ. ಗೆಳೆತನದ ಶುಚಿ ರುಚಿಯು ಇದಕ್ಕೂ ಮಿಗಿಲಾದುದು . ಯಾರು ಇದನ್ನು ಸವಿದಿದ್ದಾರೋ ಅವರಿಗೆ ಮಾತ್ರ ಇದರ ಅರಿವಾಗುವುದು.

ಸ್ವಾರಸ್ಯ : ಗೆಳೆತನದ ಸವಿಯನ್ನು ಅನುಭವಿಸಿದವರಿಗೆ ಅದರ ಮಹತ್ವ ಅರ್ಥವಾಗವುದು. ಅನುಭವಿಸಲಾರದವರಿಗೆ ಅದು ಅರ್ಥವಾಗದು ಎಂದು ಕವಿ ಹೇಳಿದ್ದಾರೆ.

೪. ''ಬಾಳುವರು ಗಂಧದೊಲು ಜೀವ ತೇಯ್ದು !”

ಉ: ಈ ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿಯವರು ಬರೆದ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಗೆಳೆಯರು ಪರಸ್ಪರ ಸುಖದುಃಖದಲ್ಲಿ ಭಾಗಿಗಳಾಗುವರು. ಗಂಧದ ಹಾಗೆ ಪರಸ್ಪರರಿಗಾಗಿ ಜೀವ ತೇಯುವರು . ಒಬ್ಬರ ಅಗತ್ಯತೆಗೆ ಇನ್ನೊಬ್ಬರು ಒದಗುವರು ಎಂಬುದು ಕವಿಯ ಅಭಿಪ್ರಾಯವಾಗಿದೆ.

ಸ್ವಾರಸ್ಯ : ನಿಜವಾದ ಗೆಳೆಯರು ಪರಸ್ಪರರಿಗಾಗಿ ಬಾಳುವರು. ತಮ್ಮ ಸ್ವಾರ್ಥಕ್ಕೆ ಗೆಳೆತನದಲ್ಲಿ ಅವಕಾಶವಿಲ್ಲ ಎಂಬುದು ಕವಿಯ ಅಭಿಪ್ರಾಯವಾಗಿದೆ.

ಗುಂಪಿಗೆ ಸೇರದ ಪದ ಬರೆಯಿರಿ.

೧. ಹೆಗಲುಗೊಟ್ಟು , ಸಂತಸಬಟ್ಟು ,ಉಂಡವನು ,ತಿಳಿಗೊಳ     ಉತ್ತರ : ಉಂಡವನು


೨. ಲೋಕ ,ಅಮೃತ ,ಎದೆ ,ಸಾಹಸ     ಉತ್ತರ : ಎದೆ

೩. ಭಾವಜೀವಿ , ಕಾವ್ಯಾಕ್ಷಿ , ದೀಪಧಾರಿ ,ಜೀವಧ್ವನಿ ಉತ್ತರ : ಜೀವಧ್ವನಿ

೪. ಬಾನು , ಆಕಾಶ , ಭಾನು , ಗಗನ     ಉತ್ತರ : ಭಾನು

# ಪದ್ಯ - ೪ ಭರವಸೆ -ಬಿ.ಟಿ.ಲಲಿತಾ ನಾಯಕ್

**ಕೃತಿಕಾರರ ಪರಿಚಯ :**



ಶ್ರೀಮತಿ ಬಿ.ಟಿ.ಲಲಿತಾ ನಾಯಕ್ ಅವರು ಚಿಕ್ಕಮಗಳೂರು ಜಿಲ್ಲೆಯ ತಂಗಲಿ ತಾಂಡ್ಯದಲ್ಲಿ ೪/೪/೧೯೪೫ ರಲ್ಲಿ ಜನಿಸಿದರು. ಚಂದ್ರ ಪರಾಭವ , ಭಟ್ಟನ ಕನಸು , ನೆಲೆಬೆಲೆ ,ನಂರೂಪ್ಲಿ, ಗತಿ,ಹಬ್ಬ ಮತ್ತು ಬಲಿ ,ಇದೇ ಕೂಗು ಮತ್ತೆ ಮತ್ತೆ ,ದೇವದುರ್ಗ ತಾಲೂಕು ದರ್ಶನ ,ಒಡಲಬೇಗೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಮಕ್ಕಳ ಕತೆ ,ರೇಡಿಯೋ ನಾಟಕಗಳನ್ನೂ ರಚಿಸಿರುವರು. ಪ್ರಸ್ತುತ ಭರವಸೆ ಕವಿತೆಯನ್ನು ಇವರ 'ಬಿದಿರು ಮೆಳೆ ಕಂಟಿಯಲಿ' ಎಂಬ ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ.

**ಒಂದು ವಾಕ್ಯದಲ್ಲಿ ಉತ್ತರಿಸಿ.**

೧. ಕೋಕಿಲೆಕುಕಿಲ ರಾಗವನ್ನು ಯಾವಾಗ ಬೆರೆಸಿತು ?

ಉ: ಮಲ್ಲಿಗೆ ಮೊಗ್ಗುಗಳು ಅರಳಿ ಎಲ್ಲೆಡೆ ಪರಿಮಳವನ್ನು ಸೂಸಿ ವಸಂತಕಾಲದ ಆಗಮನವಾಗಿದೆ ಎಂದು ಸಾರಿದಾಗ, ಮಾಮರದ ರೆಂಭೆಯಲ್ಲಿ ಕುಳಿತಿದ್ದ ಕೋಗಿಲೆಯು ಕೋಕಿಲೆಯು ಅದರಲ್ಲಿ ಕುಕಿಲ ರಾಗವನ್ನು ಬೆರೆಸಿತು.

೨. ಮನುಷ್ಯ ಸ್ವಭಾವದ ಬಗ್ಗೆ ಕವಯಿತ್ರಿಯ ಅಭಿಪ್ರಾಯವೇನು ?

ಉ: ಕೃತಕತೆಯ ಜಾಲದಲ್ಲಿ ಸಿಲುಕಿದ ಈ ಜಗದಲ್ಲಿರುವ ಮನುಜನು ನೈಜತೆಗೆ ಬೆಲೆ ನೀಡುತ್ತಿಲ್ಲ, ಸ್ವಾರ್ಥದಲ್ಲಿ ಮುಳುಗಿ ಪ್ರಕೃತಿಯನ್ನು ನಾಶ ಮಾಡುತ್ತ ಮಣ್ಣಿನ ಸೊಗಡು ಮರೆಯುತ್ತಿದ್ದಾನೆ ಎಂದು ಕವಯಿತ್ರಿ ಅಭಿಪ್ರಾಯ ಪಟ್ಟಿದ್ದಾರೆ.

**ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲ್ಲಿಗೆ ಕೋಗಿಲೆಯನ್ನು ಕರೆದು ಏನು ಹೇಳಿತು ?

ಉ: ಮಲ್ಲಿಗೆ ಮೊಗ್ಗು ಅರಳಿ ಪರಿಮಳವನ್ನು ಸೂಸಿ ವಸಂತ ಕಾಲದ ಆಗಮನ ಸಾರಿದಾಗ ,ಮಾಮರದ ರೆಂಬೆಯಲ್ಲಿ ಕುಳಿತಿದ್ದ ಕೋಗಿಲೆಯು ಮಧುರ ನಿನಾದದಿಂದ ಹಾಡಿತು. ಬಳುಕಾಡುತ್ತ ಮಲ್ಲಿಗೆಯು ಕೋಗಿಲೆಯನ್ನು ಕರೆಯಿತು.ಪ್ರಿಯ ಗೆಳತಿಯೇ ನೀನು ಒಂದು ಹಾಡನ್ನು ಹಾಡು, ನೀನು ಬಾನ ಸಂಚಾರಿಣಿ,ಅನುಭವದ ಹೊನ್ನಿನ ಗಣಿಯೆ ನೀನೀಗ ಲೋಕದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಹೇಳು ಎಂದು ಹೇಳಿತು.

೨. ಮಲ್ಲಿಗೆಯ ಕೋರಿಕೆಗೆ ಕೋಗಿಲೆ ಪ್ರಕೃತಿಯ ಬಗ್ಗೆ ಏನೆಂದು ಉತ್ತರ ನೀಡಿತು ?

ಉ: ಏನು ಎಂದು ಹಾಡಲಿ? ನಾನು ನಿನಗೆ ಏನು ಅರುಹಲಿ ? ನನಗೆ ಬೆಡಗಿನ ,ಬಣ್ಣ ಹಚ್ಚಿ ಹೇಳುವ ಮಾತುಗಳು ಗೊತ್ತಿಲ್ಲ, ಆದರೆ ಈ ಜಗತ್ತು ಕೃತಕತೆಗೆ ಮರುಳಾಗಿ ನೈಜತೆಯನ್ನು ವಾಸ್ತವವನ್ನು ಮರೆಯುತ್ತಿದೆ ಎಂದು ಮಾತ್ರ ಹೇಳಬಲ್ಲೆ ,ಪ್ರಕೃತಿಯ ಈ ಸಂಪತ್ತನ್ನು ನಾಶ ಮಾಡುತ್ತಿರುವ ಮನುಷ್ಯ ಕೇವಲ ಸ್ವಾರ್ಥದಲ್ಲಿ ಮುಳುಗಿ ಹೋಗಿದ್ದಾನೆ. ಕೇವಲ ಗೋಡೆಯ ಮೇಲೆ ಗಿಡ ಬಳ್ಳಿ ಚಿತ್ತಾರಗಳನ್ನು ಸೊಗಸಾಗಿ ಮೂಡಿಸುತ್ತ, ವಾಸ್ತವದಲ್ಲಿ ಪ್ರಕೃತಿಯ ಸೊಬಗನ್ನು ಆಸ್ವಾದಿಸುವುದನ್ನು ಈ ಮಣ್ಣಿನ ಸೊಗಡನ್ನು ಕಾಪಾಡುವುದನ್ನು ಮರೆಯುತ್ತಿದ್ದಾನೆ ಎಂದು ಕೋಗಿಲೆಯು ಮಲ್ಲಿಗೆಯ ಕೋರಿಕೆಗೆ ಉತ್ತರಿಸಿತು.

೩. ಕೋಗಿಲೆಯ ಆಶಾವಾದವೇನು ?

ಉ: ಮನುಷ್ಯನ ಸ್ವಾರ್ಥ ಬುದ್ಧಿಯಿಂದಾಗಿ ಪ್ರಕೃತಿ ನಶಿಸುತ್ತಿದೆಯೆಂದು, ಮಾನವ ಈ ಮಣ್ಣಿನ ಸೊಗಡನ್ನು ಮರೆಯುತ್ತಿದ್ದಾನೆಂದು ಹೇಳಿದ ಕೋಗಿಲೆಯು ನಂತರ ಆಶಾವಾದದ ,ಭರವಸೆಯ ಮಾತುಗಳನ್ನಾಡಿತು. ಮಾವು,ಮಲ್ಲಿಗೆ ,ದುಂಬಿಗಳು ,ಅದರ ಝೇಂಕಾರ ಜೊತೆಗೆ ಕವಿ ಕಲ್ಪನೆಯ ಗಾನ ಲಹರಿ ಈ ಭೂಮಿಯ ಮೇಲೆ ಇದ್ದೇ ಇರುವುದು, ನೀನು

ಬೇಸರಿಸಬೇಡ,ಮರುಗಬೇಡ ,ಈ ಭೂಮಿ ಬರಡಲ್ಲ ,ಎಂದೂ ಬತ್ತದ , ಅಮರ ಪ್ರೇಮದ ಒರತೆ ಅಲ್ಲಲ್ಲಿಯಾದರೂ ಹರಿಯುವುದು ಎಂದು ಕೋಗಿಲೆಯು ಭೂಮಿಯ ಸಂಜೀವಿನಿ ಗುಣವನ್ನು ಎತ್ತಿ ಹಿಡಿದು ಮಾತನಾಡಿ ತನ್ನ ಆಶಾವಾದವನ್ನು ವ್ಯಕ್ತಪಡಿಸಿತು. .

**ಎಂಟು /ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

೧. ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯನ್ನು ಬರೆಯಿರಿ.

ಉ: ಜಗತ್ತಿನ ತಲ್ಲಣಗಳನ್ನು ಮಲ್ಲಿಗೆ ಮತ್ತು ಕೋಗಿಲೆಯ ಸಂಭಾಷಣೆಯ ಮೂಲಕ ಹೇಳುವ ಕವನ ಭರವಸೆ . ಮಲ್ಲಿಗೆಯ ಮೊಗ್ಗು ಅರಳಿ ವಸಂತನಾಗಮನ ಸಾರಿದ ಸಂರ್ಭದಲ್ಲಿ ಮಾಮರದ ರೆಂಭೆಯಲ್ಲಿ ಕುಳಿತಿದ್ದ ಕೋಗಿಲೆಯು ತನ್ನ ಧ್ವನಿ ಬೆರೆಸಿತು. ಆಗ ಮಲ್ಲಿಗೆಯು ಕೋಗಿಲೆಯನ್ನು ಕರೆದು ಪ್ರಿಯ ಗೆಳತಿಯೇ ನೀನು ಬಾನ ಸಂಚಾರಿಣಿ ,ಅನುಭವದ ಹೊನ್ನಗಣಿ ,ಒಂದು ಹಾಡು ಹೇಳು .ಲೋಕ ವಾರ್ತೆಯನ್ನು ತಿಳಿಸು ಎಂದಿತು. ಆಗ ಕೋಗಿಲೆಯು ಏನೆಂದು ಹಾಡಲಿ ? ಏನು ತಿಳಿಸಲಿ? ನನಗೆ ಇರುವುದನ್ನು ಇದ್ದಂತೆ ಹೇಳುವ ಅಭ್ಯಾಸ , ಈ ಜಗತ್ತು ಕೃತಕತೆಗೆ ಮರುಳಾಗಿ ನೈಜತೆಯನ್ನು ಮರೆಯುತ್ತಿದೆ. ನೈಜತೆಗೆ ಯಾರೂ ಬೆಲೆಕೊಡುತ್ತಿಲ್ಲ  ಎಂದಿತು. ಮನುಷ್ಯನು ಪ್ರಕೃತಿಯನ್ನು ನಾಶ ಮಾಡುತ್ತಿದ್ದಾನೆ. ಸಂಪೂರ್ಣವಾಗಿ ಸ್ವಾರ್ಥದಲ್ಲಿ ಮುಳುಗಿದ್ದಾನೆ. ಭಿತ್ತಿಯಲ್ಲಿ ಗಿಡಬಳ್ಳಿ ಚಿತ್ತಾರವನ್ನು ಬಿಡಿಸುವನು ಆದರೆ ನಿಜವಾದ ಗಿಡಬಳ್ಳಿಗಳನ್ನು ನಾಶ ಮಾಡುವನು .ಈ ಮಣ್ಣಿನ ಸೊಗಡನ್ನು ಮರೆಯುತ್ತಿದ್ದಾನೆ ಎಂದಿತು. ಹೀಗಿದ್ದರೂ ಈ ಭೂಮಿ ಬರಡಲ್ಲ.ಅಮರ ಪ್ರೇಮದ ಒರತೆ ಅಲ್ಲಲ್ಲಿ ಹರಿಯುವುದು ಎಂದು ಕೋಗಿಲೆಯು ನಿರಾಸೆಯ ಜೊತೆಗೇ ಆಶಾವಾದದ ಮಾತುಗಳನ್ನೂ ಹೇಳುವುದು.

೨. ಕೋಗಿಲೆ ತಿಳಿಸಿದ ಲೋಕವಾರ್ತೆ ಏನು ? --- ವಿವರಿಸಿ.

ಉ: ಭರವಸೆ ಪದ್ಯದಲ್ಲಿ ಕವಯಿತ್ರಿ ಬಿ.ಟಿ.ಲಲಿತಾನಾಯಕ್ ರವರು ಮಲ್ಲಿಗೆ ಮತ್ತು ಕೋಗಿಲೆಗಳ ನಡುವೆ ನಡೆಯುವ ಸಂಭಾಷಣೆಯ ಮೂಲಕ ಲೋಕದಲ್ಲಿ ನಡೆಯುತ್ತಿರುವ ಮಹತ್ವಪೂರ್ಣ ವಿಚಾರದ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಲೋಕದ ವಾರ್ತೆಯನ್ನು ಅರುಹು ಎಂದು ಮಲ್ಲಿಗೆಯು ಕೇಳಿದಾಗ ಕೋಗಿಲೆಯು ಬಣ್ಣ ಬೆಡಗಿನ ಮಾತನಾಡಲು ತನಗೆ ಬರುವುದಿಲ್ಲ ಎಂದು ಹೇಳುವ ಮೂಲಕ ಇಂದಿನ ಸಮಾಜದಲ್ಲಿ ಬಣ್ಣ ಬೆಡಗಿನ ಮಾತಿಗೇ ಹೆಚ್ಚು ಪ್ರಾಧಾನ್ಯತೆ ಇರುವುದನ್ನು ಸರಳತೆಗೆ ಬೆಲೆಯಿಲ್ಲ ಎಂದು ತಿಳಿಸಲು ಪ್ರಯತ್ನಿಸುತ್ತದೆ. ಅಲ್ಲದೇ ಜನರು ಕೃತಕತೆಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದು ನೈಜತೆಗೆ ಯಾವುದೇ ಬೆಲೆ ನೀಡುತ್ತಿಲ್ಲವೆಂದು ಕೋಗಿಲೆ ಹೇಳುತ್ತದೆ. ವೈಭವದ ಬದುಕಿಗೆ ಮಾರು ಹೋಗಿರುವ ಜನರು ತಮ್ಮ ವೈಭವಕ್ಕಾಗಿ ಪ್ರಕೃತಿಯನ್ನು ಹೇಗೆ ನಾಶಪಡಿಸುತ್ತಿದ್ದಾರೆ ,ಅಲ್ಲದೇ ಸೌಂದರ್ಯಪ್ರಜ್ಞೆ ,ಪರಿಸರದ ಮೇಲಿನ ಕಾಳಜಿ ಕೇವಲ ಗೋಡೆಗಳ ಮೇಲೆ ಬಿಡಿಸುವ ಗಿಡಬಳ್ಳಿ ಚಿತ್ತಾರಗಳ ರೂಪದಲ್ಲಿ ಕಾಣುತ್ತಿದೆಯೇ ಹೊರತೂ ವಾಸ್ತವದಲ್ಲಿ ಪರಿಸರದ ಉಳಿವಿನ ಬಗ್ಗೆ ಯಾರೂ ಯೋಚಿಸುತ್ತಿಲ್ಲ ,ಮಣ್ಣಿನ ಸೊಗಡನ್ನು ಉಳಿಸುವ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸುವ ಕೋಗಿಲೆಯು ಮಾವು ಮಲ್ಲಿಗೆಗಳ ಕಂಪು  ದುಂಬಿಗಳ ಝೇಂಕಾರದ ಧ್ವನಿ ಕವಿಕಲ್ಪನೆಯಲ್ಲಿ ಜೀವಂತವಾಗಿದೆ ಈ ಭೂಮಿ ಬರಡಲ್ಲ ಅಮರ ಪ್ರೇಮದ ಒರತೆ ಕೆಲವೆಡೆಯಾದರೂ ಹರಿಯುವುದು ಎಂದು ಭರವಸೆಯನ್ನೂ ವ್ಯಕ್ತಪಡಿಸುವುದು.

**ಸಂದರ್ಭ ಸಹಿತ ಸ್ವಾರಸ್ಯ  ವಿವರಿಸಿ.**

೧. ''ಬೆರೆಸಿತದರೊಳಗೊಂದು ಕುಕಿಲರಾಗ ''

ಉ: ಈ ಮೇಲಿನ ವಾಕ್ಯವನ್ನು ಶ್ರೀಮತಿ ಬಿ.ಟಿ.ಲಲಿತಾ ನಾಯಕರು ಬರೆದ 'ಬಿದಿರು ಮಳೆ ಕಂಟಿಯಲಿ ' ಕವನ ಸಂಕಲನದಿಂದ ಆಯ್ದುಕೊಳ್ಳಲಾದ 'ಭರವಸೆ ' ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ. ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ.

ಸಂದರ್ಭ : ಮಲ್ಲಿಗೆ ಮೊಗ್ಗು ಅರಳಿ ಎಲ್ಲೆಡೆಯೂ ತನ್ನ ಪರಿಮಳವನ್ನು ಬೀರಿ ವಸಂತಕಾಲದ ಆಗಮನವಾಗಿದೆಯೆಂದು ಸಾರಿತು . ಆಗ ಮಾವಿನ ಮರದ ರೆಂಬೆಯಲ್ಲಿ ಕುಳಿತಿದ್ದ ಕೋಗಿಲೆಯೊಂದು ತನ್ನ ಇಂಪಾದ ಕಂಠದಿಂದ ಹಾಡುತ್ತ ವಸಂತನ ಆಗಮನಕ್ಕೆ ಸ್ವಾಗತ ಕೋರಿತು ಎಂದು ಕವಯಿತ್ರಿ ಹೇಳಿದ್ದಾರೆ.

ಸ್ವಾರಸ್ಯ : ವಸಂತ ಕಾಲದ ಆಗಮನಕ್ಕೂ ಕೋಗಿಲೆಯ ಹಾಡಿಗೂ ಇರುವ ನಂಟು ಇಲ್ಲಿ ವ್ಯಕ್ತವಾಗಿದೆ. ಪ್ರಕೃತಿ ಹಸಿರಿನಿಂದ ಕಂಗೊಳಿಸಲು ಪ್ರಾರಂಭಿಸುವ ಮುನ್ಸೂಚನೆಯಾಗಿದೆ.

೨. ''ನೈಜತೆಗೆ ಇಲ್ಲ ಬೆಲೆಯು ''

ಉ: ಈ ಮೇಲಿನ ವಾಕ್ಯವನ್ನು ಶ್ರೀಮತಿ ಬಿ.ಟಿ.ಲಲಿತಾ ನಾಯಕರು ಬರೆದ 'ಬಿದಿರು ಮಳೆ ಕಂಟಿಯಲಿ ' ಕವನ ಸಂಕಲನದಿಂದ ಆಯ್ದುಕೊಳ್ಳಲಾದ 'ಭರವಸೆ ' ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ವಸಂತಕಾಲದ ಆಗಮನದ ಸೂಚನೆಯೆಂಬಂತೆ ಅರಳಿದ ಮಲ್ಲಿಗೆಯು ಬಾನ ಸಂಚಾರಿಣಿಯಾದ ಕೋಗಿಲೆಯನ್ನು ಕರೆದು ಲೋಕದ ವಾರ್ತೆಯನ್ನು ಅರುಹಲು ಕೇಳಿಕೊಂಡಾಗ ,ಕೋಗಿಲೆಯು ಬಣ್ಣದ ಮಾತುಗಳನ್ನು ಆಡಲು ತನ್ನಿಂದ ಸಾಧ್ಯವಿಲ್ಲವೆಂದು ,ಈ ಜಗತ್ತು ಮಾತ್ರ ಕೃತಕತೆಯ ಜಾಲದಲ್ಲಿ ಸಿಲುಕಿಕೊಂಡಿದೆಯೆಂದೂ ನೈಜತೆಗೆ ಇಲ್ಲಿ ಯಾವ ಬೆಲೆಯೂ ಇಲ್ಲವೆಂದು ಹೇಳಬಲ್ಲೆ ಎಂದು ಉತ್ತರಿಸಿತು.

ಸ್ವಾರಸ್ಯ : ಪ್ರಕೃತಿಯ ನೈಜತೆಗೆ ಮನುಷ್ಯನ ಸ್ವಾರ್ಥ ಅಡ್ಡಿಯಾಗಿದೆ ಎಂದು ಕವಯಿತ್ರಿ ಕೋಗಿಲೆಯ ಮೇಲಿನ ಮಾತಿನ ಮೂಲಕ ವ್ಯಕ್ತಪಡಿಸಿದ್ದಾರೆ.

೩. ''ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ ''

ಉ: ಈ ಮೇಲಿನ ವಾಕ್ಯವನ್ನು ಶ್ರೀಮತಿ ಬಿ.ಟಿ.ಲಲಿತಾ ನಾಯಕರು ಬರೆದ 'ಬಿದಿರು ಮಳೆ ಕಂಟಿಯಲಿ ' ಕವನ ಸಂಕಲನದಿಂದ ಉಆಯ್ದುಕೊಳ್ಳಲಾದ 'ಭರವಸೆ ' ಎನ್ನುವ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :ಮನುಷ್ಯ ಸ್ವಾರ್ಥದಲ್ಲಿ ಮುಳುಗಿ ನೈಜತೆಯನ್ನು ಮರೆಯುತ್ತಿದ್ದಾನೆ. ಪ್ರಕೃತಿಯನ್ನು ನಾಶ ಮಾಡುತ್ತಿದ್ದಾನೆ ಎಂದು ಕೋಗಿಲೆಯು ಮಲ್ಲಿಗೆಗೆ ಹೇಳುತ್ತ ಆದರೂ ನೀನು ನಿರಾಶನಾಗಬೇಡ, ಮಾವು ಮಲ್ಲಿಗೆ ದುಂಬಿಯ ಝೇಂಕಾರವೂ ,ಅದರ ಜೊತೆಗೆ ಕವಿಕಲ್ಪನೆಯ ಗಾನ ಲಹರಿಯೂ ಅಲ್ಲಲ್ಲಿ ಕೇಳಿ ಬರುವುದು. ಏನೆಂದರೂ ,ಹೀಗಿದ್ದರೂ ಈ ಭೂಮಿ ಬರಡಲ್ಲ. ಅಮರ ಪ್ರೇಮದ ಒರತೆ ಅಲ್ಲಲ್ಲಿ ,ಕೆಲವೆಡೆಯಾದರೂ ಹರಿಯುವುದು ಎಂದು ಸಮಾಧಾನ ಮಾಡಿತು ಎಂದು ಕವಯಿತ್ರಿ ಹೇಳಿದ್ದಾರೆ.

ಸ್ವಾರಸ್ಯ : ಈ ಭೂಮಿ ಬರಡಲ್ಲ ,ಅಮರ ಪ್ರೇಮದ ಒರತೆ ಎನ್ನುವ ಮೂಲಕ ಭೂಮಿಯ ಸಂಜೀವಿನೀ ಗುಣ ಇಲ್ಲಿ ವ್ಯಕ್ತವಾಗಿದೆ.

ಹೊಂದಿಸಿ ಬರೆಯಿರಿ.

| | |
|---|---|
| ೧. ಬಾನ ಸಂಚಾರಿಣಿ | ಝೇಂಕಾರ |
| ೨. ಭಿತ್ತಿ | ನೈಜತೆ |
| ೩. ಭ್ರಮರ | ಕವಿಕಲ್ಪನೆ |
| ೪. ಕೃತಕತೆ | ಕೋಗಿಲೆ |
| ೫. ಗಾನಲಹರಿ | ಗೋಡೆ |
| ೬. | ಸಿರಿಮುಡಿ |

ಉತ್ತರ : ಭಾನಸಂಚಾರಿಣಿ- ಕೋಗಿಲೆ ಭಿತ್ತಿ-ಗೋಡೆ ಭ್ರಮರ-ಝೇಂಕಾರ ಕೃತಕತೆ- ನೈಜತೆ ಗಾನಲಹರಿ-ಕವಿಕಲ್ಪನೆ

# ಪದ್ಯ - ೫ ವಚನಾಮೃತ

### ಕೃತಿಕಾರರ ಪರಿಚಯ



ಅಲ್ಲಮಪ್ರಭು : ೧೨ನೇ ಶತಮಾನದ ಪ್ರಸಿದ್ಧ ಚಿಂತಕ .ಇವರು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ. ಇವರು ಬಸವಣ್ಣನವರು ಸ್ಥಾಪಿಸಿದ ಶೂನ್ಯಪೀಠದ ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವರು. ಗುಹೇಶ್ವರಾ ಎಂಬುದು ಇವರ ವಚನಗಳ ಅಂಕಿತವಾಗಿದೆ.



ಆಯ್ದುಕ್ಕಿ ಮಾರಯ್ಯ : ಇವರ ಕಾಲ ಸುಮಾರು ೧೧೬೦. ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದುಕ್ಕಿ ಲಕ್ಕಮ್ಮನ ಪತಿ. ಇವರ ೩೨ ವಚನಗಳು ಲಭ್ಯವಿವೆ. ಇವರ ಅಂಕಿತ ಅಮರೇಶ್ವರ ಲಿಂಗ .



ಅಮುಗೆ ರಾಯಮ್ಮ : ಇವರ ಕಾಲ ಸುಮಾರು ೧೧೬೦. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬರು. ಇವರು ಸೊನ್ನಲಿಗೆಯವರು. ಇವರ ಅಂಕಿತನಾಮ ಅಮುಗೇಶ್ವರ .



ಶಿವಶರಣೆ ಲಿಂಗಮ್ಮ : ಇವರ ಕಾಲ ಕ್ರಿ.ಶ. ಸುಮಾರು ೧೧೬೦. ೧೨ ನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬರು. ಇವರ ಅಂಕಿತನಾಮ ಅಪ್ಪಣ್ಣಪ್ರಿಯ ಚನ್ನಬಸವಣ್ಣ .

### ಒಂದು ವಾಕ್ಯದಲ್ಲಿ ಉತ್ತರಿಸಿ .

೧. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ.

ಉ: ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಹೇಳಬೇಕಿದೆ.

೨. ಕಾಯಕದಲ್ಲಿ ನಿರತನಾದವನು ಯಾವುದನ್ನು ಮರೆಯಬೇಕು ?

ಉ : ಕಾಯಕದಲ್ಲಿ ನಿರತನಾದವನು ಗುರುದರ್ಶನ ಮತ್ತು ಲಿಂಗಪೂಜೆಯನ್ನು ಮರೆಯಬೇಕು.

೩. ಆಯ್ದುಕ್ಕಿ ಮಾರಯ್ಯ ಅವರ ಪ್ರಕಾರ ಕೈಲಾಸವೆಂದರೆ ಯಾವುದು ?

ಉ : ಆಯ್ದುಕ್ಕಿ ಮಾರಯ್ಯ ಅವರ ಪ್ರಕಾರ ಕಾಯಕವೇ ಕೈಲಾಸ .

೪. ಕಾಗೆಯು ಏನಾಗಲು ಸಾಧ್ಯವಿಲ್ಲ ?

ಉ : ಕಾಗೆಯು ಕೋಗಿಲೆಯಾಗಲು ಸಾಧ್ಯವಿಲ್ಲ.

೫. ಯಾರ ಮುಖವನ್ನು ನೋಡಲಾಗದು?

ಉ : ಅರಿವು, ಆಚಾರ ಸಮ್ಯಜ್ಞಾನವನರಿಯದೆ ನಾಮವ ಹೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು .

೬. ಶರಣರು ಕೆಡಿಸುವ ನಿದ್ದೆಯನ್ನು ಹೇಗೆ ಗೆದ್ದಿದ್ದಾರೆ ?

ಉ: ಶರಣರು ಕೆಡಿಸುವ ನಿದ್ದೆಯನ್ನು ಯೋಗ ಸಮಾಧಿಯ ಮಾಡಿ ಗೆದ್ದಿದ್ದಾರೆ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .**

೧.ಶ್ರೀ ಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲಕಟ್ಟಳೆಗೆ ಹೇಗೆ ಒಳಪಟ್ಟಿದೆ ?

ಉ : ಕೃತಯುಗದಲ್ಲಿ ಗುರುವು ಶಿಷ್ಯನಿಗೆ ಬಡಿದು ಶಿಕ್ಷಿಸಿ ಬುದ್ಧಿಯನ್ನು ಕಲಿಸಿದರೆ ಅದನ್ನು ಶಿಷ್ಯನು ಮಹಾಪ್ರಸಾದವೆಂದು ಸ್ವೀಕರಿಸುತ್ತಿದ್ದನು . ತ್ರೇತಾಯುಗದಲ್ಲಿ ಗುರುವು ಬೈದು ಬುದ್ಧಿಯನ್ನು ಕಲಿಸಿದರೆ ಶಿಷ್ಯನು ಮಹಾ ಪ್ರಸಾದವೆಂದು ಸ್ವೀಕರಿಸುತ್ತಿದ್ದನು. ಅದರಂತೆಯೇ ದ್ವಾಪರ ಯುಗದಲ್ಲಿ ಗುರುವು ಗದರಿಸಿ ಬುದ್ಧಿಯನ್ನು ಕಲಿಸಿದರೆ ಶಿಷ್ಯನು ಮಹಾಪ್ರಸಾದವೆಂದು ಸ್ವೀಕರಿಸುತ್ತಿದ್ದನು. ಆದರೆ ಈಗ ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಕಲಿಸಿದರೆ ಮಾತ್ರ ಅದನ್ನು ಶಿಷ್ಯನು ಮಹಾಪ್ರಸಾದವೆಂದು ಸ್ವೀಕರಿಸುತ್ತಾನೆ . ಹೀಗೆ ಗುರುವು ಶಿಷ್ಯರಿಗೆ ಬುದ್ಧಿ ಕಲಿಸುವುದು ಕಾಲದ ಕಟ್ಟಳೆಗೆ ಒಳಪಟ್ಟಿದೆ ಎಂದು ಅಲ್ಲಮಪ್ರಭು ವಿವರಿಸಿದ್ದಾರೆ.

೨. ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾನೆ ?

ಉ : ಮನುಷ್ಯನಿಗೆ ಕಾಯಕವೇ ಮುಖ್ಯ .ಕಾಯಕದಲ್ಲಿ ತೊಡಗಿದಾಗ ಗುರುದರ್ಶನವನ್ನಾದರೂ ,ಲಿಂಗಪೂಜೆಯನ್ನಾದರೂ ಮರೆಯಬೇಕು. ಜಂಗಮರು ಮುಂದೆ ನಿಂತಿದ್ದರೂ ಮೊದಲು ಕಾಯಕ ಮಾಡುವುದಕ್ಕೆ ಗಮನ ನೀಡಬೇಕು. ಕಾಯಕವು ಗುರು ,ಲಿಂಗ ,ಜಂಗಮಗಳನ್ನು ಮೀರಿದ್ದು ಕಾಯಕವೇ ಕೈಲಾಸ ಎಂದು ಭಾವಿಸಬೇಕು. ಕಾಯಕದಲ್ಲಿ ಸರ್ವಸ್ವವನ್ನೂ ಕಾಣಬೇಕೆಂಬುದು ಆಯ್ದಕ್ಕಿ ಮಾರಯ್ಯನ ವಚನದ ಆಶಯವಾಗಿದೆ.

೩. ಅರಿವು ,ಆಚಾರ ,ಸಮ್ಯಜ್ಞಾನದ ಬಗ್ಗೆ ಅಮುಗೆರಾಯಮ್ಮನ ಅನಿಸಿಕೆ ಏನು ?

ಉ : ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಗಳಲ್ಲಿ ವಿಶೇಷ ಗುಣಗಳು ಸಹಜವಾಗಿರುತ್ತವೆ. ಆದರೂ ಸಹ ಕಾಗೆಯ ಮರಿ ಎಂದಿಗೂ ಕೋಗಿಲೆಯಾಗಲು ಸಾಧ್ಯವಿಲ್ಲ. ಆಡಿನ ಮರಿ ಆನೆಯಾಗಲು ಸಾಧ್ಯವಿಲ್ಲ. ಕಾಡುನಾಯಿ (ಸೀಳುನಾಯಿ ) ಸಿಂಹದ ಮರಿಯಾಗಲು ಸಾಧ್ಯವಿಲ್ಲ. ಅರಿವು ,ಸದಾಚಾರ ಹಾಗೂ ಒಳ್ಳೆಯ ವಿವೇಕ ಇಲ್ಲದೆ ಕೇವಲ ನಾಮವನ್ನು ಹಾಕಿಕೊಂಡು ಮೆರೆಯುವ ಗಾವಿಲರ ಮುಖವನ್ನು ನೋಡಲಾಗದು .ಅರಿವು ,ಆಚಾರ ಸಮ್ಯಜ್ಞಾನದಿಂದ ಭಗವಂತನ ಸಾಕ್ಷಾತ್ಕಾರ ಪಡೆಯಬಹುದು ಎಂದು ಅಮುಗೆರಾಯಮ್ಮ ಹೇಳಿದ್ದಾಳೆ.

೪. ಬುದ್ಧಿಹೀನರು ಹೇಗೆ ವಿದ್ಯೆಯನ್ನು ಸಂಪಾದಿಸುತ್ತಾರೆ ?

ಉ : ವಿದ್ಯೆ ಸಾಧಕನ ಸೊತ್ತು. ವಿದ್ಯೆವಿಹೀನನ ಬದುಕು ನಿರರ್ಥಕ . ಆದರೆ ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು ,ಪರಿಶ್ರಮಗಳು ವಿದ್ಯೆವಿನಯವನ್ನು ತಂದುಕೊಡದೆ ಸಂಪಾದನೆಗೆ ಮಾತ್ರ ದಾರಿ ಮಾಡಿಕೊಡುತ್ತಿವೆ. ಬುದ್ಧಿವಿಹೀನರು ಕಾಯಕ ಮಾಡದೆ ಕೇವಲ ದೈಹಿಕ ದಂಡನೆ ಮಾಡಿ ಮನವನ್ನು ಶುದ್ಧಿ ಮಾಡಿಕೊಳ್ಳದೆ ನಿದ್ದೆಗೆಟ್ಟು ವಿದ್ಯೆ ಸಂಪಾದಿಸುತ್ತಾರೆ.

೫. ಶಿವಶರಣರು ಜಗವನ್ನೇ ಗೆದ್ದಿಹ ವಿಚಾರದಲ್ಲಿ ಲಿಂಗಮ್ಮನ ಅನಿಸಿಕೆ ಏನು ?

ಉ: ವಿದ್ಯೆ ಸಾಧಕನ ಸೊತ್ತು. ವಿದ್ಯೆವಿಹೀನನ ಬದುಕು ನಿರರ್ಥಕ . ಆದರೆ ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು ,ಪರಿಶ್ರಮಗಳು ವಿನಯವನ್ನು ತಂದುಕೊಡದೆ ಸಂಪಾದನೆಗೆ ಮಾತ್ರ ದಾರಿ ಮಾಡಿಕೊಡುತ್ತಿವೆ.

ಆದರೆ ನಮ್ಮ ಶರಣರು ಕಾಮ ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ,ಜಗತ್ತಿನ ಮೇಲಿನ ವ್ಯಾಮೋಹವನ್ನು ತೊರೆದು ತಮ್ಮ ತಮ್ಮ ಕಾಯಕದ ಮೂಲಕ ನಿತ್ಯಸುಖಿಗಳಾಗಿ ಜಗತ್ತನ್ನು ಗೆದ್ದಿದ್ದಾರೆ. ನಿತ್ಯಸುಖಿಗಳಾಗಿದ್ದಾರೆ ಎನ್ನುವುದು ವಚನಕಾರ್ತಿ ಲಿಂಗಮ್ಮನವರ ಅನಿಸಿಕೆಯಾಗಿದೆ.

**ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ .**

೧. ವಚನಾಮೃತದಲ್ಲಿ ವ್ಯಕ್ತವಾಗಿರುವ ಕಾಯಕ ತತ್ವದ ಮಹತ್ವವನ್ನು ವಿವರಿಸಿ .

ಉ : ಮನುಷ್ಯನಿಗೆ ಕಾಯಕವೇ ಮುಖ್ಯ .ಕಾಯಕದಲ್ಲಿ ತೊಡಗಿದಾಗ ಗುರುದರ್ಶನವನ್ನಾದರೂ ಲಿಂಗಪೂಜೆಯಾದರೂ ಮರೆಯಬೇಕು. ಜಂಗಮರು ಮುಂದೆ ನಿಂತಿದ್ದರೂ ಮೊದಲು ಕಾಯಕ ಮಾಡುವುದಕ್ಕೆ ಗಮನ ನೀಡಬೇಕು. ಏಕೆಂದರೆ ಕಾಯಕವು ಗುರು ,ಲಿಂಗ ,ಜಂಗಮಗಳನ್ನು ಮೀರಿದ್ದು ' ಕಾಯಕವೇ ಕೈಲಾಸ ' ಎಂದು ಭಾವಿಸಬೇಕು. ಕಾಯಕದಲ್ಲಿ ಸರ್ವಸ್ವವನ್ನು ಕಾಣಬೇಕೆಂಬುದು ಆಯ್ದಕ್ಕಿ ಮಾರಯ್ಯನವರು ಕಾಯಕದ ಮಹತ್ವ ಕುರಿತು ಹೇಳಿದ್ದಾರೆ.
ವಿದ್ಯೆ ಸಾಧಕನ ಸೊತ್ತು .ವಿದ್ಯೆ ವಿಹೀನನ ಬದುಕು ನಿರರ್ಥಕ . ಆದರೆ ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು ಪರಿಶ್ರಮಗಳು ವಿನಯವನ್ನು ತಂದು ಕೊಡದೆ ಸಂಪಾದನೆಗೆ ದಾರಿ ಮಾಡಿಕೊಡುತ್ತಿವೆ.
ಬುದ್ಧಿವಿಹೀನರು ಕಾಯಕ ಮಾಡದೆ ಕೇವಲ ದೈಹಿಕ ದಂಡನೆ ಮಾಡಿ, ಮನವನ್ನು ಶುದ್ಧಿ ಮಾಡಿಕೊಳ್ಳದೆ ನಿದ್ದೆಗೆಟ್ಟು ವಿದ್ಯೆ ಸಂಪಾದಿಸುತ್ತಾರೆ. ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು ಪರಿಶ್ರಮಗಳು ವಿದ್ಯೆ ,ವಿನಯವನ್ನು ತಂದು ಕೊಡದೆ ,ಸಂಪಾದನೆಗೆ ದಾರಿ ಮಾಡಿಕೊಡುತ್ತಿವೆ. ಆದರೆ ನಮ್ಮ ಶರಣರು ಕಾಮ ,ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ,ಜಗತ್ತಿನ ಮೇಲಿನ ವ್ಯಾಮೋಹವನ್ನು ತೊರೆದು ತಮ್ಮ ತಮ್ಮ ಕಾಯಕದ ಮೂಲಕ ನಿತ್ಯ ಸುಖಿಗಳಾಗಿ ಜಗತ್ತನ್ನು ಗೆದ್ದಿದ್ದಾರೆ. ನಿತ್ಯ ಸುಖಿಗಳಾಗಿದ್ದಾರೆ ಎನ್ನುವುದು ವಚನಕಾರ್ತಿ ಲಿಂಗಮ್ಮನವರ ಕಾಯಕದ ಕುರಿತಾದ ಅನಿಸಿಕೆಯಾಗಿದೆ.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ .
೧. " ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ಬೆರಗಾದೆ. "
ಉ : ಈ ಮೇಲಿನ ವಾಕ್ಯವನ್ನು ಡಾ .ಎಂ .ಎಂ . ಕಲ್ಬುರ್ಗಿಯವರು ಸಂಪಾದಿಸಿರುವ ಸಮಗ್ರ ವಚನ ಸಂಪುಟಗಳಿಂದ ಆಯ್ದುಕೊಳ್ಳಲಾಗಿರುವ ವಚನಾಮೃತ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಅಲ್ಲಮಪ್ರಭು ಹೇಳಿದ್ದಾರೆ.
ಸಂದರ್ಭ : ಗುರುವಿಗೆ ಬ್ರಹ್ಮ ,ವಿಷ್ಣು ,ಮಹೇಶ್ವರರ ಸ್ಥಾನ ನೀಡಿ ಗೌರವಿಸಲಾಗಿದೆ. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ದಂಡಿಸಿ ಬುದ್ಧಿ ಹೇಳುತ್ತಿದ್ದರು . ತ್ರೇತಾಯುಗದಲ್ಲಿ ಬೈದು ಬುದ್ಧಿ ಹೇಳುವಂತೆ ಮೊದಲಿದ್ದ ಸ್ಥಿತಿ ಬದಲಾಯಿತು. ದ್ವಾಪರಯುಗದಲ್ಲಿ ಗುರುವು ಶಿಷ್ಯನಿಗೆ ಗದರಿಸಿ ಬುದ್ಧಿ ಹೇಳುತ್ತಿದ್ದರೆ ಈಗ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿ ಹೇಳುವ ಸ್ಥಿತಿ ಬಂದೊದಗಿದೆ ಎಂದು ಹೇಳುವಾಗ ಅಲ್ಲಮಪ್ರಭು ಮೇಲಿನಂತೆ ಹೇಳಿದ್ದಾರೆ.
ಸ್ವಾರಸ್ಯ : ಶಿಷ್ಯನಿಗೆ ಸಂಸ್ಕಾರ ,ವಿದ್ಯೆ ವಿನಯ ಹಾಗೂ ಬದುಕಿನ ಮಾರ್ಗವನ್ನು ನೀಡುವವನು ಗುರು .ಪರಿವರ್ತನೆ ಜಗದ ನಿಯಮ . ಕಾಲಗತಿಯಲ್ಲಿ ಎಲ್ಲವೂ ಪರಿವರ್ತನೆಗೊಳಪಡುತ್ತವೆ ಎಂಬುದನ್ನು ಗುರುವಿನ ಸ್ಥಾನ ಮತ್ತು ಶಿಷ್ಯನ ಕಲಿಕಾ ಪ್ರವೃತ್ತಿಗಳು ನಾಲ್ಕು ಯುಗದಲ್ಲಿ ಹೇಗೆ ಪರಿವರ್ತನೆಯಾಗಿವೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. "ನಾಮವನೊತ್ತುಕೊಂಡು ತಿರುಗುವ ಗಾವಿಲರ ಮುಖವ ನೋಡಲಾಗದು "
ಉ : ಈ ಮೇಲಿನ ವಾಕ್ಯವನ್ನು ಡಾ .ಎಂ .ಎಂ . ಕಲ್ಬುರ್ಗಿಯವರು ಸಂಪಾದಿಸಿರುವ ಸಮಗ್ರ ವಚನ ಸಂಪುಟಗಳಿಂದ ಆಯ್ದುಕೊಳ್ಳಲಾಗಿರುವ ವಚನಾಮೃತ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ೧೨ ನೇ ಶತಮಾನದ ವಚನಕಾರ್ತಿ ಅಮುಗೆರಾಯಮ್ಮ ಹೇಳಿದ್ದಾರೆ.
ಸಂದರ್ಭ : ಆಡಿನ ಮರಿ ಆನೆಯಾಗುವುದಿಲ್ಲ . ಕಾಗೆಯ ಮರಿ ಕೋಗಿಲೆಯಾಗುವುದಿಲ್ಲ . ಸೀಳು ನಾಯಿ ಸಿಂಹದ ಮರಿಯಾಗುವುದಿಲ್ಲ. ಕೇವಲ ಹೆಸರಿಟ್ಟುಕೊಂಡು ತಿರುಗಿದ ಮಾತ್ರಕ್ಕೆ ಮೂರ್ಖ ಜ್ಞಾನಿಯಾಗುವುದಿಲ್ಲ ಎಂದು ಹೇಳುವಲ್ಲಿ ವಚನಕಾರ್ತಿಯವರು ಮೇಲಿನಂತೆ ಹೇಳಿದ್ದಾರೆ.
ಸ್ವಾರಸ್ಯ : ಪ್ರಕೃತಿಯಲ್ಲಿರುವ ಪ್ರತೀ ಜೀವಿಗಳಲ್ಲಿಯೂ ಒಂದೊಂದು ವಿಶೇಷ ಗುಣವಿದ್ದರೂ ಒಂದರ ವಿಶೇಷ ಗುಣವನ್ನು ಇನ್ನೊಂದು ಅನುಕರಿಸಲು ಸಾಧ್ಯವಿಲ್ಲ. ಅದರಂತೆಯೇ ಮಾನವನೂ ಕೂಡ ಹೊರನೋಟಕ್ಕೆ ಜ್ಞಾನಿಯೆನಿಸಿದರೆ ಭಗವಂತನ ಸಾಕ್ಷಾತ್ಕಾರವಾಗುವುದಿಲ್ಲ. ನಿಜವಾದ ಅರಿವು ,ಆಚಾರ ,ಸಮ್ಯಜ್ಞಾನದಿಂದ ಭಗವಂತನ ಸಾಕ್ಷಾತ್ಕಾರವಾಗುವುದು.

೩. “ ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.”

ಉ: ಈ ಮೇಲಿನ ವಾಕ್ಯವನ್ನು ಡಾ .ಎಂ .ಎಂ . ಕಲ್ಬುರ್ಗಿಯವರು ಸಂಪಾದಿಸಿರುವ ಸಮಗ್ರ ವಚನ ಸಂಪುಟಗಳಿಂದ ಆಯ್ದುಕೊಳ್ಳಲಾಗಿರುವ ವಚನಾಮೃತ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ವಚನಕಾರ ಆಯ್ದುಕ್ಕಿ ಮಾರಯ್ಯನವರು ಹೇಳಿದ್ದಾರೆ.

ಸಂದರ್ಭ : ಕಾಯಕದಲ್ಲಿ ನಿರತನಾಗಿದ್ದಾಗ ಗುರುದರ್ಶನವಾದರೂ ಅಥವಾ ಲಿಂಗಪೂಜೆಯೇ ಇದ್ದರೂ ಮರೆಯಬೇಕು. ಜಂಗಮನೇ ಸ್ವತಃ ನಿಂತಿದ್ದರೂ ಕಾಯಕವನ್ನು ಅಲ್ಲಿಗೆ ನಿಲ್ಲಿಸಬಾರದು ಎಂದು ಕಾಯಕದ ಮಹತ್ತ್ವ ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಕಾಯಕವೇ ಕೈಲಾಸ .ಕಾಯಕದಲ್ಲಿಯೇ ಸರ್ವಸ್ವವನ್ನೂ ಕಾಣಬಹುದು . ಇದು ಶ್ರೇಷ್ಠ ಹಾಗೂ ಸಾರ್ವಕಾಲಿಕ ಸತ್ಯ . ಕರ್ತವ್ಯ ನಿಷ್ಠೆ ಬದ್ಧತೆಗೆ ಆದ್ಯತೆ ನೀಡಬೇಕು ಎಂಬುದು ಈ ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. “ ಕಾಯಕವನೆ ಪ್ರಸಾದ ಕಾಯಕ ಮಾಡಿ ಸಲಹಿದರು .”

ಉ : ಈ ಮೇಲಿನ ವಾಕ್ಯವನ್ನು ಡಾ .ಎಂ .ಎಂ . ಕಲ್ಬುರ್ಗಿಯವರು ಸಂಪಾದಿಸಿರುವ ಸಮಗ್ರ ವಚನ ಸಂಪುಟಗಳಿಂದ ಆಯ್ದುಕೊಳ್ಳಲಾಗಿರುವ ವಚನಾಮೃತ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಶಿವಶರಣೆ ಲಿಂಗಮ್ಮನವರು ಹೇಳಿದ್ದಾರೆ.

ಸಂದರ್ಭ : ಮನವ ಗೆದ್ದೆನೆಂದು ದೇಹವನ್ನು ದಂಡಿಸಿ ನಿದ್ದೆಯನ್ನು ಮರೆತು ವಿದ್ಯೆಯನ್ನು ಕಲಿತಿಹೆನೆಂಬ ಬುದ್ಧಿಹೀನತರೇ ಕೇಳಿರಿ. ಶರಣರು ತಮ್ಮ ಕಾಮ ,ಕ್ರೋಧ , ಮೊದಲಾದ ಅರಿಷಡ್ವರ್ಗಗಳನ್ನು ಗೆದ್ದು ಜಗದ ವ್ಯಾಮೋಹವನ್ನು ತೊರೆದು ಕಾಯಕವನ್ನೇ ನಂಬಿ ಕೆಡಿಸುವ ನಿದ್ರೆಯನ್ನೇ ಯೋಗ ಸಮಾಧಿಯ ಮಾಡಿ ಜ್ಞಾನ ಸಂಪಾದಿಸುವರು ಎಂದು ವಚನಕಾರರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಇಂದು ವಿದ್ಯೆಯನ್ನು ಗಳಿಸಲು ನಡೆಸುವ ಕಸರತ್ತು ,ಪರಿಶ್ರಮಗಳು ವಿದ್ಯೆ ವಿನಯವನ್ನು ತಂದುಕೊಡದೆ ಸಂಪಾದನೆಗೆ ದಾರಿಯಾಗುವವೆ .ಆದರೆ ಅಂದು ಶಿವಶರಣರು ಜೀವನವೆಂಬ ಪಾಠ ಶಾಲೆಯಲ್ಲಿ ಅರಿಷಡ್ವರ್ಗಗಳನ್ನು ಗೆದ್ದು ತಮ್ಮ ತಮ್ಮ ಕಾಯಕದ ಮೂಲಕ ನಿತ್ಯ ಸುಖಿಗಳಾಗಿ ಜೀವನವನ್ನು ಸಾರ್ಥಕಗೊಳಿಸಿದ್ದಾರೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರ ಪದವನ್ನು ಆರಿಸಿ ಬರೆಯಿರಿ.

೧.ತ್ರೇತಾಯುಗದಲ್ಲಿ ಶ್ರೀ ಗುರುವು ಶಿಷ್ಯನಿಗೆ ಶಿಷ್ಯನಿಗೆ ಬುದ್ಧಿಯನ್ನು ಕಲಿಸುತ್ತಿದ್ದ ರೀತಿ ಇದಾಗಿತ್ತು ....

ಅ)ಬಡಿದು ಆ )ಬೈದು ಇ) ವಂದಿಸಿ ಈ )ಝುಂಕಿಸಿ ಉತ್ತರ : (ಅ) ಬಡಿದು

೨. ಆಯ್ದುಕ್ಕಿ ಮಾರಯ್ಯನ ಅಂಕಿತನಾಮ -----

ಅ)ಗುಹೇಶ್ವರ ಆ)ಅಮುಗೇಶ್ವರ ಇ) ಅಮರೇಶ್ವರಲಿಂಗ ಈ) ಅಪ್ಪಣ್ಣಪ್ರಿಯ ಉತ್ತರ : ಆ)ಅಮುಗೇಶ್ವರ

೩. ಕೋಗಿಲೆ ಪದದ ತದ್ಭವ ರೂಪ ----

ಅ) ಕೋಕಿಲ ಆ)ಸಂಕಿಲಾ ಇ) ಕೋಕಿಲೆ ಈ ) ಕೋಕಿಲಾ ಉತ್ತರ : ಅ) ಕೋಕಿಲ

೪. ‘ ಜಂಗಮ ' ಪದದ ವಿರುದ್ಧಾರ್ಥಕ ಪದ -----

ಅ) ವಿರಕ್ತಿ ಆ)ವಿದ್ವಾಂಶ ಇ)ಗುರು ಈ) ಸ್ಥಾವರ ಉತ್ತರ : ಈ) ಸ್ಥಾವರ

೫. ತನುವ ಕರಗಿಸಿ ಕಾಯ ಮರುಗಿಸಿ ವಿದ್ಯೆಯನ್ನು ಕಲಿತಿಹೆ ಎನ್ನುವವರು ---

ಎ) ಶಿವಶರಣರು ಆ ) ಬುದ್ಧಿಹೀನರು ಇ)ಸಾಮಾನ್ಯರು ಡಿ) ವಿದ್ಯಾರ್ಥಿಗಳು ಉತ್ತರ : ಆ)ಬುದ್ಧಿಹೀನರು

ಗುಂಪಿಗೆ ಸೇರದ ಪದಗಳನ್ನು ಆರಿಸಿ ಬರೆಯಿರಿ.

೧. ಆನೆ ,ಗಜ ,ಹಯ ,ಕರಿ (ಹಯ )

೨. ಬಸವಣ್ಣ ,ಕನಕದಾಸರು , ಅಲ್ಲಮಪ್ರಭು ,ಅಮುಗೆರಾಯಮ್ಮ (ಕನಕದಾಸರು )


೩. ಕಾಮ ,ಕ್ರೋಧ ,ಧನ ,ಲೋಭ (ಧನ )

೪. ದ್ವಾಪರಯುಗ , ಕೃತಯುಗ ,ಸುವರ್ಣಯುಗ ,ಕಲಿಯುಗ (ಸುವರ್ಣಯುಗ)

೫. ತನು ,ದೇಹ , ಮಾಯ ,ಕಾಯ (ಮಾಯ )

# ಪದ್ಯ ೬ ಸೋಮೇಶ್ವರ ಶತಕ --- ಪುಲಿಗೆರೆ ಸೋಮನಾಥ

## ಕೃತಿಕಾರರ ಪರಿಚಯ




ಪುಲಿಗೆರೆ ಸೋಮನಾಥನ ಕಾಲ ಕ್ರಿ.ಶ.ಸುಮಾರು ೧೨೯೯. ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯವನು . ಪುಲಿಗೆರೆ ಸೋಮನಾಥನೆಂದೇ ಪ್ರಸಿದ್ಧಿ .ಇವನ ಅಂಕಿತ ಹರಹರಾ ಶ್ರೀ ಚೆನ್ನಸೋಮೇಶ್ವರಾ. ಕನ್ನಡ ರತ್ನಕರಂಡಕ ಕಾವ್ಯವನ್ನು ಚಂಪುವಿನಲ್ಲಿಯೂ ,ಸೋಮೇಶ್ವರ ಶತಕವನ್ನು ವೃತ್ತ ಛಂದಸ್ಸಿನಲ್ಲಿಯೂ ರಚಿಸಿದ್ದಾನೆ.

ಪ್ರಸ್ತುತ ಪದ್ಯಭಾಗವನ್ನು ಪುಲಿಗೆರೆ ಸೋಮನಾಥನು ಬರೆದ ,ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ಸೋಮೇಶ್ವರ ಶತಕ ಕೃತಿಯಿಂದ ಆಯ್ಕೆ ಮಾಡಲಾಗಿದೆ.

ಪದ್ಯದ ಅರ್ಥ

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸದ್ಧರ್ಮದಾ |
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು |
ಶ್ರುತಿಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ |
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ ||೧||

ನಮ್ಮ ಹಿತವನ್ನೇ ಬಯಸುವವ ನಿಜವಾದ ನೆಂಟ ,ಕಾಪಾಡುವವನೇ ತಂದೆ ,ಧರ್ಮ ಮಾರ್ಗದಲ್ಲಿ ನಡೆದುಕೊಂಡು ಹೋಗುವ ಹೆಂಡತಿಯೇ ನಮ್ಮ ಎಲ್ಲಾ ಸುಖಕ್ಕೂ ಕಾರಣ .ಒಂದಕ್ಷರವನ್ನಾದರೂ ಕಲಿಸಿದವನೇ ಆದರೂ ಅವನು ಗುರುವೇ .ವೇದಗಳನ್ನು ಪಠಿಸಿ ಅನುಷ್ಠಾನದಲ್ಲಿ ಇರುವವನೇ ಮುನಿ ,ಒಳ್ಳೆಯ ವಿದ್ಯೆಯೇ ಪುಣ್ಯ ಸಂಪಾದಿಸಲು ದಾರಿ , ಸದ್ಗತಿಗೆ ಮಗನೇ ಕಾರಣ .

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ |
ನಿಜ ಮಂತ್ರೀಶ್ವರ ತಂದೆ ತಾಯಿ ಸಲಹಲ್ ಬಲ್ಲಾತನೇ ಧಾರ್ಮಿಕಂ |
ಭಜಕಂ ದೈವ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ |
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚೆನ್ನಸೋಮೇಶ್ವರಾ ||

ದೇಶದ ಪ್ರಜೆಗಳ ಸರಿಯಾಗಿ ನೊಡಿಕೊಳ್ಳುವವನೇ ನಿಜವಾದ ಅರಸ ,ಲಂಚಕ್ಕೆ
ಆಸೆ ಮಾಡದೇ ತನ್ನ ಕೆಲಸಗಳನ್ನು ಮಾಡುವವನೇ ಯೋಗ್ಯನಾದ ಮಂತ್ರಿ ,ತಂದೆ ತಾಯಿಗಳನ್ನು ಎಲ್ಲಾ ಕಾಲಗಳಲ್ಲಿಯೂ ಸರಿಯಾಗಿ ನೋಡಿಯೊಳ್ಳುವವನೇ ಧರ್ಮಿಷ್ಠ . ದೇವರಲ್ಲಿ ನಂಬಿಕೆ ,ಭಕ್ತಿ ಇರುವವನೇ ದೈವ ಭಕ್ತ ,ಹೆದರಿಕೆ ಇಲ್ಲದೇ ಬಂದ ಕಷ್ಟಗಳನ್ನು ಎದುರಿಸುವವನೇ ನಿಜವಾದ ಸೈನಿಕ , ಸಚ್ಚಾರಿತ್ರ್ಯ ಇರುವವನೇ ದ್ವಿಜ. (ಬ್ರಾಹ್ಮಣ )

ಅತಿ ಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಪಾತ್ರನೂ |
ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತ ಲಂಚಕ್ಕೆ ಕೈ ನೀಡದಂ ||
ವ್ರತ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ |
ಪತಿಕಾರ್ಯಂ ವರ ಮಂತ್ರಿಯೈ ಹರಹರಾ ಶ್ರೀ ಚೆನ್ನಸೋಮೇಶ್ವರಾ |

ಅತಿ ಗಂಭೀರನೂ ಉದಾರನೂ ಧೀರನೂ ಮಹಾ ಸಂಪನ್ನನೂ ,ಸತ್ಪಾತ್ರನೂ ,ರೂಢಿಯಲ್ಲಿರುವ ಹಲವು- ಲಿಪಿ ಭಾಷೆಗಳನ್ನು ಬಲ್ಲವನೂ ಲಂಚಕ್ಕೆ ಕೈ ಚಾಚದವನೂ ವ್ರತವನ್ನು ಪಾಲಿಸುವವನೂ ಧರ್ಮಪರನೂ ವಿಚಾರವಂತನೂ ಸಾಮ ,ದಾನ , ಭೇದ ,ದಂಡ ಎಂಬ ಚತುರೋಪಾಗಳನ್ನು ಬಲ್ಲವನೂ ಒಡೆಯನ ಕಾರ್ಯದಲ್ಲಿ ನಿಷ್ಠೆ ಇರುವವನೂ ಆಗಿರುವವನೇ ನಿಜವಾಗಿ ಒಳ್ಳೆಯ ಮಂತ್ರಿ ಎಂದು ಸೋಮನಾಥ ಹೇಳಿದ್ದಾನೆ .

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಭೀಜಂ ಕೆಲಂ |
ಸಿಡಿದು ಪೆರ್ಮರನಾಗದೇ ಎಳಗರುಂ ಎತ್ತಾಗದೇ ಲೋಕದೊಳ್ |
ಮಿಡಿ ಪಣ್ಣಾಗದೆ ದೈವನೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ |
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರಾ |

ಚಂದ್ರನು ಒಂದೇ ಸಮನಾಗಿರುವುದಿಲ್ಲ .ಕಳೆಗುಂದುತ್ತಾನೆ .ಮತ್ತೆ ಹೆಚ್ಚಾಗುವುದಿಲ್ಲವೇ ?
ಆಲದ ಮರದ ಕೆಲವು ಬೀಜಗಳಾದರೂ ಸಿಡಿದು ,ಭೂಮಿಯಲ್ಲಿ ಚಿಗುರಿ ಹೆಮ್ಮರವಾಗುವುದಿಲ್ಲವೇ ? ಈ ಲೋಕದಲ್ಲಿ ಎಳೆಗರು ಬೆಳೆದು ಎತ್ತಾಗುವುದಿಲ್ಲವೇ ? ಮಿಡಿ ಹಣ್ಣಾಗುವುದಿಲ್ಲವೇ ? ದೇವರ ಕೃಪೆಯೊಂದಿದ್ದರೆ ಕಾಲಾಮತರದಲ್ಲಿ ಬಡವನು ಸಿರಿವಂತನಾಗುವುದಿಲ್ಲವೇ ? ಎಂದು ಹೇಳುವ ಮೂಲಕ ,ಜೀವನದಲ್ಲಿ ಯಾವುದೂ ನಿಶ್ಚಿತವಲ್ಲ . ಬದಲಾವಣೆ ಜಗದ ನಿಯಮ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ .
ಆಧಾರ - ಕನ್ನಡ ದೀವಿಗೆ ಬ್ಲಾಗ್ ಮತ್ತು ಒಪ್ಪಣ್ಣನ ಒಪ್ಪಂಗೊ ಬ್ಲಾಗ್

**ಒಂದು ವಾಕ್ಯದಲ್ಲಿ ಉತ್ತರಿಸಿ**

೧. ನಿಜವಾದ ಬಂಧು ಯಾರು ?
ಉ: ನಮ್ಮ ಹಿತವನ್ನೇ ಬಯಸುವವ ನಿಜವಾದ ಬಂಧು .

೨. ಧಾರ್ಮಿಕನೆಂದು ಯಾರನ್ನು ಕರೆಯಲಾಗಿದೆ ?
ಉ: ತಂದೆತಾಯಿಗಳನ್ನು ಎಲ್ಲಾ ಕಾಲಗಳಲ್ಲಿಯೂ ಸರಿಯಾಗಿ ನೋಡಿಕೊಳ್ಳುವವನೇ ಧರ್ಮಿಷ್ಠ .

೩. ರಾಜನಾದವನ ಕರ್ತವ್ಯವೇನು ?
ಉ: ಪ್ರಜೆಗಳನ್ನು ಪಾಲಿಸುವುದು ರಾಜನಾದವನ ಕರ್ತವ್ಯ .

೪. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ ?
ಉ: ಆಲದ ಮರದ ಕೆಲವು ಬೀಜಗಳಾದರೂ ಸಿಡಿದು , ಭೂಮಿಯಲ್ಲಿ ಚಿಗುರಿ ಹೆಮ್ಮರವಾಗುವುದು.

೫. ಪುಲಿಗೆರೆ ಸೋಮನಾಥನ ಅಂಕಿತ ನಾಮವೇನು ?
ಉ: ಪುಲಿಗೆರೆ ಸೋಮನಾಥನ ಅಂಕಿತನಾಮ ಹರಹರಾ ಶ್ರೀ ಚೆನ್ನ ಸೋಮೇಶ್ವರ .

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .**

೧. ಸುವ್ರತಿ ಮತ್ತು ಸುತನ ಬಗ್ಗೆ ಕವಿ ಏನು ಹೇಳಿದ್ದಾರೆ ?
ಉ: ವೇದಗಳನ್ನು ಪಠಿಸಿ ಅನುಷ್ಠಾನದಲ್ಲಿ ಇರುವವನೇ ಸುವ್ರತಿ. ಸದ್ಗತಿಗೆ ಮಗನೇ ಕಾರಣ ಎಂದು ಪುಲಿಗೆರೆ ಸೋಮನಾಥನು ಸುವ್ರತಿ ಮತ್ತು ಸುತನ ಬಗ್ಗೆ ಹೇಳಿದ್ದಾರೆ.

೨. ಭಟ ಮತ್ತು ದ್ವಿಜರ ಲಕ್ಷಣಗಳೇನು ?
ಉ: ಹೆದರಿಕೆ ಇಲ್ಲದೇ ಬಂದ ಕಷ್ಟಗಳನ್ನು ಎದುರಿಸುವವನೇ ನಿಜವಾದ ಸೈನಿಕ ,ಸೈನಿಕನಾದವನು ನಿರ್ಭೀತನಾಗಿರಬೇಕು. ಸಚ್ಚಾರಿತ್ರ್ಯ ಇರುವವನೇ ದ್ವಿಜ (ಬ್ರಾಹ್ಮಣ) ಎಂದು ಪುಲಿಗೆರೆ ಸೋಮನಾಥ ಹೇಳಿದ್ದಾರೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಐದು -ಆರು ವಾಕ್ಯಗಳಲ್ಲಿ ಉತ್ತರಿಸಿ.**

೧.ಶ್ರೇಷ್ಠ ಮಂತ್ರಿಯಲ್ಲಿರಬೇಕಾದ ಲಕ್ಷಣಗಳೇನು ?

ಉ: ಮಂತ್ರಿಯಾದವನು ಅತಿ ಗಂಭೀರನೂ ಉದಾರನೂ ಆಗಿರಬೇಕು. ಧೀರನೂ ಮಹಾಸಂಪನ್ನನೂ ,ಸತ್ಪಾತ್ರನೂ ಆಗಿದ್ದು ರೂಢಿಯಲ್ಲಿರುವ ಹಲವು ಲಿಪಿ - ಭಾಷೆಗಳನ್ನು ಬಲ್ಲವನೂ ಲಂಚಕ್ಕೆ ಕೈ ಚಾಚದವನೂ ವ್ರತವನ್ನು ಪಾಲಿಸುವವನೂ ಆಗಿರಬೇಕು. ಧರ್ಮಪರನೂ ವಿಚಾರವಂತನೂ ಸಾಮ, ದಾನ ,ಭೇದ ,ದಂಡ ಎಂಬ ಚತುರೋಪಾಯಗಳನ್ನು ಬಲ್ಲವನೂ ಒಡೆಯನ ಕಾರ್ಯದಲ್ಲಿ ನಿಷ್ಠೆ ಇರುವವನೂ ಆಗಿರುವವನೇ ನಿಜವಾಗಿ ಒಳ್ಳೆಯ ಮಂತ್ರಿ ಎಂದು ಸೋಮನಾಥ ಹೇಳಿದ್ದಾನೆ.

೨. ಬಡವ ಬಲ್ಲಿದನಾಗುವನು ಎಂಬುದಕ್ಕೆ ಕವಿ ನೀಡಿರುವ ನಿದರ್ಶನಗಳಾವುವು ?

ಉ: ಚಂದ್ರನು ಒಂದೇ ಸಮನಾಗಿರುವುದಿಲ್ಲ. ಕಳೆಗುಂದುತ್ತಾನೆ ಮತ್ತೆ ಹೆಚ್ಚಾಗುವುದಿಲ್ಲವೇ ? ಆಲದ ಮರದ ಕೆಲವು ಬೀಜಗಳಾದರೂ ಸಿಡಿದು ,ಭೂಮಿಯಲ್ಲಿ ಚಿಗುರಿ ಹೆಮ್ಮರವಾಗುವುದಿಲ್ಲವೇ ? ಈ ಲೋಕದಲ್ಲಿ ಎಳೆಗರು ಬೆಳೆದು ಎತ್ತಾಗುವುದಿಲ್ಲವೇ ?ಮಿಡಿ ಹಣ್ಣಾಗುವುದಿಲ್ಲವೇ ? ದೇವರ ಕೃಪೆಯೊಂದಿದ್ದರೆ ಕಾಲಾಂತರದಲ್ಲಿ ಬಡವನು ಸಿರಿವಂತನಾಗುವುದಿಲ್ಲವೇ ?ಎಂದು ಹೇಳುವ ಮೂಲಕ ,ಜೀವನದಲ್ಲಿ ಯಾವುದೂ ನಿಶ್ಚಿತವಲ್ಲ .ಬದಲಾವಣೆ ಜಗದ ನಿಯಮ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ಸದ್ಧರ್ಮದಾ ಸತಿಯೇ ಸರ್ವಕೆ ಸಾಧನಂ "

ಉ: ಈ ಮೇಲಿನ ವಾಕ್ಯವನ್ನು ಪುಲಿಗೆರೆ ಸೋಮನಾಥನು ಬರೆದ ,ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ಸೋಮೇಶ್ವರ ಶತಕ ಕೃತಿಯಿಂದ ಆಯ್ದು ಸೋಮೇಶ್ವರ ಶತಕ ಪದ್ಯಭಾಗದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ : ನಮ್ಮ ಹಿತವನ್ನೇ ಬಯಸುವವ ನಿಜವಾದ ನೆಂಟ. ಕಾಪಾಡುವವನೇ ತಂದೆ ,ಧರ್ಮ ಮಾರ್ಗದಲ್ಲಿ ನಡೆದುಕೊಂಡು ಹೋಗುವ ಹೆಂಡತಿಯೇ ನಮ್ಮ ಎಲ್ಲಾ ಸುಖಕ್ಕೂ ಕಾರಣ ಎಂದು ಪುಲಿಗೆರೆ ಸೋಮನಾಥ ಹೇಲಿದ್ದಾನೆ.

ಸ್ವಾರಸ್ಯ : ಸತಿಯ ಧರ್ಮಮಾರ್ಗದ ನಡೆಯಿಂದ ಮನೆಯ ಯಜಮಾನ ಮತ್ತು ಕುಟುಂಬವು ನೆಮ್ಮದಿಯಿಂದಿರುವುದು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. " ಅತಿಗಂಭೀರನುದಾರ ಧೀರನು "

ಉ: ಈ ಮೇಲಿನ ವಾಕ್ಯವನ್ನು ಪುಲಿಗೆರೆ ಸೋಮನಾಥನು ಬರೆದ ,ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ಸೋಮೇಶ್ವರ ಶತಕ ಕೃತಿಯಿಂದ ಆಯ್ದು ಸೋಮೇಶ್ವರ ಶತಕ ಪದ್ಯಭಾಗದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ : ಮಂತ್ರಿಯಾದವನು ಅತಿ ಗಂಭೀರನೂ ಉದಾರನೂ ಆಗಿರಬೇಕು. ಧೀರನೂ ಮಹಾಸಂಪನ್ನನೂ ,ಸತ್ಪಾತ್ರನೂ ಆಗಿದ್ದು ರೂಢಿಯಲ್ಲಿರುವ ಹಲವು ಲಿಪಿ ಭಾಷೆಗಳನ್ನು ಬಲ್ಲವನೂ ಲಂಚಕ್ಕೆ ಕೈಚಾಚದವನೂ ,ವ್ರತವನ್ನು ಪಾಲಿಸುವವನೂ ಆಗಿರಬೇಕು ಎಂದು ಮಂತ್ರಿಯ ಗುಣಲಕ್ಷಣ ವಿವರಿಸುವಾಗ ಪುಲಿಗೆರೆ ಸೋಮನಾಥ ಮೇಲಿನಂತೆ ಹೇಳಿದ್ದಾನೆ.

ಸ್ವಾರಸ್ಯ : ರಾಜನಿಗೆ ಆಡಳಿತದಲ್ಲಿ ನೆರವಾಗುವ ಮಂತ್ರಿಯ ಗುಣಲಕ್ಷಣಗಳನ್ನು ಮೇಲಿನ ವಾಕ್ಯವು ಸೂಚಿಸುವುದು.

೩. " ಉಡುರಾಜ ಕಳೆಗುಂದಿ ಪೆರ್ಚದಿಹನೇ "

ಉ: ಈ ಮೇಲಿನ ವಾಕ್ಯವನ್ನು ಪುಲಿಗೆರೆ ಸೋಮನಾಥನು ಬರೆದ ,ಕನ್ನಡ ಸಾಹಿತ್ಯ ಪರಿಷತ್ತು ಸಂಪಾದಿಸಿರುವ ಸೋಮೇಶ್ವರ ಶತಕ ಕೃತಿಯಿಂದ ಆಯ್ದು ಸೋಮೇಶ್ವರ ಶತಕ ಪದ್ಯಭಾಗದಿಂದ ಆಯ್ಕೆ ಮಾಡಲಾಗಿದೆ.

ಸಂದರ್ಭ : ಬಡತನವು ಶಾಶ್ವತವಲ್ಲ ಎಂದು ವಿವರಿಸುವಾಗ ಪುಲಿಗೆರೆ ಸೋಮನಾಥನು ಚಂದ್ರನು ಒಮ್ಮೆ ಕಳೆಗುಂದಿದರೂ ಮತ್ತೆ ಹುಣ್ಣಿಮೆ ಬಂದಾಗ ಪ್ರಕಾಶಮಾನವಾಗುವಂತೆ ,ಎಳೆಗರುವು ಎತ್ತಾಗುವಂತೆ ಬಡವನೂ ಸಹ ದೈವ ಕೃಪೆಯಿಂದ ಬಲ್ಲಿದನಾಗುವನು ಎಂದು ಹೇಳಿದ್ದಾರೆ.

ಸ್ವಾರಸ್ಯ : ದೇವರ ಅನುಗ್ರಹದಿಂದ ಕಾಲಾಂತರದಲ್ಲಿ ಸ್ವಾಭಾವಿಕವಾಗಿ ಆಗುವ ಬದಲಾವಣೆಗಳ ಬಗ್ಗೆ ಮೇಲಿನ ವಾಕ್ಯವು ಸೂಚಿಸುವುದು.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಮಿಡಿ : ಪಣ್ಣಾಗ್ದದೇ : : ಎಳಗರು : ----- (ಎತ್ತಾಗದೇ )

೨. ನ್ಯಗ್ರೋಧ : ಆಲದ ಮರ : : ಉಡುರಾಜ : --- (ಚಂದ್ರ )

೩. ಭಕ್ತಿಯುಳ್ಳ : ಆಗಮಸಂಧಿ : : ಕಳೆಗುಂದು : --- (ಆದೇಶಸಂಧಿ )

೪. ಧರ್ಮ : ಅಧರ್ಮ : : ಬಡವ : --- (ಬಲ್ಲಿದ )

೫. ಕಾರ್ಯ : ಕಜ್ಜ : : ಭಕ್ತಿ : --- ( ಬಕುತಿ)

ಅಭ್ಯಾಸ ಚಟುವಟಿಕೆ

೧. ಅಲಂಕಾರ ಎಂದರೇನು ?

ಉ: ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರಿಕ ಮಾತುಗಳೇ ಅಲಂಕಾರ . ಅಲಂಕಾರದಲ್ಲಿ ಶಬ್ದಾಲಂಕಾರ ಮತ್ತು ಅರ್ಥಾಲಂಕಾರ ಎಂಬ ಎರಡು ವಿಧಗಳಿವೆ.

೨. ಉಪಮಾಲಂಕಾರ ಎಂದರೇನು ? ನಿದರ್ಶನ ಸಹಿತ ವಿವರಿಸಿ .

ಉ: ಉಪಮಾ ಎಂದರೆ ಹೋಲಿಕೆ. ಯಾವ ಅಲಂಕಾರದಲ್ಲಿ ಉಪಮೇಯ ಉಪಮಾನಗಳೊಳಗೆ ಉಪಮಾ (ಹೋಲಿಕೆ ) ಇರುತ್ತದೆಯೋ ಆ ಅಲಂಕಾರವೇ ಉಪಮಾಲಂಕಾರ .

೩. ಪೂರ್ಣೋಪಮಾಲಂಕಾರ ಎಂದರೇನು ? ವಿವರಣೆ ನೀಡಿ .

ಉ: ಯಾವ ಉಪಮಾಲಂಕಾರದಲ್ಲಿ ಉಪಮೇಯ ,ಉಪಮಾನ ,ಉಪಮಾವಾಚಕ ಪದ, ಸಮಾನಧರ್ಮ ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ ಪೂರ್ಣೋಪಮಾಲಂಕಾರ.

ಉದಾ : ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.

ಉಪಮೇಯ : ಮನೋರಮೆಯ ಹಣೆ

ಉಪಮಾನ :ಬಾಲಚಂದ್ರ

ಉಪಮಾವಾಚಕ : ಅಂತೆ

ಸಮಾನಧರ್ಮ : ಆಕರ್ಷಣೀಯವಾಗಿತ್ತು .

ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರ ಹೆಸರಿಸಿ ಸಮನ್ವಯಿಸಿ

೧. ಮನೋರಮೆಯ ಮುಖ ಕಮಲದಂತೆ ಅರಳಿತು .

ಉಪಮೇಯ : ಮನೋರಮೆಯ ಮುಖ

ಉಪಮಾನ : ಕಮಲ

ಉಪಮಾವಾಚಕ : ಅಂತೆ

ಸಮಾನಧರ್ಮ : ಅರಳಿತು

ಅಲಂಕಾರ :ಉಪಮಾ

ಸಮನ್ವಯ : ಉಪಮೇಯವಾದ ಮನೋರಮೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

೨. ಗೀಜಗನ ಗೂಡುಗಳು ತೂಗುತೊಟ್ಟಿಲನಂತೆ ತೂಗುತ್ತಿದ್ದವು.

ಉಪಮೇಯ : ಗೀಜಗನ ಗೂಡುಗಳು

**ಉಪಮಾನ : ತೂಗುತೊಟ್ಟಿಲು**

**ಉಪಮಾವಾಚಕ : ಅಂತೆ**


**ಸಮಾನಧರ್ಮ : ತೂಗುವುದು**

**ಅಲಂಕಾರ : ಉಪಮಾ**

**ಸಮನ್ವಯ : ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೂಗುತೊಟ್ಟಿಲಿಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.**

# ಪದ್ಯ -೭ ಜೀವನ ದರ್ಶನ

## ಕೃತಿಕಾರರ ಪರಿಚಯ



ಶ್ರೀಪಾದ ರಾಜರು -

ಇವರ ಕಾಲ ಸುಮಾರು ೧೪೦೪ರಿಂದ ೧೫೦೨ .ಇವರು ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಗ್ರಾಮದವರು. ಇವರ ೮೨ ಕೀರ್ತನೆಗಳು ,೩ ಸುಳಾದಿಗಳು ,೧೫ ಉಗಾಭೋಗಗಳು ,೧ ದಂಡಕವು ಲಭ್ಯವಾಗಿವೆ.ಇವರ ಅಂಕಿತ ಶ್ರೀರಂಗ ವಿಠಲ .



ಗೋಪಾಲದಾಸರು

ಇವರ ಕಾಲ ಕ್ರಿ.ಶ. ೧೭೨೧ . ಇವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರುಕಲ್ಲಿನಲ್ಲಿ ಜನಿಸಿದರು. ಇವರ ಅಂಕಿತನಾಮ ಗೋಪಾಲವಿಠಲ .೯೬ ಕೀರ್ತನೆಗಳು ,೭೦ ಸುಳಾದಿಗಳು ,೨೧ ಉಗಾಭೋಗಗಳು ಉಪಲಬ್ಧವಾಗಿವೆ.




ವಿಜಯದಾಸರು

ಇವರ ಕಾಲ ಕ್ರಿ.ಶ. ಸುಮಾರು ೧೬೮೨ ರಿಂದ ೧೭೫೫ .ಇವರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚೇಕನಪರಿವಿಯಲ್ಲಿ ಜನಿಸಿದರು. ಇವರ ಅಂಕಿತನಾಮ ವಿಜಯವಿಠಲ .

### ಒಂದು ವಾಕ್ಯದಲ್ಲಿ ಉತ್ತರಿಸಿ.

೧. ವ್ಯಕ್ತಿಯು ಮುಕ್ತಿ ಪಡೆಯಲು ಏನು ಮಾಡಬೇಕು ?

ಉ : ವ್ಯಕ್ತಿಯು ಮುಕ್ತಿ ಪಡೆಯಲು ಅವನು ಭಕ್ತಿ ,ವಿರಕ್ತಿ ಮತ್ತು ಶಕ್ತಿಯನ್ನು ಹೊಂದಿರಬೇಕು .

೨. ಸುತನಲ್ಲಿ ಎಂತಹ ಗುಣವಿರಬೇಕು ?

ಉ: ಸುತನಲ್ಲಿ ಒಳ್ಳೆಯ ಗುಣಗಳಿರಬೇಕು .

೩. ದೇವನು ಯಾರ ಪಾತಕಗಳನ್ನು ಪರಿಹರಿಸುವನು ?

ಉ: ದೇವನು ಪ್ರೀತಿಯಿಂದ ತನ್ನ ಸ್ಮರಿಸುವವರ ಪಾತಕಗಳನ್ನು ಪರಿಹರಿಸುವನು.

೪. ದೇವನು ಯಾವ ಮಂತ್ರಕ್ಕೆ ಒಲಿಯುವನು ?

ಉ: ದೇವನು ಭಕ್ತಿ ಮಂತ್ರಕ್ಕೆ ಒಲಿಯುವನು .

೫.ಸದಾ ಹೃದಯದಲ್ಲಿ ವಾಸ ಮಾಡುವವನು ಯಾರು ?

ಉ: ಸದಾ ಹೃದಯದಲ್ಲಿ ವಾಸ ಮಾಡುವವನು ಶ್ರೀ ಹರಿ

### ನಾಲ್ಕು ಅಥವಾ ಐದು ವಾಕ್ಯಗಳಲ್ಲಿ ಉತ್ತರಿಸಿ.

೧. ವ್ಯಕ್ತಿ ಮುಕ್ತಿ ಪಡೆಯಲು ಹೇಗೆ ನಡೆದುಕೊಳ್ಳಬೇಕು?

ಉ: ವ್ಯಕ್ತಿಯು ಮುಕ್ತಿ ಪಡೆಯಬೇಕಾದರೆ ಮೊದಲು ಅವನಲ್ಲಿ ನಿಜವಾದ ಭಕ್ತಿ ಇರಬೇಕು , ವಿರಕ್ತಿಯ ಮನೋಭಾವವಿರಬೇಕು .ಯಾವುದೇ ವಸ್ತುವಿನ ಅಥವಾ ವಿಷಯದ ಬಗ್ಗೆ ಅತಿಯಾದ ವ್ಯಾಮೋಹ ಹೊಂದಿರಬಾರದು. ಆಸೆ ಆಮಿಷಗಳಿಗೆ ಒಳಗಾಗದೇ ವೈರಾಗ್ಯ ಹೊಂದಿರಬೇಕು. ಅಷ್ಟೇ ಅಲ್ಲದೇ ಎಲ್ಲ ವಿಧದ ಶಕ್ತಿಗಳನ್ನು ಮೈಗೂಡಿಸಿಕೊಂಡಿರಬೇಕು .

೨. ದೇವನು ತನ್ನ ಭಕ್ತರನ್ನು ಹೇಗೆ ರಕ್ಷಿಸಿದರೆಂದು ಗೋಪಾಲದಾಸರು ಹೇಳಿದ್ದಾರೆ ?

ಉ: ದೇವರು ಭಕ್ತ ಪರಾಧೀನ .ಭಕ್ತರು ಅಚಲವಾದ ದೃಢ ಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ದೇವರು ಯಾರು ತನ್ನನ್ನು ಪ್ರೀತಿಯಿಂದ ,ವಿಶ್ವಾಸದಿಂದ ಭಕ್ತಿಯಿಂದ ಸ್ಮರಿಸುವರೋ ಅಂತವರ ಪಾತಕಗಳನ್ನು ಪರಿಹರಿಸುವನು. ಅಕ್ರೂರನಿಗೆ ಪ್ರಿಯನಾದವನು ,ಶಂಖಚಕ್ರವನ್ನು ಧರಿಸಿದವನು.ಮೊಸಳೆಯ ಬಾಯಿಯಿಂದ ಭಕ್ತರನ್ನು ಕಾಪಾಡಿದವನು.ಅಜಮಿಳನನ್ನು ಸಲಹಿದವನು. ಭಜಿಸುವವರ ಕೈ ಬಿಡದವನು.ಅನಾಥಬಾಂಧವನು ,ಭಕ್ತರ ಮೊರೆಗೆ ಕ್ಷಣಮಾತ್ರದಲ್ಲಿ ಒದಗುವವನು ಎಂದು ಗೋಪಾಲದಾಸರು ತನ್ನ ಭಕ್ತರನ್ನು ರಕ್ಷಿಸುವ ದೇವರ ಬಗೆಯನ್ನು ವಿವರಿಸಿದ್ದಾರೆ.

೩.ಮುಕ್ತರಾಗಲು ಏನು ಮಾಡಬೇಕೆಂದು ವಿಜಯದಾಸರು ಹೇಳಿದ್ದಾರೆ ?

ಉ : ಮಾನವ ಜನ್ಮದ ಸಾರ್ಥಕತೆ ಮುಕ್ತಿ ಗಳಿಸುವಲ್ಲಿ ಇದೆ . ಇಹಲೋಕದಿಂದ ಮುಕ್ತನಾಗಲು ಸದಾ ಹರಿನಾಮ ಸ್ಮರಣೆ ಮಾಡಬೇಕು. ಆನಂದದಿಂದ ದೇವರ ಸ್ಮರಣೆ ಮಾಡಬೇಕು. ಜ್ಞಾನವೆಂಬ ನವರತ್ನದ ಮಂಟಪದ ಮಧ್ಯದಲ್ಲಿ ಗಾನಲೋಲನ ಕೂರಿಸಿ ಧ್ಯಾನದಿಂದ ಭಜಿಸಬೇಕು. ಭಕ್ತಿರಸ ಹೊಂದಿರಬೇಕು. ಮುಕ್ತನಾಗಬೇಕೆಂಬ ಭಾವನೆ ಇರಬೇಕು. ದೇವರ ನಾಮ ಬಿಡದೆ ಭಜಿಸಬೇಕು ಎಂದು ವಿಜಯದಾಸರು ಹೇಳಿದ್ದಾರೆ.

ಐದು -ಆರು ವಾಕ್ಯಗಳಲ್ಲಿ ಉತ್ತರಿಸಿ.

೧. ಶ್ರೀಪಾದರಾಜರು ನೀಡಿರುವ ಜೀವನ ಸಂದೇಶ ತಿಳಿಸಿ.

ಉ: ಮುಕ್ತಿಯನ್ನು ಪಡೆಯಲು ಭಕ್ತನಲ್ಲಿ ನಿಜವಾದ ಭಕ್ತಿ ಇರಬೇಕು. ಅವನು ವಿರಕ್ತಿಯನ್ನು ಹೊಂದಿರಬೇಕು. ಯಾವುದೇ ವಸ್ತುವಿನ ಅಥವಾ ವಿಷಯದ ಬಗ್ಗೆ ಅತಿಯಾದ ವ್ಯಾಮೋಹ ಹೊಂದಿರಬಾರದು. ಆಸೆ ಆಮಿಷಗಳಿಗೆ ಒಳಗಾಗದೇ ವೈರಾಗ್ಯ ಹೊಂದಿರಬೇಕು. ಸರ್ವ ವಿಧವಾದ ಶಕ್ತಿಯನ್ನು ಹೋಂದಿರಬೇಕು. ಸತಿಯು ಅನುಕೂಲಳಾಗಿದ್ದು ,ಸುತನಲ್ಲಿ ಗುಣವಿದ್ದು ಭಕ್ತನು ಮತಿವಂತನಾಗಿದ್ದು ಪರಸ್ಪರರಲ್ಲಿ ಒಮ್ಮತದ ಅಭಿಪ್ರಾಯವಿರಬೇಕು. ಜಪದ ಜಾಣ್ಮೆ ಅರಿತು ,ತಪದಲ್ಲಿ ನಿಯಮವನ್ನು ಭಕ್ತನು ಪಾಲಿಸಬೇಕು. ಸುಸಂಗವನ್ನು ಹೊಂದಿ ದುಸ್ಸಂಗದಿಂದ ಅವನು ದೂರವಿರಬೇಕು . ಭಗವಂತನನ್ನು ಬಿಡದೆ ಭಜಿಸಬೇಕು. ಎಂಬುದಾಗಿ ಶ್ರೀಪಾದರಾಜರು ಜೀವನ ಸಂದೇಶ ನೀಡಿದ್ದಾರೆ.

೨. ಗೋಪಾಲದಾಸರು ದೇವರು ಭಕ್ತಿಪ್ರಿಯ ಎಂಬುದನ್ನು ಹೇಗೆ ವಿವರಿಸಿದ್ದಾರೆ ?

ಉ: ದೇವರು ಭಕ್ತ ಪರಾಧೀನ .ಭಕ್ತರು ಅಚಲವಾದ ದೃಢಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ. ದೇವರು ಯಾರು ತನ್ನನ್ನು ಪ್ರೀತಿಯಿಂದ ,ವಿಶ್ವಾಸದಿಂದ ,ಭಕ್ತಿಯಿಂದ ಸ್ಮರಿಸುವರೋ ಅಂತವರ ಪಾತಕಗಳನ್ನು ಪರಿಹರಿಸುವನು. ಅಕ್ರೂರನಿಗೆ ಪ್ರಿಯನಾದವನು ,ಶಂಖಚಕ್ರವನ್ನು ಧರಿಸಿದವನು. ಮೊಸಳೆಯ ಬಾಯಿಯಿಂದ ಭಕ್ತರನ್ನು ಕಾಪಾಡಿದವನು. ಅಜಮಿಳನನ್ನು ಸಲಹಿದವನು. ಭಜಿಸುವವರ ಕೈ ಬಿಡದವನು. ಅನಾಥಬಾಂಧವನು. ಭಕ್ತರ ಮೊರೆಗೆ ಕ್ಷಣಮಾತ್ರದಲ್ಲಿ ಬಂದೊದಗುವವನು ಎಂದು ಗೋಪಾಲದಾಸರು ದೇವರು ಭಕ್ತಪ್ರಿಯ ಎಂಬುದಾಗಿ ವಿವರಿಸಿದ್ದಾರೆ. ದೇವರು ಸಕಲಗುಣಗಳಿಂದ ಪೂರ್ಣನಾದವನೂ ,ಸಕಲ ದೋಷಗಳಿಂದ ಮುಕ್ತನಾದವನೂ ಆಗಿದ್ದಾನೆ. ಸಕಲ ಆನಂದ ಪಾತ್ರನಾಗಿದ್ದು ಬಕುತಿ ಮಂತ್ರಕ್ಕೆ ಒಲಿಯುವವನಾಗಿದ್ದಾನೆ ಭಕ್ತರು

ಹೃದಯಕಮಲದಲ್ಲಿಟ್ಟು ಆರಾಧಿಸಿದರೆ ನಂಬಿ ಕೆಟ್ಟವರಿಲ್ಲ ಎಂಬ ಮಾತನ್ನು ಸತ್ಯಗೊಳಿಸುವಂತೆ ಕ್ಷಣಮಾತ್ರದಲ್ಲಿ ಭಕ್ತರಿಗೆ ಬಂದೊದಗುತ್ತಾನೆ. ಎಂದು ಗೋಪಾಲದಾಸರು ದೇವನು ಭಕ್ತಿಪ್ರಿಯ ಎಂದು ವಿವರಿಸಿದ್ದಾರೆ.

**ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ**

೧. ''ಸುಸಂಗ ಹಿಡಿಯಲೇ ಬೇಕು ದುಸ್ಸಂಗ ಬಿಡಲಿಬೇಕು ''.

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಂಪುಟದಿಂದ ಆರಿಸಲಾದ ಶ್ರೀಪಾದರಾಜರ ಕೀರ್ತನೆಗಳಿಂದ ಆರಿಸಲಾದ ಜೀವನ ದರ್ಶನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಮುಕ್ತಿಯನ್ನು ಬಯಸುವ ಮಾನವನು ಸರ್ವಶಕ್ತನಾಗಿದ್ದು ಲೌಕಿಕ ಸುಖಭೋಗಗಳಲ್ಲಿ ವೈರಾಗ್ಯ ಹೊಂದಿದವನಾಗಿರಬೇಕು. ಅವನಲ್ಲಿ ಜಪದ ಜಾಣ್ಮೆಯ ಜೊತೆಗೆ ತಪದ ನಿಯಮ ಬೇಕು. ಅಲ್ಲದೇ ಒಳ್ಳೆಯ ಜನರ ಸಹವಾಸದಿಂದ ಕೂಡಿದವನಾಗಿರಬೇಕು ಎಂದು ಕೀರ್ತನೆಕಾರರು ಹೇಳಿದ್ದಾರೆ.

ಸ್ವಾರಸ್ಯ : ಮುಕ್ತಿ ಪಡೆಯಬಯಸುವವನು ಒಳ್ಳೆಯವರ ಸಹವಾಸದಲ್ಲಿದ್ದು ದುಷ್ಟರಿಂದ ದೂರವಿರಬೇಕು ಎಂದು ಕೀರ್ತನೆಕಾರರು ಹೇಳಿದ್ದಾರೆ.

೨. ''ಅನಾದಿ ಮೊರೆಯ ಕೇಳಿ ಅನಿಮಿಷದೊಳು ಒದಗಿದಾತ ''

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಂಪುಟದಿಂದ ಆರಿಸಲಾದ ಗೋಪಾಲದಾಸರ ಕೀರ್ತನೆಗಳಿಂದ ಆರಿಸಲಾದ ಜೀವನ ದರ್ಶನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ದೇವರು ಭಕ್ತ ಪರಾಧೀನ .ಅನಾಥ ರಕ್ಷಕ .ಭಕ್ತರು ಅಚಲವಾದ ದೃಢಭಕ್ತಿಯಿಂದ ಮೊರೆಯಿಟ್ಟರೆ ಅವರ ಸಂಕಷ್ಟಗಳನ್ನು ಪರಿಹರಿಸುತ್ತಾನೆ ಎಂದು ಹೇಳುವ ಸಂದರ್ಭದಲ್ಲಿ ಕೀರ್ತನಕಾರರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಭಗವಂತನನ್ನು ಹೃದಯಕಮಲದಲ್ಲಿಟ್ಟು ಆರಾಧಿಸಿದರೆ ,ಪ್ರೀತಿಯಿಂದ ಕರೆದರೆ ಕ್ಷಣಮಾತ್ರದಲ್ಲಿ ಬಂದೊದಗುವನು .ನಂಬಿ ಕೆಟ್ಟವರಿಲ್ಲ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. ''ನಿನ್ನ ನಾಮ ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ ''

ಉ: ಈ ಮೇಲಿನ ವಾಕ್ಯವನ್ನು ದಾಸ ಸಾಹಿತ್ಯ ಸಂಪುಟದಿಂದ ಆರಿಸಲಾದ ವಿಜಯದಾಸರ ಕೀರ್ತನೆಗಳಿಂದ ಆರಿಸಲಾದ ಜೀವನ ದರ್ಶನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಮಾನವ ಜನ್ಮದ ಸಾರ್ಥಕತೆ ಮುಕ್ತಿಗಳಿಸುವುದರಲ್ಲಿ ಇದೆ. ಇಹಲೋಕದಿಂದ ಮುಕ್ತಿ ಪಡೆಯಲು ಸದಾ ಹರಿಯ ನಾಮಸ್ಮರಣೆ ಬೇಕು ಎಂದು ಹೇಳುವಾಗ ಕೀರ್ತನಕಾರರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಅಚಲವಾದ ದೃಢಭಕ್ತಿಯಿಂದ ದೈವ ಸಾಕ್ಷಾತ್ಕಾರವಾಗುವುದು. ಭಕ್ತಿ-ಭಕ್ತ ಒಂದಾದಾಗ ಮಾತ್ರ ಮುಕ್ತಿ ಸಾಧ್ಯ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಶ್ರೀಪಾದರು : ಅಬ್ಬೂರು : : ಗೋಪಾಲದಾಸರು : --- (ಮೊಸರುಕಲ್ಲು)

೨. ಜ್ಞಾನವೆಂಬೋ :ನವರತ್ನ : : ಭಕ್ತಿರಸವೆಂಬೋ : ---- (ಮುತ್ತುಮಾಣಿಕ್ಯ )

೩. ಹೃದಯ :ಎದೆ : : ಜ್ಞಾನ : --- (ಜಾಣ )

೪. ಗೋಪಾಲದಾಸರು : ಗೋಪಾಲವಿಠಲ : : ವಿಜಯದಾಸರು : ----- (ವಿಜಯವಿಠಲ )

೫. ಮೋದ : ಆನಂದ : : ರಮಣ : --- (ಪತಿ )

**ಈ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ.**

**ಸತಿ -ಪತ್ನಿ ,ಹೆಂಡತಿ ನಕ್ರ-ಮೊಸಳೆ ರಮಣ -ಪತಿ ,ಗಂಡ ಪಾತಕ -ಪಾಪ ,ಕೆಟ್ಟಕೆಲಸ ಮೋದ -ಸಂತೋಷ ಅನಾಥ-ದಿಕ್ಕಿಲ್ಲದವನು**

**ಕೊಟ್ಟಿರುವ ಪದಗಳಿಗೆ ತದ್ಭವ ರೂಪ ಬರೆಯಿರಿ.**

**ಮುಕ್ತಿ -ಮುಕುತಿ ಹೃದಯ-ಎದೆ ಪಕ್ಷಿ-ಹಕ್ಕಿ ಹಗೆ-ಪಗೆ ಶ್ರೀ -ಸಿರಿ ಮುಕ್ತ-ಮುಕುತ ಮಾಣಿಕ್ಯ -ಮಾಣಿಕ**

# ಪದ್ಯ-೮ ರಾಮಧಾನ್ಯ ಚರಿತೆ -ಕನಕದಾಸರು

**ಕೃತಿಕಾರರ ಪರಿಚಯ -**



ಕನಕದಾಸರ ಕಾಲ ಕ್ರಿ.ಶ.೧೫೦೮ .ಇವರ ಜನ್ಮಸ್ಥಳ ಹಾವೇರಿ ಜಿಲ್ಲೆಯ ಬಾಡ ಗ್ರಾಮ . ಇವರು ಹರಿಭಕ್ತಿಸಾರ ,ರಾಮಧಾನ್ಯಚರಿತೆ ,ಮೋಹನತರಂಗಿಣಿ ,ನಳಚರಿತ್ರೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೇ ನೂರಾರು ಕೀರ್ತನೆಗಳನ್ನು ,ಉಗಾಭೋಗ ,ಸುಳಾದಿಗಳನ್ನೂ ,ಮುಂಡಿಗೆಗಳನ್ನೂ ರಚಿಸಿದ್ದಾರೆ. ಕಾಗಿನೆಲೆ ಆದಿಕೇಶವ ಎನ್ನುವುದು ಇವರ ಕೀರ್ತನೆಗಳ ಅಂಕಿತವಾಗಿದೆ.

**ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.**

೧. ದೇಶಕೆ ಅತಿಶಯವಾದ ಧಾನ್ಯ ಯಾವುದು ?

ಉ: ದೇಶಕೆ ಅತಿಶಯವಾದ ಧಾನ್ಯ ರಾಗಿ. (ನರೆದಲೆಗ )

೨. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದ ?

ಉ: ವ್ರಿಹಿ ಸತ್ತ ಹೆಣದ ಬಾಯಿಗೆ ತುತ್ತು ಎಂದು ಹೇಳಿದ .

೩. ದಾಶರಥಿ ಎಂದರೆ ಯಾರು ?

ಉ: ದಾಶರಥಿ ಎಂದರೆ ದಶರಥನ ಮಗ ಶ್ರೀ ರಾಮ .

೪. ನರೆದಲಗ ಯಾರನ್ನು ಆದರಿಸಿ ಸಲಹುತ್ತದೆ ?

ಉ: ನರೆದಲಗವು ಕ್ಷಾಮ ಬಂದಂತಹ ಸಂದರ್ಭದಲ್ಲಿ ಅನ್ನವಿಲ್ಲದೆ ಬಳಲುವ ಪ್ರಾಣಿಗಳನ್ನು ಆದರಿಸಿ ಸಲಹುತ್ತದೆ.

೫. ಹರಿಹರ ವಿರಂಚಾದಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ ?

ಉ: ರಾಗಿ ಮತ್ತು ಭತ್ತಗಳಲ್ಲಿ ಯಾವುದನ್ನು ಶ್ರೇಷ್ಠ ಎಂದು ತಿಳಿಯಲು ,ಅವುಗಳ ನಡುವಿನ ವ್ಯಾಜ್ಯವನ್ನು ಬಗೆಹರಿಸಲು ಹರಿಹರ ವಿರಂಚಾದಿಗಳನ್ನು ಅಯೋಧ್ಯೆಗೆ ಕರೆಸಲಾಗುತ್ತದೆ.

೬. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ ?

ಉ: ಸೆರೆಗೆ ರಾಗಿ ಮತ್ತು ಭತ್ತಗಳನ್ನು ಹಾಕಲಾಗುತ್ತದೆ.

**ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧.ಶ್ರೇಷ್ಠವೆಂದು ಹೇಳಲಾಗಿರುವ ಧಾನ್ಯಗಳು ಯಾವುವು ?

ಉ: ಕೆಲವರು ಗೋಧಿಯನ್ನು ,ಕೆಲವರು ಸಾಮೆಯನ್ನು ,ನವಣೆಯನ್ನು ,ಕೆಲವರು ಕಂಬನ್ನು ,ಕೆಲವರು ಹಾರಕವನ್ನು ಮತ್ತೆ ಕೆಲವರು ಜೋಳವನ್ನು ,ಕೆಲವರು ರಾಗಿ ಮತ್ತೆ ಕೆಲವರು ಭತ್ತವನ್ನು ಶ್ರೇಷ್ಠವಾದ ಧಾನ್ಯವೆಂದು ತಿಳಿಯುತ್ತಾರೆ ಎಂದು ಗೌತಮ ಮಹರ್ಷಿಗಳು ಶ್ರೀ ರಾಮನ ಬಳಿ ಹೇಳಿದರು.

೨. ಗೌತಮರು ನರೆದಲೆಗನೆ ಶ್ರೇಷ್ಠವೆಂದು ಹೇಳಲು ವ್ರಿಹಿಯು ಹೇಳಿದ್ದೇನು ?

ಉ: ಯಾವ ಧಾನ್ಯ ಶ್ರೇಷ್ಠ ಎಂಬ ವಿಚಾರವಾಗಿ ಗೌತಮನು ನರೆದಲಗನೇ ಹಿತವೆಂದು ಹೇಳಿದಾಗ ದೋಷರಹಿತರು ಈ ರೀತಿಯಾದ ಪಕ್ಷಪಾತವನ್ನು ಮಾಡಬಹುದೇ ?ಎಲ್ಲ ಧರ್ಮದ ಸಾರವನ್ನು ತಿಳಿದವರು ನೀವು ,ಎಲ್ಲ ಧಾನ್ಯಗಳ ಕುರಿತು ನೀವು

ಅರಿತಿಲ್ಲವೇ ?ಈ ರೀತಿಯ ಉಪೇಕ್ಷೆಯನ್ನು ನಮ್ಮ ಕುರಿತು ತೋರಬಹುದೇ ?ಸಾಕು ಮಾಡಿ ,ನೆಲ್ಲು ನಾನಿರಲು ,ಗೋಧಿ ಮೊದಲಾದ ಧಾನ್ಯಗಳಿರಲು ನರೆದಲೆಗನು ಶ್ರೇಷ್ಠ ಎಂದು ಹೇಳುವುದು ಯಾವ ನ್ಯಾಯ ?ಎಂದು ವ್ರಿಹಿಯು ಗೌತಮರನ್ನು ಪ್ರಶ್ನಿಸಿತು .

೩. ವ್ರಿಹಿಯನ್ನು ಯಾವ ಯಾವ ಮಂಗಳ ಕಾರ್ಯಗಳಲ್ಲಿ ಬಳಸಲಾಗುತ್ತದೆ ?

ಉ: ವ್ರಿಹಿಯನ್ನು ಬ್ರಾಹ್ಮಣರು ಉಪನಯನ ಕಾರ್ಯದಲ್ಲಿ ,ಒಳ್ಳೆಯ ವ್ರತಗಳ ಆಚರಣೆಗಳಲ್ಲಿ,ಸುಖಭೋಜನದಲ್ಲಿ ,ಮಂತ್ರಾಕ್ಷತೆಯಾಗಿ ,ಒಳ್ಳೆಯ ಮಂಗಳ ಕಾರ್ಯಗಳಲ್ಲಿ ,ಆರತಿಯಲ್ಲಿ ,ಯಜ್ಞಯಾಗಾದಿಗಳಲ್ಲಿ ,ಅರಮನೆಯಲ್ಲಿ ಸಹ ದೇವರಿಗೆ ನೈವೇಧ್ಯವನ್ನು ಅರ್ಪಿಸುವಾಗ ಬಳಸಲಾಗುತ್ತದೆ.

೪. ನರೆದಲಗನು ವ್ರಿಹಿಯನ್ನು ಏನೆಂದು ಹೀಯಾಳಿಸಿದನು ?

ಉ: ಸತ್ವಹೀನನು ನೀನು ,ಬಡವರನ್ನು ಕಣ್ಣೆತ್ತಿ ಸಹ ನೋಡಲಾರೆ. ಶ್ರೀಮಂತರನ್ನು ಬೆಂಬತ್ತಿ ಹೋಗುವ ಹಂಬಲ ನಿನ್ನದು. ಹೆತ್ತ ಬಾಣಂತಿಯರಿಗೆ ಪಥ್ಯವಾಗಿ ಮತ್ತು ಹೆಣದ ಬಾಯಿಗೆ ತುತ್ತಾಗಿ ಬಳಕೆಯಾಗುವವನು ನೀನು. ಮಳೆಯಿಲ್ಲದೆ ಬರಗಾಲ ಬಂದು ಅನ್ನವಿಲ್ಲದೆ ಪ್ರಾಣಿಗಳು ತೊಳಲಾಡುವ ಸಂದರ್ಭದಲ್ಲಿ ಅವರಿಗೆ ಆಹಾರವಾಗಿ ನಿಲ್ಲುವವನು ನಾನು .ನೀನು ನನಗೆ ಸಮಾನನೇ ಎಂದು ವ್ರಿಹಿಯನ್ನು ನರೆದಲೆಗವು ಹೀಯಾಳಿಸಿತು.

೫.ಶ್ರೀರಾಮನು ಧಾನ್ಯಗಳ ವಿಚಾರದಲ್ಲಿ ಕೈಗೊಂಡ ತೀರ್ಮಾನವೇನು ?

ಉ: ಯಾವ ಧಾನ್ಯವು ಶ್ರೇಷ್ಠ ಎಂಬ ವಿಚಾರಕ್ಕೆ ಧಾನ್ಯಗಳ ನಡುವೆಯೇ ಮನಸ್ತಾಪವಾಗಿ ಪರಸ್ಪರ ಜಗಳವಾಡಲು ,ಶ್ರೀರಾಮನು ವ್ರಿಹಿ ಮತ್ತು ನರೆದಲೆಗನನ್ನು ಆರು ತಿಂಗಳು ಸೆರೆಯಲ್ಲಿಟ್ಟು ತದನಂತರ ಅಯೋಧ್ಯೆಗೆ ಕರೆಸಿ ಯಾರು ಶ್ರೇಷ್ಠರೆಂದು ತೀರ್ಮಾನಿಸುವ ನಿರ್ಧಾರ ಮಾಡಿದನು.

ಏಳೆಂಟು ವಾಕ್ಯಗಳಲ್ಲಿ ಉತ್ತರಿಸಿ.

೧.ಶ್ರೀರಾಮನು ನರೆದಲಗ ಮತ್ತು ವ್ರಿಹಿಯನ್ನು ಸೆರೆಮನೆಗೆ ಹಾಕಲು ಕಾರಣವೇನು ?

ಉ: ರಾವಣಸಂಹಾರದ ನಂತರ ಶ್ರೀರಾಮನು ಅಯೋಧ್ಯೆಗೆ ಮರಳುವಾಗ ಮಾರ್ಗಮಧ್ಯದಲ್ಲಿ ಗೌತಮ ಮುನಿಗಳ ಆಶ್ರಮವನ್ನು ಪ್ರವೇಶಿಸುತ್ತಾನೆ. ಅಲ್ಲಿ ರಾಮನೊಡಗೂಡಿ ಬಂದ ದಾನವ ವಾನರರಿಗೆಲ್ಲ ಗೌತಮರು ಭಕ್ಷ್ಯ ಭೋಜ್ಯಗಳನ್ನಿತ್ತು ಸತ್ಕರಿಸುತ್ತಾರೆ. ಆಗ ಶ್ರೀರಾಮನು ಭೋಜನದಲ್ಲಿ ಬಳಸಿದ ಧಾನ್ಯಗಳನ್ನು ನೋಡುವ ಇಚ್ಚೆ ವ್ಯಕ್ತಪಡಿದಾಗ ಎಲ್ಲ ವಿಧವಾದ ಧಾನ್ಯಗಳನ್ನು ಶ್ರೀರಾಮನ ಸಮ್ಮುಖದಲ್ಲಿ ಕರೆಸಲಾಗುತ್ತದೆ. ಅವುಗಳಲ್ಲಿ ಯಾವ ಧಾನ್ಯ ಶ್ರೇಷ್ಠವೆಂದು ವಿಚಾರಿಸಲಾಗಿ ಒಬ್ಬೊಬ್ಬರು ಒಂದೊಂದು ಧಾನ್ಯ ಶ್ರೇಷ್ಠ ಎಂದು ಹೇಳುವರು ಎಂದು ಗೌತಮರು ಹೇಳಿದಾಗ ಯಾವುದಾದರೂ ಒಂದು ಧಾನ್ಯ ಎಂದು ನಿರ್ಧರಿಸಲಾಗದೇ ಎಂದು ಶ್ರೀರಾಮ ಕೇಳಲು ಗೌತಮರು ನರೆದಲಗವು ಶ್ರೇಷ್ಠ ಎಂದು ಉತ್ತರಿಸುತ್ತಾರೆ. ಆಗ ಸಿಟ್ಟಿಗೆದ್ದ ವ್ರಿಹಿಗವು ಗೌತಮರ ಮಾತನ್ನು ಅಲ್ಲಗಳೆಯುತ್ತ ಎಲ್ಲ ಮಂಗಳ ಕಾರ್ಯಗಳಲ್ಲಿ ಬಳಸಲ್ಪಡುವ ತಾನೇ ಶ್ರೇಷ್ಠ .ನರೆದಲಗವು ಕುಲಹೀನ ಎಂದು ಜರಿಯಲಾರಂಭಿಸುತ್ತದೆ. ಆಗ ಸಿಡಿದೆದ್ದ ನರೆದಲೆಗವು ಬಡವರಿಗೆ ನೆರವಾಗದ ನಿನಗಿಂತ ಬರಗಾಲದಲ್ಲಿ ಪ್ರಾಣಿಗಳನ್ನು ಸಲಹುವ ತಾನೇ ಶ್ರೇಷ್ಠವೆಂದು ವಾದಿಸುತ್ತದೆ. ಇಬ್ಬರೂ ಪರಸ್ಪರ ತಮ್ಮ ತಮ್ಮ ಶ್ರೇಷ್ಠತೆಯನ್ನು ಬಿಂಬಿಸಿಕೊಳ್ಳುತ್ತ ಪರಸ್ಪರರನ್ನು ಜರಿಯುತೊಡಗಿದಾಗ ಇವರ ಅಹಂಕಾರವನ್ನು ಮಣಿಸಲು ಸೆರೆಮನೆಗೆ ಹಾಕುವುದೇ ಸೂಕ್ತ ಎಂದು ಶ್ರೀರಾಮನು ಭಾವಿಸಿ ಆರು ತಿಂಗಳು ಎರಡೂ ಧಾನ್ಯಗಳನ್ನು ಸೆರೆಮನಿಯಲ್ಲಿಡುವುದೇ ಸೂಕ್ತ .ಆ ನಂತರದಲ್ಲಿ ಯಾವುದು ಶ್ರೇಷ್ಠವೆಂದು ತೀರ್ಮಾನಿಸೋಣ ಎಂದು ಹೇಳಿ ನರೆದಲೆಗ ಮತ್ತು ವ್ರಿಹಿಯನ್ನು ಸೆರೆಮನೆಯಲ್ಲಿರಿಸುವ ನಿರ್ಧಾರ ಮಾಡುತ್ತಾನೆ.

೨. ನರೆದಲಗ ಮತ್ತು ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉ: ಗೌತಮರು ನಮ್ಮ ನಾಡಿಗೆ ನರೆದಲಗವೇ ಶ್ರೇಷ್ಠವೆಂದು ಹೇಳಲು ಕುಪಿತನಾದ ವ್ರಿಹಿಯು ನರೆದಲೆಗನನ್ನು ಕುರಿತು ನೀನು ನನಗೆ ಸಮಾನನಾದವನೇ ? ನಮ್ಮ ಕುಂದುಕೊರತೆಗಳೇನು ?ಶ್ರೇಷ್ಠತೆಯೇನು ಎಂಬುದನ್ನು ದಾನವಾಂತಕ ಶ್ರೀರಾಮನು ಬಲ್ಲನು. ನೀನು ಕುಲಹೀನನಾದವನು .ನಿನ್ನ ಪ್ರತಿಷ್ಠೆಯನ್ನು ಸುಡು .ಮತಿ ಹೀನ ನೀನು ಎಂದು ಕೋಪದಿಂದ ಹೇಳುತ್ತ ಬ್ರಾಹ್ಮಣರು ಉಪನಯನ ಕಾರ್ಯದಲ್ಲಿ ,ಒಳ್ಳೆಯ ವ್ರತಗಳ ಆಚರಣೆಯಲ್ಲಿ ,ಸುಖಭೋಜನದಲ್ಲಿ ,ಮಂತ್ರಾಕ್ಷತೆಯಾಗಿ ,ಒಳ್ಳೆಯ ಮಂಗಳ ಕಾರ್ಯಗಳಲ್ಲಿ ,ಆರತಿಯಲ್ಲಿ ,ಯಜ್ಞಯಾಗಾದಿಗಳಲ್ಲಿ ,ಅರಮನೆಯಲ್ಲಿ ಸಹ ದೇವರಿಗೆ ನೈವೇದ್ಯವನ್ನು ಅರ್ಪಿಸುವಾಗ ತನ್ನನ್ನು ಬಳಸುತ್ತಾರೆಂದು ಹೆಮ್ಮೆಯಿಂದ ಹೇಳಿಕೊಂಡಿತು. ಅದಕ್ಕೆ ಪ್ರತಿಯಾಗಿ ಸತ್ವಹೀನನು ನೀನು. ಬಡವರನ್ನು ಕಣ್ಣೆತ್ತಿ ಸಹ ನೋಡಲಾರೆ . ಶ್ರೀಮಂತರನ್ನು ಬೆಂಬತ್ತಿ ಹೋಗುವ ಹಂಬಲ ನಿನ್ನದು . ಹೆತ್ತ ಬಾಣಂತಿಯರಿಗೆ ಪಥ್ಯವಾಗಿ ಮತ್ತು ಹೆಣದ ಬಾಯಿಗೆ ತುತ್ತಾಗಿ ಬಳಕೆಯಾಗುವವನು ನೀನು. ಮಳೆಯಿಲ್ಲದೆ ಬರಗಾಲ ಬಂದು ಅನ್ನವಿಲ್ಲದೆ ಪ್ರಾಣಿಗಳು ತೊಳಲಾಡುವ ಸಂದರ್ಭದಲ್ಲಿ ಅವರಿಗೆ ಆಹಾರವಾಗಿ ನಿಲ್ಲುವವನು ನಾನು. ನೀನು ನನಗೆ ಸಮಾನನೇ ? ನಿನ್ನ ಜನ್ಮ ನಿರರ್ಥಕ ಎಂದು ವ್ರಿಹಿಯನ್ನು ಕುರಿತು ನರೆದಲೆಗವು ಹೇಳಿತು. ಹೀಗೆ ಎರಡೂ ಪರಸ್ಪರ ತಮ್ಮ ತಮ್ಮ ಶ್ರೇಷ್ಠತೆಯನ್ನು ಕುರಿತು ಜಗಳವಾಡಿದವು.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧. " ನಮ್ಮಯ ದೇಶಕತಿಶಯ ನರೆದಲೆಗ ."

ಉ: ಈ ಮೇಲಿನ ವಾಕ್ಯವನ್ನು ಸಾ.ಶಿ. ಮರುಳಯ್ಯನವರು ಸಂಪಾದಿಸಿರುವ ಕನಕದಾಸರ ಕಾವ್ಯ ಭಾಗ -೧ ಕೃತಿಯಿಂದ ಆರಿಸಲಾದ ಕನಕದಾಸ ವಿರಚಿತ ರಾಮಧಾನ್ಯಚರಿತ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ರಾವಣ ಸಂಹಾರದ ನಂತರ ಶ್ರೀರಾಮನು ದಾನವ ವಾನರರೊಡಗೂಡಿ ಅರಮನೆಗೆ ಮರಳುವಾಗ ಮಾರ್ಗಮಧ್ಯದಲ್ಲಿ ಗೌತಮ ಮುನಿಯ ಆಶ್ರಮಕ್ಕೆ ಬಂದನು. ಅಲ್ಲಿ ವಿವಿಧ ಧಾನ್ಯಗಳಿಂದ ತಯಾರಿಸಿದ ಭಕ್ಷ್ಯಗಳ ಸಮಾರಾಧನೆ ಮಾಡಿ ,ತದನಂತರದಲ್ಲಿ ಆ ಭಕ್ಷ್ಯಗಳ ರುಚಿ ತಾರತಮ್ಯದ ಬಗೆಗೆ ಮಾತುಕತೆಯಾದಾಗ ರಾಮನು ಇವುಗಳಲ್ಲಿ ಯಾವ ಧಾನ್ಯ ಶ್ರೇಷ್ಠವೆಂದು ಪ್ರಶ್ನಿಸಲು ಗೌತಮನು ಮೇಲಿನಂತೆ ಉತ್ತರಿಸುತ್ತಾನೆ.

ಸ್ವಾರಸ್ಯ : ನಮ್ಮ ನಾಡಿನ ಜನರಿಗೆ ಸೂಕ್ತವಾದ ಆಹಾರ ಧಾನ್ಯವೆಂದರೆ ರಾಗಿ ಎಂಬ ಭಾವನೆ ಇಲ್ಲಿ ವ್ಯಕ್ತವಾಗಿದೆ.

೨. " ಕುಲಹೀನ ನೀನು ಪ್ರತಿಷ್ಠೆ ಸುಡು ಮತಿಹೀನ ನೀನು. "

ಉ: ಈ ಮೇಲಿನ ವಾಕ್ಯವನ್ನು ಸಾ.ಶಿ. ಮರುಳಯ್ಯನವರು ಸಂಪಾದಿಸಿರುವ ಕನಕದಾಸರ ಕಾವ್ಯ ಭಾಗ -೧ ಕೃತಿಯಿಂದ ಆರಿಸಲಾದ ಕನಕದಾಸ ವಿರಚಿತ ರಾಮಧಾನ್ಯಚರಿತ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಗೌತಮ ಮುನಿಗಳ ಆಶ್ರಮದಲ್ಲಿ ಧಾನ್ಯಗಳಲ್ಲಿ ಯಾವುದು ಶ್ರೇಷ್ಠ ಎಂದು ಚರ್ಚೆಯಾದ ಸಂದರ್ಭದಲ್ಲಿ ಗೌತಮನು ಗೌತಮನು ನಮ್ಮ ನಾಡಿಗೆ ರಾಗಿಯೇ ಉತ್ತಮ ಎಂದು ಉತ್ತರಿಸಲು ವ್ರಿಹಿಗನು ಕೋಪಕ್ಕೆ ಒಳಗಾಗಿ ನರೆದಲೆಗನನ್ನು ಜರಿಯಲು ಪ್ರಾರಂಭಿಸಿತು. ರಾಗಿಯನ್ನು ಬಯ್ಯುತ್ತಾ ವ್ರಿಹಿಗನು ಮೇಲಿನಂತೆ ಹೇಳಿದ ಸಂದರ್ಭ ಇದಾಗಿದೆ.

ಸ್ವಾರಸ್ಯ : ವ್ರಿಹಿಗನು ತನ್ನನ್ನು ಶ್ರೇಷ್ಠವೆಂದು ಕರೆದುಕೊಂಡು ನರೆದಲೆಗನನ್ನು ಕೀಳಾಗಿ ಕಾಣುವ ಸಂದರ್ಭ ಇಲ್ಲಿ ವ್ಯಕ್ತವಾಗಿದೆ.

೩. " ವಿಲಯ ಕಾಲದೊಳನ್ನವಿಲ್ಲದೆ ಅಳಿವ ಪ್ರಾಣಿಗಳನ್ನಾಧರಿಸುವೆ. "

ಉ: ಈ ಮೇಲಿನ ವಾಕ್ಯವನ್ನು ಸಾ.ಶಿ. ಮರುಳಯ್ಯನವರು ಸಂಪಾದಿಸಿರುವ ಕನಕದಾಸರ ಕಾವ್ಯ ಭಾಗ -೧ ಕೃತಿಯಿಂದ ಆರಿಸಲಾದ ಕನಕದಾಸ ವಿರಚಿತ ರಾಮಧಾನ್ಯಚರಿತ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ರಾಗಿ ಭತ್ತಗಳಲ್ಲಿ ಯಾವುದು ಶ್ರೇಷ್ಠವೆಂದು ಚರ್ಚೆಯಾದ ಸಂದರ್ಭದಲ್ಲಿ ಗೌತಮನು ನರೆದಲೆಗನೇ (ರಾಗಿಯೇ ) ಶ್ರೇಷ್ಠವೆಂದು ಹೇಳಲು ಕೋಪದಿಂದ ಭತ್ತವು ಎಲ್ಲ ಮಂಗಳ ಕಾರ್ಯಗಳಲ್ಲಿ ತನ್ನನ್ನು ಬಳಸುವ ಕುರಿತು ಅಭಿಮಾನದ ಮಾತುಗಳನ್ನಾಡಿತು. ಆಗ ನರೆದಲೆಗವು ಮೇಲಿನಂತೆ ಉತ್ತರಿಸಿತು.

ಸ್ವಾರಸ್ಯ : ಕ್ಷಾಮದ ಸಂದರ್ಭದಲ್ಲಿ ಅನ್ನವಿಲ್ಲದೆ ಪ್ರಾಣಿಗಳು ತೊಳಲುವ ಸಂದರ್ಭದಲ್ಲಿ ಅವರನ್ನು ಕಾಪಾಡುವುದು ರಾಗಿಯೇ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. " ಇವರಿರಲಿ ಸೆರೆಯೊಳಗಾರು ತಿಂಗಳು "

ಉ: ಈ ಮೇಲಿನ ವಾಕ್ಯವನ್ನು ಸಾ.ಶಿ. ಮರುಳಯ್ಯನವರು ಸಂಪಾದಿಸಿರುವ ಕನಕದಾಸರ ಕಾವ್ಯ ಭಾಗ -೧ ಕೃತಿಯಿಂದ ಆರಿಸಲಾದ ಕನಕದಾಸ ವಿರಚಿತ ರಾಮಧಾನ್ಯಚರಿತ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಗೌತಮ ಮುನಿಗಳ ಆಶ್ರಮದಲ್ಲಿ ಯಾವ ಧಾನ್ಯ ಶ್ರೇಷ್ಠ ಎಂಬ ವಿಚಾರವಾಗಿ ನರೆದಲೆಗ ಮತ್ತು ವ್ರಿಹಿಗಳು ತಮ್ಮ ತಮ್ಮ ಶ್ರೇಷ್ಠತೆಯ ಕುರಿತು ಪರಸ್ಪರ ಜಗಳವಾಡುತ್ತಿರಲು ಯಾವುದು ಶ್ರೇಷ್ಠವಾದ ಧಾನ್ಯವೆಂದು ತಿಳಿಯಲು ಇವರಿಬ್ಬರನ್ನೂ ಸೆರೆಮನೆಯಲ್ಲಿರಿಸಬೇಕು ಎಂದು ಶ್ರೀರಾಮನು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಸೆರೆಮನೆಯಲ್ಲಿರಿಸಿ ಆರು ತಿಂಗಳ ನಂತರ ಅವರವರ ಶ್ರೇಷ್ಠತೆ ತಾನೇ ತಾನಾಗಿ ಗೋಚರಿಸುವುದೆಂದು ಶ್ರೀರಾಮನು ನಿರ್ಧರಿಸಿದ ಸಂದರ್ಭ ಇದಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಪುರಂದರದಾಸರು : ಪುರಂದರವಿಠಲ : : ಕನಕದಾಸರು : ----- ಕಾಗಿನೆಲೆ ಆದಿಕೇಶವ

೨. ಬಾನಂತಿಯರಿಗೆ : ಪಥ್ಯ : : ಹೆಣದ ಬಾಯಿಗೆ : --- ತುತ್ತು

೩. ವ್ರಿಹಿ :ಭತ್ತ : : ನರೆದಲಗ : -- ರಾಗಿ

೪. ಕ್ಷಿತಿ : ಭೂಮಿ : : ವಿರಂಚಿ : --- ಬ್ರಹ್ಮ

೫. ಸೆರೆಯೊಳಗೆ : ಆಗಮ ಸಂಧಿ : : ತಾನೆಲ್ಲಿ : -- ಲೋಪಸಂಧಿ

ಗುಂಪಿಗೆ ಸೇರದ ಪದ ಬರೆಯಿರಿ.

೧. ಹರಿಭಕ್ತಿಸಾರ, ರಾಮಧಾನ್ಯಚರಿತೆ , ರಾಮಾಶ್ವಮೇಧ , ನಳಚರಿತ್ರೆ ----- ರಾಮಾಶ್ವಮೇಧ

೨. ಕನಕದಾಸರು ,ಪುರಂದರದಾಸರು , ವ್ಯಾಸರಾಯರು ,ಬಸವಣ್ಣ ----- ಬಸವಣ್ಣ

೩. ವ್ರಿಹಿ ,ಗೋಧಿ ,ನೆಲ್ಲು ,ಭತ್ತ ---- ಗೋಧಿ

೪. ಗುಣಸಂಧಿ ,ಆಗಮಸಂಧಿ, ಲೋಪಸಂಧಿ ,ಆದೇಶಸಂಧಿ ------ ಗುಣಸಂಧಿ

ಅಭ್ಯಾಸ ಚಟುವಟಿಕೆ

೧. ಮಾತ್ರೆ ಎಂದರೇನು ?ಉದಾಹರಣೆ ಸಹಿತ ವಿವರಿಸಿ .

ಉ: ಛಂದಶ್ಶಾಸ್ತ್ರದಲ್ಲಿ ಮಾತ್ರೆ ಎಂದರೆ ಕಾಲವನ್ನು ಅಳೆಯುವ ಮಾನ .ಒಂದು ಹ್ರಸ್ವ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವನ್ನು ಒಂದು ಮಾತ್ರಾಕಾಲ ಎಂದು ಕರೆಯುತ್ತಾರೆ. ಒಂದು ದೀರ್ಘ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲವನ್ನು ಎರಡು ಮಾತ್ರಾ ಕಾಲವೆಂದೂ ಕರೆಯುತ್ತಾರೆ.

ಉದಾ : ಅ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲ ಒಂದು ಮಾತ್ರಾಕಾಲ .

ಆ ಅಕ್ಷರವನ್ನು ಉಚ್ಚರಿಸಲು ಬೇಕಾಗುವ ಕಾಲ ಎರಡು ಮಾತ್ರಾಕಾಲ.

೨. ಮಾತ್ರಾಗಣ ಎಂದರೇನು ?ಅದರ ವಿಧಗಳಾವುವು ?-ತಿಳಿಸಿ .

ಉ: ಪದ್ಯದಲ್ಲಿ ಮಾತ್ರೆಗಳ ಆಧಾರದ ಮೇಲೆ ಗಣ ವಿಭಾಗ ಮಾಡುವದನ್ನು ಮಾತ್ರಾಗಣ ಎನ್ನುವರು. ಮಾತ್ರಾಗಣದಲ್ಲಿ ಮೂರು ಮಾತ್ರೆಗಳ ಗಣ ,ನಾಲ್ಕು ಮಾತ್ರೆಗಳ ಗಣ ಮತ್ತು ಐದು ಮಾತ್ರೆಗಳ ಗಣಗಳಿರುತ್ತವೆ.

೩. ಕಂದಪದ್ಯದ ಲಕ್ಷಣಗಳೇನು ?

ಉ:ಕಂದಪದ್ಯವು ನಾಲ್ಕು ಸಾಲುಗಳ ಪದ್ಯವಾಗಿದೆ. ಇದರಲ್ಲಿ ಒಂದು ಮತ್ತು ಮೂರನೆಯ ಸಾಲುಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ಮೂರುಗಣಗಳಿರುತ್ತವೆ. ಎರಡು ಮತ್ತು ನಾಲ್ಕನೆಯ ಸಾಲುಗಳು ಪರಸ್ಪರ ಸಮವಾಗಿದ್ದು ನಾಲ್ಕು ಮಾತ್ರೆಗಳ ಐದು ಗಣಗಳಿರುತ್ತವೆ.

೪. ಷಟ್ಪದಿ ಎಂದರೇನು ?ಭಾಮಿನಿ ಷಟ್ಪದಿಯ ಲಕ್ಷಣಗಳೇನು ?

ಉ: ಷಟ್ಪದಿಯು ಆರು ಸಾಲುಗಳ ಪದ್ಯವಾಗಿದೆ. ಇದರ ೧,೨ ಮತ್ತು ೪,೫ ಸಾಲುಗಳು ಸಮವಾಗಿರುತ್ತವೆ. ೩ ಮತ್ತು ೬ ನೆಯ ಸಾಲುಗಳು ಪರಸ್ಪರ ಸಮವಾಗಿರುತ್ತವೆ ಕೊನೆಯಲ್ಲಿ ಗುರು ಇರುತ್ತದೆ.

ಭಾಮನಿ ಷಟ್ಪದಿಯ ೧,೨,೪ ಮತ್ತು ೫ ನೆಯ ಸಾಲುಗಳು ಪರಸ್ಪರ ಸಮವಾಗಿದ್ದು ೧೪ ಮಾತ್ರ‌ಗಳು ೩,೪ ಮಾತ್ರೆಗಳ ಎರಡೆರಡು ಗಣಗಳು ಇರುತ್ತವೆ. ೩ ಮತ್ತು ೬ ನೆಯ ಸಾಲುಗಳು ಪರಸ್ಪರ ಸಮವಾಗಿದ್ದು ೨೩ ಮಾತ್ರೆಗಳು ೩ ಮತ್ತು ೪ ಮಾತ್ರೆಗಳ ಮೂರು ಮೂರು ಗಣಗಳು ಕೊನೆಯಲ್ಲಿ ಗುರುವೂ ಇರುತ್ತವೆ.

ರಾಮಧಾನ್ಯಚರಿತೆ ಪದ್ಯದ ಮೊದಲ ನುಡಿಗೆ ಪ್ರಸ್ತಾರ ಹಾಕಿ ಗಣವಿಭಾಗಿಸಿ ಛಂದಸ್ಸಿನ ಹೆಸರು ಬರೆಯಿರಿ.

UUU | _ U U| _ U | U U UU|<br>
ಕೆಲರು| ಗೋದಿಯ| ಸಾಮೆ| ಯನು ಕೆಲ |<br>
UUU UUUU | _ U | _ UU<br>
ಕೆಲರು| ನವಣೆಯ| ಕಂಬು | ಜೋಳವ<br>
UU U| _ UU| _ U | UUUU | _ U | UUUU| _<br>
ಕೆಲರು |ಹಾರಕ| ವೆಂದು| ಕೆಲವರು| ನೆಲ್ಲ| ನತಿಶಯ|ವ<br>
UUU | UUUU| UUU | UUUU|<br>
ಕೆಲರು| ನರೆದಲೆ |ಗನನು | ಪತಿಕರಿ<br>
UUU | _ U U | UUU| U U U U<br>
ಸಲದ| ನೋಡಿದ| ನೃಪತಿ| ಯದರೊಳು<br>
UUU | U U _ | _ U| _ _ | UUU| _ UU | _<br>
ಹಲವು| ಮತವೇ| ಕೊಂದ|ನೇ ಪೇ|ಳೆನಲು| ಗೌತಮ|ನು

ಛಂದಸ್ಸು - ಭಾಮನಿ ಷಟ್ಪದಿ